ಶುಕ್ರವಾರ, ಜುಲೈ 8, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಶಾಬಾಶ್ ಮಿಥು' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ತಾಪ್ಸಿ ಪನ್ನು ಪಾಲ್ಗೊಂಡಿದ್ದರು



ಪಿಎಸ್‌ಐ ನೇಮಕಾತಿ ಅಕ್ರಮ: ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಕಾಂಗ್ರೆಸ್ ಪ್ರತಿಭಟನೆ

‘ಪ್ರಭಾವಿಗಳ ಹೆಸರು ಬಹಿರಂಗಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಎಸ್‌ಐ ನೇಮಕ ಅಕ್ರಮದಲ್ಲಿ ಬಿಜೆಪಿ ಪ್ರಮುಖರು-ಪ್ರಭಾವಿ ಸಚಿವರು, ನಾಯಕರು ಭಾಗಿಯಾಗಿದ್ದು, ಅವರ ಹೆಸರು ಬಹಿರಂಗಪಡಿಸಬೇಕು ಮತ್ತು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ರಾಜ್ಯ ಕಾಂಗ್ರೆಸ್ ನಾಯಕರು ಹೋರಾಟ ತೀವ್ರಗೊಳಿಸಿದ್ದಾರೆ.

ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆ ಬಳಿ ಗುರುವಾರ ಪ್ರತಿಭಟನೆ ನಡೆಸಿದ ‘ಕೈ’ ನಾಯಕರು, ‘ಭ್ರಷ್ಟ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ’, ‘ರಕ್ಷಿಸಿ, ರಕ್ಷಿಸಿ ನ್ಯಾಯಾಧೀಶರನ್ನು ರಕ್ಷಿಸಿ’ ಎಂದು ಘೋಷಣೆ ಕೂಗಿದರು.

‘ಮುಖ್ಯಮಂತ್ರಿ ಕಚೇರಿಯಿಂದ ಹಿಡಿದು ಗೃಹ ಸಚಿವಾಲಯ, ಪೊಲೀಸ್ ಅಧಿಕಾರಿಗಳ ಕಚೇರಿಗಳ ಪ್ರತಿನಿಧಿಗಳು ಈ ಹಗರಣದಲ್ಲಿ ಭಾಗಿಯಾಗಿದ್ದಾರೆ. ಬಂಧಿತರಿಂದ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 164ರ (ತಪ್ಪೊಪ್ಪಿಗೆ ಮತ್ತು ಹೇಳಿಕೆಗಳ ದಾಖಲು) ಅಡಿ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

‘ಕ್ಯಾಮರಾಗಳನ್ನು ಬಂದ್ ಮಾಡಿ ರಹಸ್ಯವಾಗಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಯಾರು ಯಾವ ಅಧಿಕಾರಿಗಳನ್ನು ಯಾವ ಕಚೇರಿಯಲ್ಲಿ, ಹೋಟೆಲ್‌ನಲ್ಲಿ ಭೇಟಿಯಾಗಿದ್ದರು ಎನ್ನುವುದು ಗೊತ್ತಿದೆ. ಅಕ್ರಮದಲ್ಲಿ ಭಾಗಿಯಾದ ಅಭ್ಯರ್ಥಿಗಳನ್ನು ಯಾವ ಸಚಿವರು ವಿಚಾರಣೆಯಿಂದ ರಕ್ಷಿಸಿದ್ದರು, 20-25 ದಿನಗಳ ಬಳಿಕ ಅದೇ ಸಚಿವರು ಆ ಅಭ್ಯರ್ಥಿಗೆ ಹಣ ಹಿಂದಿರುಗಿಸಲಾಗುವುದು ಎಂದು ಹೇಳಿ ಶರಣಾಗತಿ ಮಾಡಿಸಿದ್ದರು ಎನ್ನುವುದೂ ಗೊತ್ತು’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಈ ಹಗರಣದ ಕಿಂಗ್ ಪಿನ್‌ಗಳು ಹೊರಗಡೆ ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಅಮೃತ್ ಪೌಲ್ ಅವರನ್ನು ಬಂಧಿಸಿದ ನಂತರ ವಿಚಾರಣೆಗೆ ಒಳಪಡಿಸದೇ ಇರುವುದು ಅತಿ ದೊಡ್ಡ ಲೋಪ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಈ ಹಗರಣವನ್ನು ಮುಚ್ಚಿ ಹಾಕಲು ಯತ್ನಿಸಿದ್ದಾರೆ. ನ್ಯಾಯಾಂಗ ತನಿಖೆಗೆ ಒಪ್ಪಿಸುವ ತನಕ ನಮ್ಮ ಹೋರಾಟ ನಿಲ್ಲುವುದಿಲ್ಲ’ ಎಂದರು.

ಕಾಂಗ್ರೆಸ್ ಮುಖಂಡರಾದ ಕಾಗೋಡು ತಿಮ್ಮಪ್ಪ, ಪಿ.ಎಂ. ನರೇಂದ್ರಸ್ವಾಮಿ, ವಿ.ಎಸ್. ಉಗ್ರಪ್ಪ, ಪ್ರಕಾಶ್ ರಾಥೋಡ್, ನಾರಾಯಣಸ್ವಾಮಿ, ನಾಗರಾಜ್ ಯಾದವ್ ಇದ್ದರು.



ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಭಾಗಿಯಾಗಿರುವ ಸಚಿವರು, ಪ್ರಭಾವಿಗಳ ಹೆಸರು ಬಹಿರಂಗಪಡಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸುರಿಯುತ್ತಿದ್ದ ಮಳೆಯ ಮಧ್ಯೆಯೇ ಕಾಂಗ್ರೆಸ್ ಮುಖಂಡರು ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಇದ್ದರು –ಪ್ರಜಾವಾಣಿ ಚಿತ್ರ

ಸಿಐಡಿ ವಿಚಾರಣೆಗೆ ಪೌಲ್ ಅಸಹಕಾರ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇರೆಗೆ ಬಂಧನಕ್ಕೆ ಒಳಗಾಗಿರುವ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮೃತ್ ಪೌಲ್ ಸಿಐಡಿ ತನಿಖೆಗೆ ಅಸಹಕಾರ ತೋರುತ್ತಿದ್ದು, ತನಿಖಾಧಿಕಾರಿಯ ಪ್ರಶ್ನೆಗೆ ನಿರಾಕರಣೆಯ ಉತ್ತರ ನೀಡುತ್ತಿದ್ದಾರೆ.

ನಾಲ್ಕು ದಿನಗಳಿಂದ ಸಿಐಡಿ ವಶದಲ್ಲಿರುವ ಪೌಲ್, ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗೆ ಸಮಯ ಕೇಳುತ್ತಿದ್ದಾರೆ. ‘ತನಗೆ ಆರೋಗ್ಯ ಸರಿಯಿಲ್ಲ’ ಎಂದು ಹೇಳುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಬಂಧಿತ ಶಾಂತಕುಮಾರ್ ಹೇಳಿಕೆ, ತನಿಖೆಯಲ್ಲಿ ಸಂಗ್ರಹಿಸಿರುವ ದಾಖಲೆ ಆಧಾರದಲ್ಲಿ ಪೌಲ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಚಿಕ್ಕಬಳ್ಳಾಪುರ ವರದಿ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧಿಸಲಾಗಿರುವ ಪೊಲೀಸ್ ನೇಮಕಾತಿ ವಿಭಾಗ ಎಡಿಜಿಪಿಯಾಗಿದ್ದ ಅಮೃತ್ ಪೌಲ್ ಅವರಿಗೆ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಬಳಿ ಜಮೀನು ಕೊಡಿಸಿದ್ದ ಜಾತವಾರ ಗ್ರಾಮದ ಜಗದೀಶ್ ಅವರನ್ನು ಸಿಐಡಿ ಅಧಿಕಾರಿಗಳ ತಂಡ ಗುರುವಾರ ವಿಚಾರಣೆಗೆ ಒಳಪಡಿಸಿದೆ.

ಪ್ರಕರಣ ಮುಚ್ಚಿಹಾಕಿದ್ದೇ ಕಾಂಗ್ರೆಸ್ ಸಾಧನೆ: ಬೊಮ್ಮಾಯಿ

ಬೆಂಗಳೂರು: ಅಧಿಕಾರದಲ್ಲಿದ್ದಾಗಲೆಲ್ಲ ಪಕ್ಷಪಾತ, ಲಾಬಿಗಳಿಗೆ ಮಣಿದ ಕಾಂಗ್ರೆಸ್ ನಾಯಕರು ಅಪರಾಧಿಗಳನ್ನು ರಕ್ಷಿಸಿದ್ದಲ್ಲದೇ, ಪ್ರಕರಣಗಳನ್ನು ಮುಚ್ಚಿಹಾಕಿ ಅಪರಾಧ ಸ್ಥಾನದಲ್ಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.W

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಅವರ ಕಾಲದಲ್ಲಿ ನಡೆದ ಪಿಎಸ್‌ಐ ಪ್ರಕರಣದಲ್ಲಿ ಡಿಐಜಿ ಒಬ್ಬರು ಭಾಗಿಯಾಗಿದ್ದರು. ಎಫ್‌ಐಆರ್‌ನಲ್ಲಿ ಹೆಸರಿದ್ದರೂ ಅವರ ವಿಚಾರಣೆ, ಬಂಧನ, ಅಮಾನತು ಯಾವುದನ್ನೂ ಮಾಡಲಿಲ್ಲ. ಇವತ್ತಿನವರೆಗೆ ಪಾಠ ಹೇಳುವ ಅಧಿಕಾರ ಅವರಿಗಿಲ್ಲ ಎಂದರು.

‘ಸರ್ಕಾರಿ ಅಭಿಯೋಜಕರ ನೇಮಕಾತಿಗಾಗಿ ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆಯಲ್ಲಿ 61 ಜನರ ಹೊರಗಿನಿಂದ ಉತ್ತರ ಬರೆಸಿದ್ದರು ಎಂದು ನ್ಯಾಯಾಲಯದಲ್ಲಿ ನಿರೂಪಿತವಾಗಿತ್ತು. ಆಗ, ಒಬ್ಬರನ್ನೂ ಅವರು ಅಮಾನತು ಮಾಡಲಿಲ್ಲ. ನೇಮಕಾತಿವರದಿಂದ ₹18 ಕೋಟಿ ವಸೂಲಿ ಮಾಡಿದ್ದರು.

ಇದು ಕಾಂಗ್ರೆಸ್ ವೈಖರಿ. ನಾನು ಗೃಹ ಸಚಿವನಾದ ನಂತರ ಅವರನ್ನು ಅಮಾನತು ಮಾಡಿದೆ. ಈಗ ನ್ಯಾಯಾಂಗ ತನಿಖೆ ನಡೆಸಬೇಕು ಎನ್ನುತ್ತಿರುವ ಅವರು, ಅವರ ಎಲ್ಲ ಪ್ರಕರಣಗಳನ್ನು ಏಕೆ ವಹಿಸಿರಲಿಲ್ಲ’ ಎಂದು ಪ್ರಶ್ನಿಸಿದರು.

ಸಿಐಡಿ ಸಮರ್ಥವಾಗಿರುವುದರಿಂದಲೇ, ಪಿಎಸ್‌ಐ ಅಕ್ರಮದಲ್ಲಿ 20ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ಬಂಧಿಸಲಾಗಿದೆ. ನ್ಯಾಯಾಂಗ ತನಿಖೆಯಾದರೆ ಪ್ರಕ್ರಿಯೆ ವಿಳಂಬವಾಗುತ್ತಿತ್ತು, ಈಗ ನಡೆಯುತ್ತಿರುವ ತನಿಖೆಯು ನ್ಯಾಯಾಲಯದಿಂದ ಮೇಲ್ವಿಚಾರಣೆಗೆ ಒಳಪಟ್ಟಿದೆ. ನ್ಯಾಯಾಲಯಕ್ಕೆ ಪ್ರಗತಿಯ ಬಗ್ಗೆ ವರದಿ ಸಲ್ಲಿಸಲಾಗುತ್ತಿದೆ. ನಮ್ಮ ಸರ್ಕಾರ ನಿಷ್ಪಕ್ಷಪಾತವಾಗಿ, ನಿಷ್ಠುರವಾಗಿ ಕ್ರಮ ಕೈಗೊಳ್ಳುತ್ತಿದ್ದು ಅಧಿಕಾರವನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದರಿಂದ ಈ ಪ್ರಕರಣ ಬಯಲಿಗೆ ಬಂದಿದೆ. ಈಗಾಗಲೇ ಕಾಂಗ್ರೆಸ್ ಕಾಲದ ಹಗರಣಗಳು ಹೊರಗೆ ಬಂದಿವೆ. ಕಾಲಕಾಲಕ್ಕೆ ಇನ್ನಷ್ಟು ಹೊರಬರಲಿವೆ ಎಂದರು.

ಸುದ್ದಿ 2 ನಿಮಿಷ

ಬಿಜೆಪಿ ಶಾಸಕರು, ಮುಖಂಡರ ಮನೆ ಎದುರು ಧರಣಿ 13ರಂದು

ಕಲಬುರಗಿ: ‘ಈಡಿಗ ಸಮುದಾಯಕ್ಕೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸೇಂದಿ ಇಳಿಸಲು ಅವಕಾಶ ನೀಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲರಾದ ಸ್ಥಳೀಯ ಬಿಜೆಪಿ ಶಾಸಕರು, ಮುಖಂಡರ ಮನೆ ಎದುರು ಜುಲೈ 13ರಂದು ಧರಣಿ ನಡೆಸಲಾಗುವುದು’ ಎಂದು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

‘ಜೂನ್ 25ರಂದು ಈಡಿಗ ಸಮುದಾಯದಿಂದ ಪ್ರತಿಭಟನೆ ಹಮ್ಮಿಕೊಂಡಿದ್ದಾಗ ಸ್ಥಳಕ್ಕೆ ಬಂದು, ರಾಜ್ಯ ಸರ್ಕಾರದ ಜೊತೆ ಚರ್ಚಿಸಿ ಬೇಡಿಕೆಗಳನ್ನು ಜುಲೈ 5ರೊಳಗೆ ಈಡೇರಿಸಲಾಗುವುದು ಎಂದು ಬಿಜೆಪಿ ಶಾಸಕರಾದ ಸುಭಾಷ್ ಗುತ್ತೇದಾರ, ಬಸವರಾಜ ಮತ್ತಿಮೂಡ, ಬಿ.ಜಿ.ಪಾಟೀಲ, ಮುಖಂಡರಾದ ಬಾಬುರಾವ ಚಿಂಚನಸೂರ, ಮಾಲೀಕಯ್ಯ ಗುತ್ತೇದಾರ ಭರವಸೆ ನೀಡಿದ್ದರು. ಆದರೆ, ಅವರು ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.



‘ಸರ್ಕಾರದ ಮೇಲೆ ಒತ್ತಡ ಹೇರಲು ಜುಲೈ 27ರಂದು ಬಸವಕಲ್ಯಾಣದ ಬೇಟಬಾಲ್ಕುಂದಾದಿಂದ ಪಾದಯಾತ್ರೆ ಆರಂಭಿಸಿ, 31ರಂದು ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಎದುರು ಯಾತ್ರೆ ಪೂರ್ಣಗೊಳಿಸಲಾಗುವುದು. ನಂತರ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡಲಾಗುವುದು’ ಎಂದು ತಿಳಿಸಿದರು.

ಗ್ರಾಮೀಣ ಕೃಪಾಂಕ ಶಿಕ್ಷಕರ ವೇತನ ಬಡ್ತಿಗೆ ಸಮ್ಮತಿ

ಬೆಂಗಳೂರು: ಗ್ರಾಮೀಣ ಕೃಪಾಂಕದ ವಿಶೇಷ ನಿಯಮಗಳ ಅನ್ವಯ ನೇಮಕಗೊಂಡ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ 2013ರಲ್ಲಿ ಸಚಿವ ಸಂಪುಟ ಸಭೆ ತೆಗೆದುಕೊಂಡ ನಿರ್ಣಯದಂತೆ ಎರಡು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲು ಸರ್ಕಾರ ಸಮ್ಮತಿಸಿದೆ.

1997-98ನೇ ಸಾಲಿನಲ್ಲಿ ಶೇ 10ರಷ್ಟು ಗ್ರಾಮೀಣ ಕೃಪಾಂಕ ಪಡೆದು ನೇಮಕವಾಗಿದ್ದ ಶಿಕ್ಷಕರ ಪಟ್ಟಿಯನ್ನು ಸುಪ್ರೀಂಕೋರ್ಟ್ ಆದೇಶದಂತೆ ಪರಿಷ್ಕರಿಸಿ, ನಗರ ಪ್ರದೇಶದ ಅರ್ಹ ಅಭ್ಯರ್ಥಿಗಳಿಗೆ 2003ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಆಗ ಪಟ್ಟಿಯಿಂದ ಹೊರಗುಳಿದ 1,700 ಶಿಕ್ಷಕರನ್ನು ವಜಾಗೊಳಿಸಲಾಗಿತ್ತು. ನಾಲ್ಕು ತಿಂಗಳ ನಂತರ ಮಾನವೀಯತೆ ದೃಷ್ಟಿಯಿಂದ ಅವರಿಗೆ ಮತ್ತೆ ಕೆಲಸ ನೀಡಲಾಗಿತ್ತು. ಪರಿಷ್ಕೃತ ಪಟ್ಟಿಯಲ್ಲಿ ಸ್ಥಾನ ಪಡೆದ ನಗರ ಪ್ರದೇಶದ ಅಭ್ಯರ್ಥಿಗಳ ಸೇವೆಯನ್ನು 1997-98ರಿಂದಲೇ ಪೂರ್ವಾನ್ವಯ ಮಾಡಿದ್ದ ಸರ್ಕಾರ, ಮರು ನೇಮಕಗೊಂಡ ಗ್ರಾಮೀಣ ಶಿಕ್ಷಕರ ವಿಷಯದಲ್ಲಿ ತಾರತಮ್ಯ ನೀತಿ ಅನುಸರಿಸಿತ್ತು. ಈ ತಾರತಮ್ಯದ ವಿರುದ್ಧ ಶಿಕ್ಷಕರು ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ.

ಗ್ರಾಮೀಣ ಕೃಪಾಂಕ ಆಧಾರಿತ ನೌಕರರು ಗುರುವಾರ ಸಲ್ಲಿಸಿದ ಮನವಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಜತೆ ನಡೆಸಿದ ಮಾತುಕತೆಯ ಫಲವಾಗಿ ಸರ್ಕಾರ, ಸೇವಾ ಜ್ಯೇಷ್ಠತೆ, ಪಿಂಚಣಿಗೆ ಹಿಂದಿನ ಸೇವೆ ಪರಿಗಣಿಸಲು ಒಪ್ಪಿಗೆ ನೀಡಿದೆ.



₹1 ಲಕ್ಷ ಲಂಚ: ಪಿಎಸ್‌ಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲಾಗಿದ್ದ ಪ್ರಕರಣ ಮುಕ್ತಾಯಗೊಳಿಸಲು ₹1 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದಲ್ಲಿ ಬಿಎಂಟಿಎಫ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಬೇಬಿ ಓಲೇಕಾರ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ.

ಹೊರಮಾವು ಅಗರ ಗ್ರಾಮದಲ್ಲಿ ರಸ್ತೆ ನಿರ್ಮಾಣ ವಿಚಾರಕ್ಕೆ ಬೆನ್ಸನ್‌ಟೌನ್ ನಿವಾಸಿಯೊಬ್ಬರ ವಿರುದ್ಧ ಬಿಎಂಟಿಎಫ್ ಠಾಣೆಯಲ್ಲಿ 2019ರಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಮುಕ್ತಾಯ ಆಗಿರುವ ಬಗ್ಗೆ ಹಿಂದಿನ ಇನ್‌ಸ್ಪೆಕ್ಟರ್ ತಿಳಿಸಿದ್ದರೂ, ಚಾಲ್ತಿಯಲ್ಲಿದೆ ಎಂದು ಇದೇ ಠಾಣೆಯ ಕಾನ್‌ಸ್ಟೆಬಲ್ ಶ್ರೀನಿವಾಸ್ ಹೇಳಿದ್ದರು. ಮುಕ್ತಾಯಗೊಳಿಸಲು ಇನ್‌ಸ್ಪೆಕ್ಟರ್ ಪರವಾಗಿ ₹1 ಲಕ್ಷ ಲಂಚದ ಬೇಡಿಕೆಯನ್ನು ಇಟ್ಟಿದ್ದರು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬೇಬಿ ಅವರ ಪರವಾಗಿ ಶ್ರೀನಿವಾಸ್ ಅವರು ಗುರುವಾರ ಲಂಚ ಪಡೆಯುತ್ತಿದ್ದಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು, ಇಬ್ಬರನ್ನೂ ಬಂಧಿಸಿದ್ದಾರೆ. ಲಂಚದ ಹಣ ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಹಳಿಗೆ ಮರಳಿದ ಕ್ಯಾಂಪಸ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳ ಕ್ಯಾಂಪಸ್‌ಗಳು ತಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶ ದೊರಕಿಸುವಲ್ಲಿ ಯಶಸ್ಸು ಕಾಣುತ್ತಿದ್ದು, ಕೋವಿಡ್ ಪೂರ್ವದ ಸ್ಥಿತಿಗೆ ತಲುಪುತ್ತಿವೆ.

ಹಲವು ಕಂಪನಿಗಳು ಈ ವರ್ಷ ಆನ್‌ಲೈನ್ ನೇಮಕಾತಿ ವಿಧಾನಕ್ಕೆ ಅಂಟಿಕೊಂಡಿದ್ದರೂ, 2022ರ ಬ್ಯಾಚ್ ಪದವೀಧರರು ತಮ್ಮ ಹಿಂದಿನ ವಿದ್ಯಾರ್ಥಿಗಳಿಗಿಂತಲೂ ಉತ್ತಮ ಕೊಡುಗೆಗಳನ್ನು ಪಡೆದಿದ್ದಾರೆ. ಹೆಚ್ಚಿನ ಪ್ಯಾಕೇಜ್‌ಗಳು ವಾರ್ಷಿಕ ಸರಾಸರಿ ₹ 14 ಲಕ್ಷದಿಂದ ₹ 65 ಲಕ್ಷದವರೆಗೆ ಇದೆ ಎಂದು ಕ್ಯಾಂಪಸ್ ಆಯ್ಕೆ ಪೂರ್ಣಗೊಳಿಸಿದ ಕಾಲೇಜುಗಳ ಆಡಳಿತ ಮಂಡಳಿಗಳು ಹೇಳಿಕೊಂಡಿವೆ.

ಕೆಲವು ಕಾಲೇಜುಗಳು ದಾಖಲೆ ನಿಯೋಜನೆಗೂ ಸಾಕ್ಷಿಯಾಗಿವೆ. ಶತಮಾನದಷ್ಟು ಹಳೆಯದಾದ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷ 217 ಹೆಚ್ಚುವರಿ ವಿದ್ಯಾರ್ಥಿಗಳು ಉದ್ಯೋಗದ ಕೊಡುಗೆಗಳನ್ನು ಪಡೆದಿದ್ದಾರೆ. 2021-22ನೇ ಸಾಲಿನಲ್ಲಿ 435 ವಿದ್ಯಾರ್ಥಿಗಳು ಅವಕಾಶ ಪಡೆದಿದ್ದರು. ಈ ಬಾರಿ 652 ವಿದ್ಯಾರ್ಥಿಗಳಿಗೆ ಅವಕಾಶ ದೊರೆತಿದೆ. ಇದು ಆರು ವರ್ಷಗಳಲ್ಲೇ ದಾಖಲೆ ಎಂದು ಕಾಲೇಜಿನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಿಇಎಸ್ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಭೇಟಿ ನೀಡಿದ ಕಂಪನಿಗಳ ಸಂಖ್ಯೆ ಶೇ 42ರಷ್ಟು ಹೆಚ್ಚಾಗಿದೆ. 1,315 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಅವರಲ್ಲಿ ಹಲವರು ಒಂದಕ್ಕಿಂತ ಹೆಚ್ಚು ಅವಕಾಶಗಳನ್ನು ಪಡೆದಿದ್ದಾರೆ. ದಯಾನಂದ ಸಾಗರ್ ಕಾಲೇಜಿನ ವಿದ್ಯಾರ್ಥಿಗಳು ಶೇ 20ರಷ್ಟು ವೇತನ ಹೆಚ್ಚಳದ ಉದ್ಯೋಗ ಪಡೆದಿದ್ದಾರೆ.

ವಿವಿಧ ಸ್ಥಾಪಿತ ಕೌಶಲ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಹೆಚ್ಚಿನ ಕಂಪನಿಗಳು ಪ್ರತಿಭಾವಂತರಿಗೆ ಮಣೆ ಹಾಕುತ್ತಿವೆ. ಯಂತ್ರ ಕಲಿಕೆ, ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್ ಮತ್ತು ಆಟೊಮೇಷನ್, ಡೇಟಾ ಅನಾಲಿಟಿಕ್ಸ್, ಪೆಗಾ, ಐಒಟಿ, ಬ್ಲಾಕ್ ಚೈನ್ ಮತ್ತಿತರ ಸ್ಥಾಪಿತ ಕೌಶಲಗಳನ್ನು ಕಂಪನಿಗಳು ಹುಡುಕುತ್ತಿದ್ದವು. ಕೌಶಲ ಹೊಂದಿರುವ ವಿದ್ಯಾರ್ಥಿಗಳಿಗೆ ನೀಡುವ ಪ್ಯಾಕೇಜ್ ಇತರರಿಗೆ ಹೋಲಿಸಿದರೆ ಹೆಚ್ಚಾಗಿವೆ ಎನ್ನುತ್ತಾರೆ ಕಾಲೇಜಿನ ಪ್ರಾಧ್ಯಾಪಕರು.



ರಾಜ್ಯಸಭೆಗೆ ನಾಮಕರಣಗೊಂಡಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನಲ್ಲಿ ಗುರುವಾರ ಅಭಿನಂದಿಸಿದರು

‘ಬಿಲ್ ಪಾವತಿಗೆ ಕಾಲಾವಕಾಶ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಶುಲ್ಕ ಪಾವತಿಗೆ ಬಿಲ್ ನೀಡಿದ ದಿನದಿಂದ ಆರು ತಿಂಗಳು ಕಾಲಾವಕಾಶವಿರುತ್ತದೆ ಎನ್ನುವ ಸುಳ್ಳು ಮಾಹಿತಿ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇಂತಹ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಬೆಸ್ಕಾಂ ಗ್ರಾಹಕರಿಗೆ ಮನವಿ ಮಾಡಿದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಕಾಲಕಾಲಕ್ಕೆ ಅನುಮೋದಿಸುವ ದರದಲ್ಲಿ ಗ್ರಾಹಕರು ಬಳಸುವ ವಿದ್ಯುತ್‌ಗೆ ಬೆಸ್ಕಾಂ ಶುಲ್ಕ ಪಡೆಯುತ್ತಿದೆ. ಬಿಲ್ ನೀಡಿದ ದಿನದಿಂದ ಪಾವತಿಸಲು 15 ದಿನಗಳ ಕಾಲಾವಕಾಶವಿರುತ್ತದೆ ಎಂದು ತಿಳಿಸಿದೆ.

ಗ್ರಾಹಕರಿಗೆ ನೀಡುವ ಮಾಸಿಕ ಬಿಲ್‌ನ ಹಿಂಬದಿ ಸೂಚನೆಯಲ್ಲಿ ಅಂತಿಮ ಗಡುವು, ಬಿಲ್ ವಿತರಿಸಿದ ದಿನದಿಂದ 15 ದಿನಗಳ ಅವಧಿಯಾಗಿರುತ್ತದೆ ಎಂದು ನಮೂದಿಸಲಾಗಿದೆ. ನಿಗದಿತ ಅವಧಿ ಒಳಗೆ ಹಣ ಪಾವತಿಸದಿದ್ದಲ್ಲಿ, ಗಡುವು ದಿನಾಂಕದ ನಂತರ 15 ದಿನಗಳ ಕಾಲಾವಧಿಯ ನೋಟಿಸ್ ಜಾರಿ ಮಾಡಲಾಗುತ್ತದೆ. ಬಾಕಿ ಪಾವತಿಸದಿದ್ದರೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವ ಅಧಿಕಾರವನ್ನು ಬೆಸ್ಕಾಂ ಹೊಂದಿರುತ್ತದೆ ಎಂದು ನಿರ್ದೇಶಕರು (ಹಣಕಾಸು) ಸ್ಪಷ್ಟಪಡಿಸಿದ್ದಾರೆ.

ಆನ್ ಲೈನ್ ವಂಚನೆ: ಎಚ್ಚರವಹಿಸಲು ಸೂಚನೆ

ಕೆಲವರು ಬೆಸ್ಕಾಂ ಗ್ರಾಹಕರಿಗೆ ಆನ್‌ಲೈನ್ ಮೂಲಕ ವಂಚಿಸುತ್ತಿರುವುದು ಸಹ ಗೊತ್ತಾಗಿದೆ. ಬಿಲ್ ಪಾವತಿಸದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಎಸ್‌ಎಂಎಸ್ ಕಳುಹಿಸಿ ವಂಚಿಸುವ ಆನ್‌ಲೈನ್ ವಂಚಿಸುವವರ ಜಾಲದ ಬಗ್ಗೆ ಎಚ್ಚರ ವಹಿಸುವಂತೆ ಬೆಸ್ಕಾಂ ಕೋರಿದೆ.

‘ಗೊತ್ತಾಯ್ತು, ಎಲ್ಲಿಯೂ ನ್ಯಾಯ ಸಿಗೊಲ್ಲ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ತಮ್ಮನ ಹತ್ಯೆಯ ತನಿಖೆ ವಿಚಾರದಲ್ಲಿ ಏನು ನಡೆಯುತ್ತಿದೆ ಎಂದು ನಾವು ಕೇಳುವುದೇ ತಪ್ಪಾ? ನಮಗೆ ಜೋರು ಮಾಡಿ ಬಾಯಿ ಮುಚ್ಚಿಸಿ ಕಳಿಸ್ತಾರೆ ಇವರು. ಅಂದರೆ ನಾವು ನ್ಯಾಯ ಕೇಳುವುದು ತಪ್ಪಾ?’ ಎಂದು ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಸಹೋದರಿ ಅಶ್ವಿನಿ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಘಟನೆ ನಡೆದಿದೆ.

ಶಿವಮೊಗ್ಗದಲ್ಲಿ 2022ರ ಫೆಬ್ರುವರಿ 20ರಂದು ಹರ್ಷ ಹತ್ಯೆಯಾಗಿತ್ತು. ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ನಡೆಸುತ್ತಿದೆ.

ಸಚಿವರನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಭೇಟಿಯಾಗಿದ್ದ ಅಶ್ವಿನಿ, ತನಿಖೆ ವಿಷಯ ಮಾತನಾಡಲು ಮುಂದಾದಾಗ, ‘ನಿಮ್ಮ ಇಡೀ ಕುಟುಂಬದ ಜೊತೆ ನಾವು ನಿಂತಿದ್ದೇವೆ. ನಾವೇನು ನಿಮಗೆ ದ್ರೋಹ ಮಾಡುತ್ತಿದ್ದೇವೆ ಎಂಬಂತೆ ವರ್ತಿಸುತ್ತಿದ್ದೀರಲ್ಲ’ ಎಂದು ಸಚಿವ ಜ್ಞಾನೇಂದ್ರ ಹೇಳುತ್ತಾರೆ. ಆಗ ಅಶ್ವಿನಿ ಆಕ್ರೋಶದಿಂದ ವಾಪಸಾಗುತ್ತಾರೆ. ಈ ವಿಡಿಯೊ ವೈರಲ್ ಆಗಿದೆ.

ಈ ವೇಳೆ ವ್ಯಕ್ತಿಯೊಬ್ಬರು ಅಶ್ವಿನಿ ಅವರನ್ನು ಸಮಾಧಾನಪಡಿಸಲು ಮುಂದಾದಾಗ, ‘ಇಲ್ಲಿಯವರೆಗೆ ಬಂದಿದ್ದೀವಿ ಅಂದರೆ ಗೃಹ ಸಚಿವರು ರೆಸ್ಪಾನ್ಸ್ ಮಾಡುವುದು ಬಿಟ್ಟು ಜೋರು ಮಾಡುತ್ತಾರೆ. ನಾವು ಯಾರ ಹತ್ತಿರ ನ್ಯಾಯ ಕೇಳಬೇಕು? ಎಲ್ಲಿಯೂ ನ್ಯಾಯ ಸಿಗುವುದಿಲ್ಲ ಎಂಬುದು ಗೊತ್ತಾಗಿ ಹೋಯ್ತು’ ಎಂದು ಆಕ್ರೋಶ ವ್ಯಕ್ತಪಡಿಸಿರುವ ದೃಶ್ಯ ವಿಡಿಯೊದಲ್ಲಿ ದಾಖಲಾಗಿದೆ.

‘ಬರಿಗಾಲ ಮಕ್ಕಳ ನೋಡಿ ಏನೂ ಅನ್ನಿಸಲ್ವೇ’

ಬೆಂಗಳೂರು: ‘ಕಾನ್ವೆಂಟ್ ಶಾಲೆಯ ಮಕ್ಕಳು ಶುಭ್ರ ಬಟ್ಟೆ, ಟೈ, ಶೂ, ಸಾಕ್ಸ್ ಹಾಕಿಕೊಂಡಿರುವುದು, ಬೀದಿಯಲ್ಲಿನ ಬಡವರ ಮಕ್ಕಳು ಬರಿಗಾಲಲ್ಲಿ, ಹರಿದ ಬಟ್ಟೆಯಲ್ಲಿದ್ದರೆ ನಿಮಗೆ ಏನೂ ಅನ್ನಿಸುವುದಿಲ್ಲವೇ ಅಥವಾ ಆ ಮಕ್ಕಳಿಗೆ ಏನನ್ನಿಸುತ್ತದೆ ಎಂಬ ಅರಿವಾದರೂ ಇದೆಯೇ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರನ್ನು ಪ್ರಶ್ನಿಸಿದ್ದಾರೆ.

ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿದ್ದ ಸಚಿವ ಬಿ.ಸಿ. ನಾಗೇಶ್, ‘ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೆ ಹೊರತು, ಶೂ, ಸಾಕ್ಸ್ ಹಾಕಿಕೊಳ್ಳುವುದಕ್ಕೆ ಅಲ್ಲ’ ಎಂದು ಹೇಳಿದ್ದರು. ‘ಸಚಿವರ ಹೇಳಿಕೆ ಅಮಾನವೀಯ, ಬೇಜವಾಬ್ದಾರಿತನ ಹಾಗೂ ಕ್ರೂರತನದಿಂದ ಕೂಡಿದೆ. ನಿಮ್ಮ ಮಕ್ಕಳಾಗಲಿ ಅಥವಾ ನೀವಾಗಲಿ ಎಂದಾದರೂ ಕಾಲಿಗೆ ಚಪ್ಪಲಿ ಇಲ್ಲದೆ ಓಡಾಡಿದ ಅನುಭವ ಇದೆಯೆ, ಅದರ ಅವಮಾನ, ಕೀಳರಿಮೆಗಳನ್ನು ಅನುಭವಿಸಿದ ಉದಾಹರಣೆಗಳಿವೆಯೆ? ಎಂದು ಕೇಳಿದ್ದಾರೆ.

‘ಹೈಕೋರ್ಟ್‌ಗೆ ಸಲ್ಲಿಕೆಯಾಗಿರುವ ವರದಿ ಪ್ರಕಾರ ಸುಮಾರು 10.12 ಲಕ್ಷ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಈ ಮಕ್ಕಳ ಭವಿಷ್ಯ ಏನಾಗಬಹುದು ಎಂದು ಸರ್ಕಾರ ಯೋಚಿಸಿದೆಯೆ’ ಎಂದೂ ಪ್ರಶ್ನಿಸಿದ್ದಾರೆ.

‘ಶಿಕ್ಷಣ ಸಚಿವರಿಗೆ ಕಾಳಜಿ, ಬದ್ಧತೆ, ಧಮ್ ಇದ್ದರೆ ಶಿಕ್ಷಣ ಇಲಾಖೆಯಲ್ಲಿ 2008ರಿಂದ ಇದುವರೆಗೆ ಏನೇನಾಗಿದೆ? 14 ವರ್ಷಗಳಲ್ಲಿ ಇಲಾಖೆ ಖರ್ಚು ಮಾಡಿದ ಪ್ರತಿ ಪೈಸೆಗೂ ಸಂಬಂಧಿಸಿ ಶ್ವೇತ ಪತ್ರ ಹೊರಡಿಸಿ ಎಂದು ಆಗ್ರಹಿಸಿದ್ದಾರೆ.

‘ಮಕ್ಕಳ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಈ ಹಿಂದಿನ ಎಲ್ಲ ಯೋಜನೆಗಳನ್ನು ಮುಂದುವರಿಸಬೇಕು. ಶೂ, ಸಾಕ್ಸ್, ಸೈಕಲ್, ಹಾಲು, ಸಮವಸ್ತ್ರ, ಪುಸ್ತಕ ಒದಗಿಸಿ’ ಎಂದು ಅವರು ಒತ್ತಾಯಿಸಿದ್ದಾರೆ.



ಭಾಲ್ಕಿ ತಾಲ್ಲೂಕಿನ ಸಿದ್ದೇಶ್ವರ ರೈಲ್ವೆ ಗೇಟ್ ಬಳಿ ಹಳಿ ಮೇಲೆ ನಿಂತಿದ್ದ ಟೆಂಪೋ ಗೆ ಡಿಕ್ಕಿ ಹೊಡೆದ ರೈಲು

ಹಳಿ ಮೇಲೆ ನಿಂತ ಟೆಂಪೊಗೆ ರೈಲು ಡಿಕ್ಕಿ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಸಿದ್ದೇಶ್ವರ ರೈಲ್ವೆ ಗೇಟ್ ಬಳಿ ಮಂಗಳವಾರ ಮಧ್ಯಾಹ್ನ ರೈಲು ಡಿಕ್ಕಿ ಹೊಡೆದು ಟೆಂಪೊ ನಜ್ಜುಗುಜ್ಜಾಯಿತು. ಅದೃಷ್ಟವಶಾತ್ ಪ್ರಾಣಹಾನಿ ಸಂಭವಿಸಲಿಲ್ಲ. ಯಾರಿಗೂ ಗಾಯಗಳು ಆಗಲಿಲ್ಲ.

‘ಸೋಯಾ ಅವರೆ ಚೀಲಗಳಿಂದ ತುಂಬಿದ್ದ ಟೆಂಪೊ ಹಲಬರ್ಗಾದಿಂದ ಕಣಜಿಯತ್ತ ಹೊರಟಿತ್ತು. ರೈಲ್ವೆ ರಕ್ಷಣಾ ಗೇಟ್ ಹಾಕಿದ್ದು, ವೇಗವಾಗಿ ಚಾಲನೆ ಮಾಡುತ್ತಿದ್ದ ಚಾಲಕನಿಗೆ ಟೆಂಪೊ ನಿಯಂತ್ರಿಸಲು ಸಾಧ್ಯವಾಗದೇ ರಕ್ಷಣಾ ಗೇಟ್‌ಗೆ ಡಿಕ್ಕಿ ಹೊಡೆದ. ಟೆಂಪೊ ರೈಲ್ವೆ ಹಳಿ ಮೇಲೆ ನಿಂತಿತು’ ಎಂದು ಸ್ಥಳೀಯರಾದ ಶಶಿಧರ ಸೀತಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಚಲಿತಗೊಂಡ ರೈಲ್ವೆ ಗೇಟ್ ಸಿಬ್ಬಂದಿ ಅಪಘಾತ ತಪ್ಪಿಸಲು ಸುಮಾರು 1 ಕಿ.ಮೀ.ವರೆಗೆ ಹಳಿ ಮಧ್ಯೆ ಕೆಂಪು ಧ್ವಜ ಹಿಡಿದು ಓಡಿದ್ದಾರೆ. ಇದನ್ನು ಗಮನಿಸಿದ ಚಾಲಕ ರೈಲು ನಿಲ್ಲಿಸಲು ಹರಸಾಹಸಪಟ್ಟರು. ಆದರೆ, ಸಾಧ್ಯವಾಗದೇ ಟೆಂಪೊಗೆ ಡಿಕ್ಕಿ ಹೊಡೆಯಿತು’ ಎಂದು ತಿಳಿಸಿದರು.

ಸ್ಥಳಕ್ಕೆ ಬಂದ ಧನ್ನೂರ ಠಾಣೆ ಪೊಲೀಸರು ಮತ್ತು ಬೀದರ್ ರೈಲ್ವೆ ಪೊಲೀಸರು ಸ್ಥಳಕ್ಕೆ ಟೆಂಪೊ ಚಾಲಕನನ್ನು ಕರೆದೊಯ್ದರು. ರೈಲು ಡಿಕ್ಕಿ ಹೊಡೆದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಕಾಂಗ್ರೆಸ್ ‘ಬಣ’ ರಾಜಕೀಯದ ಕಿಚ್ಚಿನ ಚರ್ಚೆಗೆ ತೇಪೆ ಹಚ್ಚಿದ ಕೆಪಿಸಿಸಿ

‘ಪಕ್ಷದ ಚೌಕಟ್ಟಿನಲ್ಲಿ ಸಿದ್ದರಾಮೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮದಿನಾಚರಣೆ ‘ಸಿದ್ದರಾಮೋತ್ಸವ’ ಕಾಂಗ್ರೆಸ್ ನಾಯಕರ ಮಧ್ಯೆ ನಾನಾ ಚರ್ಚೆಗೆ ಕಾರಣವಾಗಿರುವ ಬೆನ್ನಲ್ಲೆ, ‘ಪಕ್ಷದ ಚೌಕಟ್ಟಿನಲ್ಲಿಯೇ ಈ ಕಾರ್ಯಕ್ರಮ ನಡೆಯಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದಾರೆ. ಆ ಮೂಲಕ, ಈ ಕಾರ್ಯಕ್ರಮ ಕಾಂಗ್ರೆಸ್‌ನಲ್ಲಿ ‘ಬಣ’ ರಾಜಕೀಯದ ಕಿಚ್ಚಿಗೆ ಕಾರಣವಾಗಬಹುದೆಂಬ ಚರ್ಚೆಗಳಿಗೆ ಅಂತ್ಯ ಹಾಡಿದ್ದಾರೆ.

ಪಕ್ಷ ಸಂಘಟನೆ, ದೇಶದ 75ನೇ ಸ್ವಾತಂತ್ರ್ಯ ದಿನಾಚಾರಣೆ ಅಂಗವಾಗಿ ಪಕ್ಷ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಪದಾಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

‘ಪಕ್ಷದ ವೇದಿಕೆಯಲ್ಲಿಯೇ ಸಿದ್ದರಾಮೋತ್ಸವ ಆಯೋಜಿಸಲು ಸಿದ್ದರಾಮಯ್ಯ ಅವರ ಅಭಿಮಾನಿಗಳು, ಹಿತೈಷಿಗಳು ತೀರ್ಮಾನಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಎಐಸಿಸಿ ನಾಯಕ ರಾಹುಲ್ ಗಾಂಧಿಗೆ ಆಹ್ವಾನ ನೀಡಲಾಗಿದೆ. ಅವರು ಬರಲು ಸಮ್ಮತಿಸಿದ್ದಾರೆ. ನಾವೆಲ್ಲರೂ ಭಾಗವಹಿಸುತ್ತೇವೆ’ ಎಂದರು.

ಸಭೆಯಲ್ಲಿ ಸಿದ್ದರಾಮೋತ್ಸವವನ್ನು ಪ್ರಸ್ತಾಪಿಸಿದ ಶಿವಕುಮಾರ್, ‘ಈ ಸಮಾವೇಶದಿಂದ ಪಕ್ಷಕ್ಕೆ ಅನುಕೂಲವಾಗಲಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ 165 ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅವರ ಉತ್ತಮ ಆಡಳಿತ ಮತ್ತು ಅವರ ಯೋಜನೆಗಳನ್ನು ಈ ಕಾರ್ಯಕ್ರಮದ ಮೂಲಕ ಜನರ ಬಳಿಗೆ ತೆಗೆದುಕೊಂಡು ಹೋಗೋಣ’ ಎಂದರು.

ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ಅಭಿಮಾನಿಗಳು ಸಮಾವೇಶ ಮಾಡಲು ನಿರ್ಧರಿಸಿದ್ದಾರೆ. ರಾಹುಲ್ ಗಾಂಧಿ ಅವರನ್ನು ಹೊರತುಪಡಿಸಿ ವೈಯಕ್ತಿಕವಾಗಿ ಯಾರಿಗೂ ಆಹ್ವಾನ ನೀಡಿಲ್ಲ. ಯಾವ ಪಕ್ಷದವರಿಗೂ ಆಹ್ವಾನ ಕೊಟ್ಟಿಲ್ಲ. ಇದೇ ತಿಂಗಳ 13ರಂದು ಅರಮನೆ ಮೈದಾನದಲ್ಲಿ ಪೂರ್ವ ಸಿದ್ಧತಾ ಸಭೆ ನಡೆಯಲಿದೆ’ ಎಂದರು.

ಪಕ್ಷಾತೀತ ‘ಸ್ವಾತಂತ್ರ್ಯ ನಡಿಗೆ’: ‘ದೇಶದ 75ನೇ ಸ್ವಾತಂತ್ರ್ಯ ದಿನಾಚಾರಣೆ ಅಂಗವಾಗಿ ಆ. 15ರಂದು ಸಂಗೊಳ್ಳಿ ರಾಯಣ್ಣ ವೃತ್ತದಿಂದ ಬಸವನಗುಡಿವರೆಗೂ ರಾಷ್ಟ್ರಧ್ವಜ ಹಿಡಿದು ‘ಸ್ವಾತಂತ್ರ್ಯ ನಡಿಗೆ’ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದು ಪಕ್ಷಾತೀತವಾಗಿದ್ದು, ಎಲ್ಲ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು, ಸಾಂಸ್ಕೃತಿಕ ಸಂಘಟನೆಗಳು, ಕ್ರೀಡಾಪಟುಗಳು, ಕಲಾವಿದರು ಭಾಗವಹಿಸಬಹುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವವನ್ನು ರಾಜ್ಯದಲ್ಲಿ ಪಾದಯಾತ್ರೆ ಮೂಲಕ ಆಚರಿಸಲು ಸೋನಿಯಾ ಗಾಂಧಿ ಸೂಚಿಸಿದ್ದಾರೆ. ಪ್ರತಿ ಜಿಲ್ಲೆಯಲ್ಲಿ 75 ಕಿ.ಮೀ ಪಾದಯಾತ್ರೆ ಮಾಡಲಾಗುವುದು. ಎಷ್ಟು ತಾಲ್ಲೂಕುಗಳಲ್ಲಿ ಪಾದಯಾತ್ರೆ ಮಾಡಬೇಕು ಎಂಬುದನ್ನು ಆಯಾ ಜಿಲ್ಲಾ ಕಾಂಗ್ರೆಸ್ ನಾಯಕರಿಗೆ ಬಿಟ್ಟಿದ್ದೇವೆ. ಆ. 1ರಿಂದ ಆ. 10ರವರೆಗೆ ಅಥವಾ ಅದಕ್ಕಿಂತ ಮೊದಲು ಬೇಕಾದರೂ ಈ ಪಾದಯಾತ್ರೆ ಮಾಡಬಹುದು’ ಎಂದರು.

‘ತಿಂಗಳಲ್ಲಿ 20 ದಿನ ಪಕ್ಷಕ್ಕೆ ಮೀಸಲಿಡಿ’

‘ಮುಂದಿನ 10 ತಿಂಗಳು ತಮಗೆ ವಹಿಸಿರುವ ಜಿಲ್ಲೆ ಹಾಗೂ ಕ್ಷೇತ್ರಗಳಲ್ಲಿ ತಿಂಗಳಿಗೆ 20 ದಿನ ಕೆಲಸ ಮಾಡಬೇಕು. ಬೂತ್‌ಮಟ್ಟದಿಂದ ಪಂಚಾಯಿತಿವರೆಗೆ ಎಲ್ಲ ವಿಭಾಗಗಳಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಪಕ್ಷ ಸಂಘಟಿಸಬೇಕು. 50 ವರ್ಷ ಒಳಗಿನವರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಗಿರುವಂತೆ ನೋಡಿಕೊಳ್ಳಬೇಕು. ಐದು ವರ್ಷ ಅಥವಾ 2-3 ಅವಧಿಗೆ ಅಧ್ಯಕ್ಷರಾಗಿದ್ದವರಿಗೆ ಬಡ್ತಿ ನೀಡಿ, ಆ ಸ್ಥಾನ ಹೊಸಬರಿಗೆ ನೀಡಬೇಕು. ಪ್ರಧಾನ ಕಾರ್ಯದರ್ಶಿಗಳು ಪಂಚಾಯಿತಿ ಮಟ್ಟದಲ್ಲಿ ಪ್ರವಾಸ ಮಾಡಬೇಕೆಂದು ಪದಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ನಾಲ್ಕು ಪ್ರಕರಣ: 18 ಮಂದಿ ಬಂಧನ

ಬಾಗಲಕೋಟೆ: ಜಿಲ್ಲೆಯ ಕೆರೂರಿನಲ್ಲಿ ಬುಧವಾರ ರಾತ್ರಿ ನಡೆದಿದ್ದ ಹಿಂದೂ-ಮುಸ್ಲಿಂ ಯುವಕರ ಗಲಾಟೆಗೆ ಸಂಬಂಧಿಸಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿದ್ದು, 18 ಮಂದಿಯನ್ನು ಬಂಧಿಸಲಾಗಿದೆ.

ಅಂಗಡಿಗಳು ಗುರುವಾರ ಬಾಗಿಲು ತೆರೆಯಲಿಲ್ಲ. ಸದ್ಯ ಪರಿಸ್ಥಿತಿ ಶಾಂತವಾಗಿದ್ದು, ಪೊಲೀಸ್ ಭದ್ರತೆ ಮುಂದುವರಿಸಲಾಗಿದೆ. ಉತ್ತರ ವಲಯ ಐಜಿಪಿ ಎನ್.ಸತೀಶಕುಮಾರ್, ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ, ಪೊಲೀಸ್ ವರಿಷ್ಠ ಅಧಿಕಾರಿ ಜಯಪ್ರಕಾಶ ಭೇಟಿ ನೀಡಿದ್ದರು.

ಬಸ್, ಕಾರು ಡಿಕ್ಕಿ: ಮೂವರು ಸಾವು

ತಿಪಟೂರು (ತುಮಕೂರು): ತಾಲ್ಲೂಕಿನ ತಿಮ್ಲಾಪುರ- ಮತ್ತಿಹಳ್ಳಿ ಗೇಟ್ ನಡುವೆ ಗುರುವಾರ ಬೆಳಿಗ್ಗೆ ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತುಮಕೂರಿನ ಗುಬ್ಬಿ ಗೇಟ್ ನಿವಾಸಿ ಸಿದ್ದರಾಜು (38), ಮಾರಿಗೆರೆಯ ಮೋಹನ್ (38), ಶಿರಾ ತಾಲ್ಲೂಕಿನ ಕಡವಗೆರೆಯ ರಾಜಣ್ಣ (28) ಮೃತರು. ಕಾರು ಚಾಲಕ ಮಹೇಶ್ ಗಾಯಗೊಂಡಿದ್ದಾರೆ.

ಬಸ್ ಶಿವಮೊಗ್ಗದಿಂದ ಬೆಂಗಳೂರಿಗೆ ಮತ್ತು ಕಾರು ತಿಪಟೂರು ಕಡೆಯಿಂದ ಅರಸೀಕೆರೆ ಕಡೆಗೆ ತೆರಳುತ್ತಿತ್ತು. ಹೊನ್ನವಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೊಸ ಪೀಳಿಗೆಯಿಂದ ದೇವೇಗೌಡರ ವರ್ಚಸ್ಸಿಗೆ ಧಕ್ಕೆ’



ಹಾಸನ: ‘ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಬಗ್ಗೆ ಜನರಿಗೆ ವಿಶ್ವಾಸವಿದೆ. ಆದರೆ ಅವರಿಗೆ ವಯಸ್ಸಾಗಿದೆ. ಸಕ್ರಿಯ ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಆರೋಗ್ಯ ಸಹಕರಿಸುತ್ತಿಲ್ಲ’ ಎಂದು ಕೇಂದ್ರ ಇಂಧನ ಮತ್ತು ಭಾರಿ ಕೈಗಾರಿಕೆ ಖಾತೆ ರಾಜ್ಯ ಸಚಿವ ಕೃಷ್ಣಪಾಲ್ ಗುರ್ಜರ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಿಲ್ಲೆಯಲ್ಲಿ ಜೆಡಿಎಸ್ ಪ್ರಮುಖ ಪಕ್ಷ. ದೇವೇಗೌಡರು ಉತ್ತಮ ಆಡಳಿತ ನೀಡಿದ್ದಾರೆ. ಆದರೆ, ಅವರ ಮುಂದಿನ ಪೀಳಿಗೆಯವರು ಅವರ ವರ್ಚಸ್ಸಿಗೆ ಧಕ್ಕೆ ತರುತ್ತಿದ್ದಾರೆ’ ಎಂದರು. ‘ದೇವೇಗೌಡರ ಬಗ್ಗೆ ಮಾತನಾಡುವುದಾದರೆ, ನಾನು ಹರಿಯಾಣ ಉದಾಹರಣೆ ತೆಗೆದುಕೊಳ್ಳುತ್ತೇನೆ. ದೇವಿಲಾಲ್ ಅವರ ಬಗ್ಗೆ ಜನರಲ್ಲಿ ವಿಶ್ವಾಸವಿತ್ತು. ಅವರ ಮುಂದಿನ ಪೀಳಿಗೆ ಆ ವಿಶ್ವಾಸ ಕಳೆದಕೊಂಡಿತು. ದೇವೇಗೌಡರ ವಿಷಯದಲ್ಲೂ ಅದೇ ಅಗಿದೆ’ ಎಂದರು.

ನಿಧನ ವಾರ್ತೆ

ಬೆಳ್ಳಾರೆ ವಿಶ್ವನಾಥ ರೈ

ಪುತ್ತೂರು (ದಕ್ಷಿಣ ಕನ್ನಡ): ತಾಲ್ಲೂಕಿನ ಮಾಡಾವಿನಲ್ಲಿ ನೆಲೆಸಿದ್ದ ಯಕ್ಷಗಾನ ಕಲಾವಿದ ಬೆಳ್ಳಾರೆ ವಿಶ್ವನಾಥ ರೈ (73) ಬುಧವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಮಾಡಾವಿನ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಸುಮಾರು 35 ವರ್ಷ ಕರ್ನಾಟಕ ಮೇಳದಲ್ಲಿ ತಿರುಗಾಟ ನಡೆಸಿದ್ದ ಅವರು, ‘ಕಾಡಮಲ್ಲಿಗೆ’ ಯಕ್ಷಗಾನದಲ್ಲಿ ‘ಮಲ್ಲಿಗೆ’ ಸ್ತ್ರೀ ಪಾತ್ರದ ಮೂಲಕ ಜನಪ್ರಿಯರಾಗಿದ್ದರು. ಮಧೂರು, ಸುರತ್ಕಲ್, ಕದ್ರಿ, ಬಪ್ಪನಾಡು, ಕುಂಟಾರು, ಎಡನೀರು, ಕಟೀಲು ಮೇಳಗಳಲ್ಲೂ ತಿರುಗಾಟ ನಡೆಸಿದ್ದರು. ಅವರು ಪುತ್ತೂರು, ಸುಳ್ಯ ತಾಲ್ಲೂಕಿನ ವಿವಿಧೆಡೆ ಯಕ್ಷಗಾನ ನಾಟ್ಯ ತರಬೇತಿ ತರಗತಿ ನಡೆಸುತ್ತಿದ್ದರು.

ಶುಕ್ರವಾರ, ಜುಲೈ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 188 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕಿಚ್ಚ ಸುದೀಪ್ ಅವರ 'ವಿಕ್ರಾಂತ್ ರೋಣ'ನ ಲೋಕವೂ ಉತ್ತರದತ್ತ ಹರಿದ ಚಿತ್ತವೂ...



ಸೆನ್ಸೆಕ್ಸ್	ನಿಫ್ಟಿ	₹/$
54,178 ▲	16,133 ▲	79.13 ▼

ರಾಜ್ಯದಲ್ಲಿ ಚುರುಕಾದ ಮುಂಗಾರು

ಬಂಟ್ವಾಳ ತಾಲ್ಲೂಕಿನ ಪಂಜಿಕಲ್ಲು ಗ್ರಾಮದಲ್ಲಿ ಭೂಕುಸಿತ: ಮತ್ತೆ ಇಬ್ಬರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದೆ. ಜಲಾನಯನ ಪ್ರದೇಶಗಳಲ್ಲಿ ಭಾರಿ ಮಳೆಯಾಗು-ತ್ತಿರುವುದರಿಂದ ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದೆ. ಕೆಲವೆಡೆ ಗುಡ್ಡ ಕುಸಿದ ಪರಿಣಾಮ ವಾಹನಗಳ ಸಂಚಾರಕ್ಕೆ ಅಡಚಣೆ ಆಯಿತು.

ಹೊಲ, ತೋಟಗಳಿಗೆ ನೀರು ನುಗ್ಗಿ ಹಾನಿಯುಂಟಾಗಿದೆ. ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನಲ್ಲಿ ಸೌಪರ್ಣಿಕ ನದಿ ತುಂಬಿ ಹರಿದು ನಾವುಂದ ಗ್ರಾಮ ಮುಳುಗಡೆಯಾಗಿದೆ. ಜಿಲ್ಲಾಡಳಿತ ಸಂತ್ರಸ್ತರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಿದೆ.

ಕೊಡಗು ಜಿಲ್ಲೆಯಲ್ಲಿ ಗುರುವಾರ ಧಾರಾಕಾರ ಮಳೆ ಸುರಿದಿದ್ದು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜೋರು ಮಳೆಯಾಗಿದೆ. ಕುಂದಾಪುರ ತಾಲ್ಲೂಕಿನ ಗೋಳಿಹೊಳೆಯಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು 27.8 ಸೆಂ.ಮೀ ಮಳೆಯಾಗಿದೆ.

ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 10,015 ಕ್ಯುಸೆಕ್‌ಗೆ ಏರಿಕೆಯಾಗಿದೆ. 15,560 ಕ್ಯುಸೆಕ್‌ನಷ್ಟು ನೀರನ್ನು ಹೊರಬಿಡ-ಲಾಗುತ್ತಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದ್ದು, ಬೆಳಗಾವಿ ಜಿಲ್ಲೆಯ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದ ನೀರಿನ ಮಟ್ಟ ಗುರುವಾರ ಒಂದೇ ದಿನ 3.08 ಅಡಿಯಷ್ಟು ಏರಿಕೆಯಾಗಿದೆ.



ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ನಾವುಂದ ಗ್ರಾಮ ಮುಳುಗಡೆಯಾಗಿದ್ದು, ಗ್ರಾಮಸ್ಥರೊಬ್ಬರು ಗುರುವಾರ ನೆರೆ ನೀರಿನಲ್ಲಿ ಹಸುವನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು –ಪ್ರಜಾವಾಣಿ ಚಿತ್ರ

ಬಂಟ್ವಾಳ ತಾಲ್ಲೂಕಿನ ಪಂಜಿಕಲ್ಲು ಗ್ರಾಮದ ಮುಕ್ಕುಡದಲ್ಲಿ ಬುಧವಾರ ರಾತ್ರಿ ಗುಡ್ಡ ಕುಸಿತಕ್ಕೊಳಗಾಗಿ ಗಾಯಗೊಂಡಿದ್ದ ಕೇರಳದ ಇಬ್ಬರು ಕಾರ್ಮಿಕರು ಗುರುವಾರ ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮೂರಕ್ಕೇರಿದೆ. ಹೆನ್ರಿ ಕಾರ್ಲೊ ಅವರ ರಬ್ಬರ್ ತೋಟದಲ್ಲಿ ಕೆಲಸಕ್ಕಿದ್ದ ನಾಲ್ವರು ವಾಸಿಸುತ್ತಿದ್ದ ಶೆಡ್ ಮೇಲೆ ಗುಡ್ಡದ ಮಣ್ಣು ಕುಸಿದು ಬಿದ್ದಿತ್ತು.

ಕೊಡಗು, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ, ಶಿರಸಿ, ಸಿದ್ದಾಪುರ ಮತ್ತು ಜೊಯಿಡಾ ತಾಲ್ಲೂಕುಗಳಲ್ಲಿ ಶಾಲಾ–ಕಾಲೇಜುಗಳಿಗೆ ಶುಕ್ರವಾರ ರಜೆ ಘೋಷಿಸಲಾಗಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ 8 ಹಾಗೂ 9ರಂದು ರಜೆ ಘೋಷಿಸಲಾಗಿದೆ.

ಕರಾವಳಿಯ ಕೆಲವೆಡೆ ಶುಕ್ರವಾರ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗಲಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್', ಹಾಸನ, ಹಾವೇರಿ, ಧಾರವಾಡ, ಬೆಳಗಾವಿ ಹಾಗೂ ಕಲಬುರ್ಗಿಗೆ 'ಯೆಲ್ಲೋ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳು ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಡಿ.ಸಿಗಳ ಜೊತೆ ಸಿಎಂ ಸಂವಾದ ಇಂದು

ಬೆಂಗಳೂರು: ಅತಿ ಹೆಚ್ಚು ಮಳೆ ಸುರಿಯುತ್ತಿರುವ ರಾಜ್ಯದ 13 ಜಿಲ್ಲೆಗಳ ಉಸ್ತುವಾರಿ ಸಚಿವರು, ಸಂಬಂಧಪಟ್ಟ ಇಲಾಖೆಗಳ ಸಚಿವರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳ ಜೊತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ವಿಡಿಯೊ ಸಂವಾದ ನಡೆಸಲಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮಧ್ಯಾಹ್ನ 2.30ಕ್ಕೆ ಈ ಸಂವಾದ ನಡೆಯಲಿದೆ. ಈ ಜಿಲ್ಲೆಗಳಲ್ಲಿ ಬಿದ್ದಿರುವ ಮಳೆ ಪ್ರಮಾಣ, ಸಂಭವಿಸಿರುವ ಹಾನಿ, ಈವರೆಗೆ ಕೈಗೊಂಡಿರುವ ತುರ್ತು ಕ್ರಮಗಳ ಕುರಿತು ಮುಖ್ಯಮಂತ್ರಿ ಮಾಹಿತಿ ಪಡೆಯಲಿದ್ದಾರೆ. ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಮುಖ್ಯಮಂತ್ರಿ, 'ಮಳೆ ಎದುರಿಸಲು ಏನೆಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದೇನೆ' ಎಂದರು.

ಇನ್ನಷ್ಟು ಸುದ್ದಿಗಳು 4

'ಸೀಮಂತ್ ಕುಮಾರ್ ಆತ್ಮಸಾಕ್ಷಿ ಪ್ರಶ್ನಿಸಿಕೊಳ್ಳಲಿ'

ವಿವರಣೆ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಆಗಿದ್ದ ಸೀಮಂತ್ ಕುಮಾರ್ ಸಿಂಗ್ ಮನೆ ಮೇಲೆ ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣದಲ್ಲಿ ನಡೆದಿದ್ದ ಸಿಬಿಐ ದಾಳಿ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ತನಿಖಾ ವರದಿಯನ್ನು ಸಲ್ಲಿಸಿ' ಎಂದು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಹೈಕೋರ್ಟ್ ಆದೇಶಿಸಿದೆ.

₹ 5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಯನ್ನು ಗುರುವಾರ ಮುಂದುವರಿಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಎಸಿಬಿಯ ಎಡಿಜಿಪಿ ಸೀಮಂತ್‌ಕುಮಾರ್ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತು.

ವಿಚಾರಣೆ ವೇಳೆ ಎಸಿಬಿ ಪರ ಹಾಜರಾಗಿದ್ದ ವಕೀಲ ಪಿ.ಎನ್. ಮನಮೋಹನ್, ಈ ಹಿಂದೆ ನ್ಯಾಯಪೀಠ ನೀಡಿದ್ದ ನಿರ್ದೇಶನದ ಅನುಸಾರ 2016ರಿಂದ 2019ರವರೆಗೆ ಎಸಿಬಿ ಹಾಕಿರುವ 'ಬಿ' ರಿಪೋರ್ಟ್‌ಗಳ ಅಂಕಿ ಅಂಶವನ್ನು ನ್ಯಾಯಪೀಠಕ್ಕೆ ನೀಡಿದರು. ವಿವರಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ಈ ದಸ್ತಾವೇಜು ಅಧಿಕೃತವಾಗಿಲ್ಲ ಮತ್ತು ಇದರಲ್ಲಿ ಅಧಿಕಾರಿಗಳ ಸಹಿಯೇ ಇಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿತು.

4ನೇ ಪುಟ ನೋಡಿ

ನ್ಯಾ.ಸಂದೇಶ್ ಕ್ರಮ ಪ್ರಶ್ನಿಸಿದ ಎಡಿಜಿಪಿ

'ಜಾಮೀನು ಅರ್ಜಿ ವಿಚಾರಣೆ ನಡೆಸಬೇಕಾದ ಪ್ರಕರಣದಲ್ಲಿ ಸಂಬಂಧವೇ ಇಲ್ಲದ ನನ್ನ ಸೇವಾ ದಾಖಲೆಯನ್ನು ಸಲ್ಲಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ನೀಡಿರುವ ನಿರ್ದೇಶನ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಎಸಿಬಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಡಿಪಿಎಆರ್ ಕಾರ್ಯದರ್ಶಿ ಮತ್ತು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

4ನೇ ಪುಟ ನೋಡಿ

ಬ್ರಿಟನ್: ಟೋರಿ ನಾಯಕತ್ವಕ್ಕೆ ಪ್ರಧಾನಿ ಜಾನ್ಸನ್ ರಾಜೀನಾಮೆ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ (58) ಅವರು ಗುರುವಾರ ತಮ್ಮ ಆಡಳಿತ ಪಕ್ಷ ಕನ್ಸರ್‌ವೇಟಿವ್ (ಟೋರಿ) ನಾಯಕತ್ವಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

ಆದರೆ, ಹೊಸ ನಾಯಕನ ಆಯ್ಕೆಯಾಗುವವರೆಗೂ ಅವರು ಪ್ರಧಾನಿಯಾಗಿ ಮುಂದುವರಿಯಲಿದ್ದಾರೆ. ಅಕ್ಟೋಬರ್‌ನಲ್ಲಿ ನಿಗದಿಯಂತೆ ನಡೆಯಲಿರುವ ಕನ್ಸರ್‌ವೇಟಿವ್ ಪಕ್ಷದ ಅಧಿವೇಶನದಲ್ಲಿ ಸಂಸದರು, ಹೊಸ ಪ್ರಧಾನಿ ಮತ್ತು ನಾಯಕನ ಹೆಸರನ್ನು ಘೋಷಿಸಲಿದ್ದಾರೆ.

ಪಾರ್ಟಿ ಗೇಟ್ ಮತ್ತು ಹಲವು ಅಕ್ರಮಗಳ ಹಗರಣಗಳಿಂದ ದೇಶದಾದ್ಯಂತ ವ್ಯಾಪಕ ಟೀಕೆಗೆ ಗುರಿಯಾಗಿದ್ದ ಜಾನ್ಸನ್, ಕಳೆದ ತಿಂಗಳಷ್ಟೇ ಎದುರಾದ ಅವಿಶ್ವಾಸ ನಿಲುವಳಿಯಲ್ಲಿ ಪ್ರಯಾಸದಲ್ಲಿ ವಿಶ್ವಾಸಮತ ಗೆದ್ದು ಅಧಿಕಾರ ಉಳಿಸಿ-ಕೊಂಡಿದ್ದರು. ಪಕ್ಷದ ಸಂಸದರೇ ಜಾನ್ಸನ್ ವಿರುದ್ಧ ಬಂಡಾಯ ಸಾರಿದ್ದರಿಂದ ಈ ಬೆಳವಣಿಗೆ ನಡೆದಿತ್ತು.



ಜಾನ್ಸನ್

ಕಳೆದ ಎರಡು ದಿನಗಳಿಂದ ಹಣಕಾಸು ಹೊಣೆ ಹೊತ್ತಿರುವ ರಿಷಿ ಸುನಕ್ ಸಹಿತ ಹಿರಿಯ ಮತ್ತು ಕಿರಿಯರು ಸೇರಿ 13 ಸಚಿವರು ರಾಜೀನಾಮೆ ನೀಡಿದ್ದು, ಜಾನ್ಸನ್ ನಾಯಕತ್ವದಲ್ಲಿ ತಮಗೆ ನಂಬಿಕೆ ಇಲ್ಲ ಎಂದು ಹೇಳಿದ್ದರು. ಪಕ್ಷದ ಒಳಗೆ ಮತ್ತು ಹೊರಗಿನ ಒತ್ತಡದ ನಡುವೆಯೂ ಯಾವುದೇ ಕಾರಣಕ್ಕೆ ರಾಜೀನಾಮೆ ಸಲ್ಲಿಸುವುದಿಲ್ಲವೆಂದು ಜಾನ್ಸನ್ ಬುಧವಾರದವರೆಗೂ ಹೇಳುತ್ತಲೇ ಬಂದಿದ್ದರು.

ರಾಜೀನಾಮೆ ಸಲ್ಲಿಸಿದ ನಂತರ ಪ್ರಧಾನಿಯ ಅಧಿಕೃತ ನಿವಾಸ 10 ಡೌನಿಂಗ್ ಸ್ಟ್ರೀಟ್ ಹೊರಗೆ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಜಾನ್ಸನ್, 'ವಿಶ್ವದಲ್ಲೇ ಅತ್ಯುತ್ತಮವಾದ ಹುದ್ದೆಯನ್ನು ತೊರೆಯಲು ದುಃಖಿತ-ನಾಗಿದ್ದೇನೆ. ನನಗೆ ಸಾಕಷ್ಟು ಅವಕಾಶವನ್ನು ನೀಡಿದ್ದೀರಿ. ರಾಜಕಾರಣದಲ್ಲಿ ಯಾರೂ ಅನಿವಾರ್ಯವಲ್ಲ, ಹೊಸ ನಾಯಕನಿಗೆ ನನ್ನ ಸಂಪೂರ್ಣ ಬೆಂಬಲ ಇರುತ್ತದೆ' ಎಂದರು.

'ಜಾನ್ಸನ್ ರಾಜೀನಾಮೆ ದೇಶಕ್ಕೆ ಒಳ್ಳೆ ಸುದ್ದಿ' ಎಂದು ವಿರೋಧ ಪಕ್ಷವಾದ ಲೇಬರ್ ಪಾರ್ಟಿ ಪ್ರತಿಕ್ರಿಯಿಸಿದೆ.

ಕೆಐಎಡಿಬಿ: ಕೆಎಎಸ್ ಅಧಿಕಾರಿಗಳಿಬ್ಬರಿಂದ ಅಕ್ರಮ – ಆರೋಪ

ಅನರ್ಹರಿಗೆ ₹79 ಕೋಟಿ ಪರಿಹಾರ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಇಮ್ಮಾವು ಗ್ರಾಮದಲ್ಲಿ 54 ಎಕರೆಗೆ ಅಕ್ರಮವಾಗಿ ಖಾತೆ ಮಾಡಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ₹79.28 ಕೋಟಿ ಮೊತ್ತವನ್ನು ನಿಯಮಬಾಹಿರವಾಗಿ ಅನರ್ಹರಿಗೆ ಪರಿಹಾರ ನೀಡಲಾಗಿದ್ದು, ಈ ಅಕ್ರಮದಲ್ಲಿ ಭಾಗಿಯಾದ ಇಬ್ಬರು ಕೆಎಎಸ್ ಅಧಿಕಾರಿಗಳಿಗೆ ಈಗ ಸಂಕಷ್ಟ ಎದುರಾಗಿದೆ.

ಈ ಹಗರಣದಲ್ಲಿ ಭಾಗಿಯಾದ ಕೆಐಎಡಿಬಿ ಮೈಸೂರು ವಲಯ ಕಚೇರಿಯ ವಿಶೇಷ ಭೂಸ್ವಾಧೀನಾಧಿಕಾರಿ (ಈಗ ನಿವೃತ್ತ) ಎಚ್.ಕೆ.ಕೃಷ್ಣಮೂರ್ತಿ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಿ ಆರ್ಥಿಕ ನಷ್ಟವನ್ನು ಅವರಿಂದಲೇ ವಸೂಲಿ ಮಾಡಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಈ ನಿವೃತ್ತ ಅಧಿಕಾರಿಯ ವಿರುದ್ಧ ಮೈಸೂರಿನ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಂಜನಗೂಡು ತಹಶೀಲ್ದಾರ್ ಆಗಿದ್ದ ನವೀನ್ ಜೋಸೆಫ್ (ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪ ಕಾರ್ಯದರ್ಶಿ) ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿದ್ದು, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸರ್ಕಾರ ನಿರ್ಧರಿಸಿದೆ. ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜುಲೈ 1ರಂದು ನಡೆದ ಸಭೆಯಲ್ಲಿ ಈ ಸಂಬಂಧ ಚರ್ಚಿಸಲಾಗಿದೆ. ಈ ಹಗರಣದ ಬಗ್ಗೆ ಸೂಕ್ತ ಮಾಹಿತಿ ನೀಡುವಂತೆ ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯೂ ಸೂಚಿಸಿದೆ.

ಪ್ರಜಾವಾಣಿ ವಿಶೇಷ

ಏನಿದು ಪ್ರಕರಣ: ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಅಡಕ್ಕನಹಳ್ಳಿ, ತಾಂಡವಪುರ ಹಾಗೂ ಇಮ್ಮಾವು ಗ್ರಾಮಗಳಲ್ಲಿ 1,123 ಎಕರೆ ಸ್ವಾಧೀನಕ್ಕೆ ಕೆಐಎಡಿಬಿ 2007ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಬಳಿಕ 2008ರಲ್ಲಿ 1,138 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಇದರಲ್ಲಿ ಇಮ್ಮಾವು ಗ್ರಾಮದ 1,015 ಎಕರೆ ಸಹ ಸೇರಿದೆ.

ಭೂಸ್ವಾಧೀನಪಡಿಸಿಕೊಂಡ ಜಮೀನಿನ ಪೈಕಿ ಇಮ್ಮಾವು ಗ್ರಾಮದ ಹೊಸ ಸರ್ವೆ ಸಂಖ್ಯೆ 582, 583, 584, 585, 586, 587 ರ ಜಮೀನಿಗೆ ಎಚ್.ಕೆ.ಕೃಷ್ಣಮೂರ್ತಿ ₹79.28 ಕೋಟಿ ಪರಿಹಾರ ಪಾವತಿಸಿದ್ದಾರೆ.

ಇಮ್ಮಾವು ಗ್ರಾಮದ ಹಳೆಯ ಸರ್ವೆ ಸಂಖ್ಯೆ 390ರಿಂದ 400ರ ವರೆಗಿನ ಖಾತೆದಾರರು ಭೀಷ್ಮ ಪಿತಾಮಹ. ಈ ಪ್ರಕರಣದಲ್ಲಿ ಅವರ ಕುಟುಂಬ ಸದಸ್ಯರಾದ ಪ್ರದೀಪ್ ಎಂಬುವರಿಗೆ ₹5.15 ಕೋಟಿ, ಸೋನು ಎಂಬುವರಿಗೆ ₹6.10 ಕೋಟಿ, ಹರ್ಷ ಕುಮಾರ್, ಶೋಭಾದೇವಿ, ಹೇಮಲತಾ, ನಿಶಾ ಶರ್ಮಾ, ಅಂಜನಾ ಶರ್ಮಾ, ವಿಜಯಲಕ್ಷ್ಮಿ ಎಂಬುವರಿಗೆ ತಲಾ ₹11.34 ಕೋಟಿ ಪರಿಹಾರ ನೀಡಲಾಗಿದೆ. ಪಹಣಿಪತ್ರದ (ಆರ್‌ಟಿಸಿ) ನೈಜತೆ ಪರಿಶೀಲಿಸದೆ, ಖಾತೆದಾರರ ಮರಣ ಪ್ರಮಾಣಪತ್ರ ಹಾಗೂ ಉತ್ತರಾಧಿಕಾರಿ ಪ್ರಮಾಣಪತ್ರಗಳನ್ನು ಸಹ ಪಡೆಯದೆ ಪರಿಹಾರ ವಿತರಿಸಲಾಗಿದೆ. ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವಂತೆ ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾ-ಧಿಕಾರಿ ಅವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.

4ನೇ ಪುಟ ನೋಡಿ

ಬಕ್ರೀದ್: ಪ್ರಾಣಿ ಬಲಿಗೆ ಹಲವು ನಿರ್ಬಂಧ

ಬೆಂಗಳೂರು: ಬಕ್ರೀದ್ (ಜುಲೈ 10) ಸಮಯದಲ್ಲಿ ಪ್ರಾಣಿ ಬಲಿ (ಖುರ್ಬಾನಿ) ನೀಡುವ ಆಚರಣೆಯ ಮೇಲೆ ಸರ್ಕಾರ ಹಲವು ನಿರ್ಬಂಧಗಳನ್ನು ಹೇರಿದೆ.

ಈ ಬಾರಿಯ ಬಕ್ರೀದ್ ಹಬ್ಬದ ವೇಳೆ ಜಾನುವಾರುಗಳನ್ನು ಬಲಿ ನೀಡಲು ಅವಕಾಶ ಕೊಡುವುದಿಲ್ಲ ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಅವರು ಹೇಳಿಕೆ ನೀಡಿದ ಮರು ದಿನವೇ ಸರ್ಕಾರ ಸುತ್ತೋಲೆ ಹೊರಡಿಸಿದೆ.

ರಾಜ್ಯದಲ್ಲಿ ಜಾರಿಯಲ್ಲಿರುವ ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ವಯಸ್ಸಿನ ದನ, ಆಕಳು, ಎತ್ತು, ಕರುಗಳನ್ನು ಬಲಿ ನೀಡುವಂತಿಲ್ಲ. ಬಲಿ ನೀಡುವುದಕ್ಕಾಗಿ ಅವುಗಳನ್ನು ಸಾಗಣೆ ಮಾಡುವಂತೆಯೂ ಇಲ್ಲ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

3B ಪುಟ ನೋಡಿ

ಊರ ಬಾಲೆ ಉಳಿಸಲು ಎದ್ದು ನಿಂತ ಜನ

• ವಿಕ್ರಂ ಕಾಂತಿಕೆರೆ

ಮಂಗಳೂರು: ಕಾಸರಗೋಡಿನ ಕುಂಬ್ಡಾಜೆ ಮತ್ತು ಸುತ್ತಮುತ್ತಲ ಗ್ರಾಮಸ್ಥರು ಏಳು ವರ್ಷದ ಬಾಲೆ ಸಾನ್ವಿಯ ಜೀವ ಉಳಿಸಲು ಮುಂದಾಗಿದ್ದಾರೆ.

ತಲಸ್ಸೇಮಿಯಾದಿಂದ ಬಳಲುತ್ತಿರುವ ಸಾನ್ವಿಗೆ ಅಸ್ಥಿಮಜ್ಜೆ ಕಸಿ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟೇಷನ್) ಚಿಕಿತ್ಸೆಗೆ ತಗಲುವ ಮೊತ್ತ ಸಂಗ್ರಹಿಸಲು ಊರಿಗೆ ಊರೇ ಎದ್ದು ನಿಂತಿದ್ದು, ಜೂನ್ ಕೊನೆ ವಾರದಲ್ಲಿ ಆರಂಭವಾದ ಹಣ ಸಂಗ್ರಹ ಅಭಿಯಾನದಲ್ಲಿ ಈಗಾಗಲೇ ಸುಮಾರು ₹ 20 ಲಕ್ಷದಷ್ಟು ಸಂಗ್ರಹವಾಗಿದೆ.

3B ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಮೆಟ್ರೊ: 72 ಕೋಚ್ ಪೂರೈಕೆಗೆ 4 ಕಂಪನಿ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಹಂತದ 'ನಮ್ಮ ಮೆಟ್ರೊ' ರೈಲು ಯೋಜನೆ 73 ಕಿಲೋ ಮೀಟರ್ ಮಾರ್ಗದ ಕಾಮಗಾರಿ ಮುಕ್ತಾಯದ ಹಂತಕ್ಕೆ ಬಂದಿದ್ದು, 72 ಹೊಸ ರೈಲು ಕೋಚ್‌ಗಳನ್ನು ಪೂರೈಸಲು ನಾಲ್ಕು ಕಂಪನಿಗಳು ಮುಂದೆ ಬಂದಿವೆ.

ಚೀನಾ ಮೂಲದ ಸಿಆರ್‌ಆರ್‌ಸಿ ವೇಳಾಪಟ್ಟಿಯ ಪ್ರಕಾರ 216 ಕೋಚ್‌ಗಳನ್ನು ಪೂರೈಸಲು ವಿಫಲವಾದ ಬಳಿಕ ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಏಪ್ರಿಲ್‌ನಲ್ಲಿ ಟೆಂಡರ್ ಆಹ್ವಾನಿಸಿತ್ತು.

6 ಕೋಚ್‌ಗಳನ್ನು ಒಳಗೊಂಡ 12 ರೈಲುಗಳನ್ನು ಪಡೆಯಲು ಟೆಂಡರ್ ಕರೆಯಲಾಗಿತ್ತು. ಆರ್.ವಿ.ರಸ್ತೆ–ಬೊಮ್ಮಸಂದ್ರ (ರೀಚ್–5) 19 ಕಿಲೋ ಮೀಟರ್ ಮಾರ್ಗದ ಕಾಮಗಾರಿ 2023ರ ಜೂನ್ ವೇಳೆಗೆ ಸಂಚಾರಕ್ಕೆ ಸಿದ್ಧವಾಗಲಿದೆ. ಈ ಮಾರ್ಗಕ್ಕೆ ಈ ಕೋಚ್‌ಗಳನ್ನು ಬಳಸಿಕೊಳ್ಳಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

'ಬಿಇಎಂಎಲ್, ಅಲ್‌ಸ್ಟಂ ಟ್ರಾನ್ಸ್‌ಪೋರ್ಟ್, ಮಿಟ್ಸುಬಿಷಿ ಎಲೆಕ್ಟ್ರಿಕ್ ಮತ್ತು ಟಿಟಾಗರ್ ವ್ಯಾಗನ್ಸ್ ಲಿಮಿಟೆಡ್ ಟೆಂಡರ್‌ನಲ್ಲಿ ಭಾಗವಹಿಸಿವೆ. ಈ ಎಲ್ಲಾ ಸಂಸ್ಥೆಗಳು ದೇಶದಾದ್ಯಂತ ವಿವಿಧ ಮೆಟ್ರೊ ನಿಗಮಗಳಿಗೆ ಕೋಚ್‌ಗಳನ್ನು ಪೂರೈಸಿರುವ ಅನುಭವ ಹೊಂದಿವೆ. ಈ ಬಿಡ್‌ಗಳ ತಾಂತ್ರಿಕ ಮೌಲ್ಯಮಾಪನ ನಡೆಸಲಾಗುತ್ತಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸಿಲ್ಕ್ ಬೋರ್ಡ್–ಜಯದೇವ ಇಂಟರ್ ಚೇಂಜ್ ನಿಲ್ದಾಣ ಸೇರಿ ಈ ಮಾರ್ಗದ ಸಿವಿಲ್ ಕಾಮಗಾರಿಯನ್ನು ಬಹುತೇಕ ಸೆಪ್ಟೆಂಬರ್ ವೇಳೆಗೆ ಪೂರ್ಣಗೊಳಿಸಿ, 2023ರ ಜುಲೈ ವೇಳೆಗೆ ಉಳಿಕೆ ಕಾಮಗಾರಿಯನ್ನೂ ಪೂರ್ಣಗೊಳಿಸಲು ಉದ್ದೇಶಿಸಿದೆ.

ಬೊಮ್ಮಸಂದ್ರ ಮತ್ತು ಬೊಮ್ಮನಹಳ್ಳಿ ಮಾರ್ಗದ ಸಿವಿಲ್ ಕಾಮಗಾರಿಯೂ ಶೇ 99ರಷ್ಟು ಪೂರ್ಣಗೊಂಡಿದೆ. ಎಚ್‌ಎಸ್‌ಆರ್ ಲೇಔಟ್ –ಆರ್.ವಿ. ರಸ್ತೆ ಮಾರ್ಗದ ಕಾಮಗಾರಿ ಶೇ 93ರಷ್ಟು ಪೂರ್ಣಗೊಂಡಿದೆ.

ಭೂಸ್ವಾಧೀನ ಪಡಿಸಿಕೊಂಡು ಬಡಾವಣೆ ನಿರ್ಮಾಣ ಇಲ್ಲ: ಸಚಿವ ಸೋಮಣ್ಣ

ಖಾಸಗಿ ಸಹಭಾಗಿತ್ವಕ್ಕೆ ಮುಂದಾದ ಗೃಹ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡಾವಣೆಗಳ ಅಭಿವೃದ್ಧಿಗೆ ಅಗತ್ಯವಾದ ಜಮೀನು ಸಿಗುತ್ತಿಲ್ಲ, ಜೊತೆಗೆ ಭೂಮಿ ಬೆಲೆ ಹೆಚ್ಚಳಗೊಂಡಿರುವುದರಿಂದ ಭೂಸ್ವಾಧೀನಪಡಿಸಿಕೊಂಡು ಹೊಸ ಬಡಾವಣೆ ಅಭಿವೃದ್ಧಿಪಡಿಸದೇ ಇರಲು ಕರ್ನಾಟಕ ಗೃಹ ಮಂಡಳಿ ನಿರ್ಧರಿಸಿದೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ವಸತಿ ಸಚಿವ ವಿ. ಸೋಮಣ್ಣ, 'ಕನಿಷ್ಠ 50 ಎಕರೆ ಜಮೀನು ಇರುವ ಮಾಲೀಕರು ಮುಂದೆ ಬಂದರೆ ಖಾಸಗಿ ಸಹಭಾಗಿತ್ವದಲ್ಲಿ ನಗರ ಪ್ರದೇಶದಲ್ಲಿ 50:50, ಗ್ರಾಮೀಣ ಭಾಗದಲ್ಲಿ 60:40 ಆಧಾರದಲ್ಲಿ ಬಡಾವಣೆ ನಿರ್ಮಿಸಲಾಗುವುದು' ಎಂದರು.

'ಹುಡ್ಕೊ ಮೂಲಕ ₹500 ಕೋಟಿ ಸಾಲ'

'ಆರಂಭಿಕ ಹಣ ಪಾವತಿಸಲು ಫಲಾನುಭವಿಗಳಿಗೆ ಕಷ್ಟವಾಗುತ್ತಿದೆ. ಹೀಗಾಗಿ, ಹುಡ್ಕೊ ಮೂಲಕ ₹ 500 ಕೋಟಿ ಸಾಲ ಪಡೆದು ನಾವೇ ಮೊದಲಿಗೆ ತುಂಬಿ ಮನೆ ನಿರ್ಮಿಸುತ್ತೇವೆ. ಬಳಿಕ ಮನೆಯನ್ನು ಬ್ಯಾಂಕಿಗೆ ಅಡಮಾನ ಇಟ್ಟು ನಮ್ಮ ಹಣ ನಾವು ಪಡೆದುಕೊಂಡು ಉಳಿದ ಸಾಲವನ್ನು ಇಎಂಐ ಮೂಲಕ ಫಲಾನುಭವಿಗಳು ಪಾವತಿಸುವಂತೆ ಮಾಡಲಾಗುವುದು. ಅಲ್ಲದೆ, ಈ ಯೋಜನೆಯಡಿ ಫಲಾನುಭವಿಗಳು ಪಾವತಿಸಬೇಕಾದ ಮೊತ್ತವನ್ನು ಕಡಿಮೆ ಮಾಡಲಾಗಿದೆ. ಸಾಮಾನ್ಯ ವರ್ಗದವರು ₹ 6.50 ಲಕ್ಷ, ಎಸ್‌ಸಿ-ಎಸ್‌ಟಿ ವರ್ಗದವರು ₹ 5 ಲಕ್ಷ ಪಾವತಿಸಬೇಕಾಗುತ್ತದೆ' ಎಂದು ಸಚಿವ ಸೋಮಣ್ಣ ಅವರು ವಿವರಿಸಿದರು.

'ಮೈಸೂರು, ಬಳ್ಳಾರಿ, ವಿಜಯಪುರ, ಗದಗ, ನೆಲಮಂಗಲ ಸೇರಿ ರಾಜ್ಯದ ವಿವಿಧೆಡೆ ಗೃಹ ಮಂಡಳಿ ಈಗಾಗಲೇ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ 6,015 ನಿವೇಶನಗಳನ್ನು ಮೂರು ತಿಂಗಳಲ್ಲಿ ವಿತರಿಸಲಾಗುವುದು. ನಿವೇಶನಕ್ಕೆ ಅರ್ಜಿ ಸಲ್ಲಿಸಿದವರಿಗೆ ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು' ಎಂದರು.

'ಈ ಬಡಾವಣೆಗಳಲ್ಲಿನ ಮೂಲೆ ನಿವೇಶನಗಳನ್ನು ಹರಾಜು ಹಾಕಲಾಗುವುದು. ನಾಗರಿಕ ಸೌಲಭ್ಯಕ್ಕೆ (ಸಿಎ) ಮೀಸಲಿಟ್ಟ ಜಾಗವನ್ನು ಆಸ್ಪತ್ರೆ, ಶಾಲೆ, ನಗರಸಭೆ-ಪುರಸಭೆ, ಗ್ರಾಮ ಪಂಚಾಯಿತಿ ಕಟ್ಟಡಗಳಿಗೆ ನೀಡಲಾಗುವುದು. ಖಾಸಗಿ ಸಂಘ-ಸಂಸ್ಥೆಗಳು, ಸೇವಾ ಸಂಸ್ಥೆಗಳು ಅರ್ಜಿ ಹಾಕಿದರೆ ಶೇ 30ರಷ್ಟು ರಿಯಾಯಿತಿಯಲ್ಲಿ ನೀಡಲಾಗುವುದು' ಎಂದೂ ಹೇಳಿದರು.


'ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಯೋಜನೆಯಡಿ 48 ಸಾವಿರ ಮನೆಗಳ ನಿರ್ಮಾಣ ಭರದಿಂದ ಸಾಗಿದೆ. 1,967 ಮನೆಗಳನ್ನು ಇದೇ ತಿಂಗಳಲ್ಲಿ ಹಂಚಿಕೆ ಮಾಡಲಾಗುವುದು. ಈ ವರ್ಷದಲ್ಲಿ 20 ಸಾವಿರ ಮನೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

'ಕನಕದಾಸರ ಅರಮನೆಯಲ್ಲಿ ಧ್ವನಿ-ಬೆಳಕು ಪ್ರದರ್ಶನ'

ಬೆಂಗಳೂರು: 'ಸಂತ ಕನಕದಾಸರ ಜನ್ಮಸ್ಥಳ ಬಾಡದಲ್ಲಿ ನಿರ್ಮಿಸಲಾಗಿರುವ ಅರಮನೆಯಲ್ಲಿ ಧ್ವನಿ-ಬೆಳಕು ಪ್ರದರ್ಶನ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಿದ ಅವರು, 'ಕನಕದಾಸರ ಅರಮನೆಯು ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಹೀಗಾಗಿ, ಇನ್ನಷ್ಟು ಉತ್ತಮ



ಪಡಿಸುವ ನಿಟ್ಟಿನಲ್ಲಿ ಧ್ವನಿ-ಬೆಳಕು ಪ್ರದರ್ಶನ ಪ್ರಾರಂಭಿಸಬೇಕು. ಅತ್ಯುತ್ತಮ ಸಂಸ್ಥೆಗಳ ಮೂಲಕ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಬೇಕು' ಎಂದು ತಿಳಿಸಿದರು.

'ಅರಮನೆಯಲ್ಲಿ ಕನಕದಾಸರ ಜೀವನ ಕುರಿತು ಅನಿಮೇಷನ್ ಚಿತ್ರ ಪ್ರದರ್ಶಿಸಲಾಗುತ್ತಿದೆ. ಈ ತಂತ್ರಜ್ಞಾನವನ್ನು ಉನ್ನತೀಕರಿಸಿ, 3ಡಿ ಚಿತ್ರ ನಿರ್ಮಿಸಲು ಪ್ರಸ್ತಾವ ಸಲ್ಲಿಸಿ' ಎಂದು ಸೂಚಿಸಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಸಂತಕವಿ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಿ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಮುಖ್ಯಮಂತ್ರಿ ಸೂಚಿಸಿದರು.

ಜಮೀರ್ ಆಸ್ತಿ: ಬಿಜೆಪಿ ವ್ಯಂಗ್ಯ

ಬೆಂಗಳೂರು: ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರ ಆಸ್ತಿ ಎರಡು ಸಾವಿರ ಪಟ್ಟು ಹೇಗಾಯಿತು ಎಂದು ಬಿಜೆಪಿ ಪ್ರಶ್ನಿಸಿದೆ.

'ನ್ಯಾಶನಲ್ ಟ್ರಾವೆಲ್ಸ್ ಬಸ್ ಓಡಿಸಿ ಜಮೀರ್ ಆಸ್ತಿ ಈ ಪರಿ ಏರಿಕೆಯಾಗಲು ಹೇಗೆ ಸಾಧ್ಯ' ಎಂದು ಬಿಜೆಪಿ ಗುರುವಾರ ಸರಣಿ ಟ್ವೀಟ್ ಮಾಡಿದೆ.

'ಸಿದ್ದರಾಮೋತ್ಸವದ ಗುಂಗಿನಲ್ಲಿರುವ ಸಿದ್ದರಾಮಯ್ಯ ಅವರೇ, ನಿಮ್ಮ ಅತ್ಯಾಪ್ತ ಶಾಸಕ ಜಮೀರ್ ಅಹಮ್ಮದ್ ಆಸ್ತಿ ಎರಡು ಸಾವಿರ ಪಟ್ಟು ಹೆಚ್ಚಾಗಿದೆ. ಸಿದ್ದರಾಮೋತ್ಸವ ಸಮಿತಿಯಲ್ಲಿ ಸ್ಥಾನ ಪಡೆದಿರುವ ಜಮೀರ್ ಎಷ್ಟು ಹೂಡಿಕೆ ಮಾಡಿದ್ದಾರೆ? ಜಮೀರ್ ಪರವಾಗಿ ಸಿದ್ದರಾಮಯ್ಯ ಇಷ್ಟು ವಕಾಲತ್ತು ಹಾಕುವುದನ್ನು ನೋಡಿದರೆ ಇದು ಯಾರ ಕಪ್ಪು ಹಣ ಎಂಬ ಪ್ರಶ್ನೆ ಮೂಡುತ್ತಿದೆ! ಜಮೀರ್ ಅಕ್ರಮದಲ್ಲಿ ಸಿದ್ದರಾಮಯ್ಯ ಪಾಲೆಷ್ಟು' ಎಂದು ಪ್ರಶ್ನಿಸಿದೆ.



ಬಹುಮಾನ ವಿತರಣೆ

ಬಸವನಗುಡಿಯ ನ್ಯಾಷನಲ್ ಕಾಲೇಜು ನಗರದಲ್ಲಿ ಗುರುವಾರ ಆಯೋಜಿಸಿದ್ದ 59ನೇ ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆಯ ಬಹುಮಾನ ವಿತರಣೆ ಸಮಾರಂಭದಲ್ಲಿ ಕಾಲೇಜಿನ ಬಿ.ಎ ಎರಡನೇ ವರ್ಷದ ವಿದ್ಯಾರ್ಥಿಗಳು ಅಭಿನಯಿಸಿದ 'ರುಡಾಲಿ' ನಾಟಕಕ್ಕೆ ಪ್ರಥಮ ಬಹುಮಾನ ವಿತರಿಸಲಾಯಿತು. ರಂಗಕರ್ಮಿ ಕೆ.ಎಂ. ಚೈತನ್ಯ, ನ್ಯಾಷನಲ್ ಎಜುಕೇಷನ್ ಸೊಸೈಟಿಯ ಗೌರವ ಕಾರ್ಯದರ್ಶಿ ಎಸ್.ಎನ್. ನಾಗರಾಜ ರೆಡ್ಡಿ, ರಂಗಕರ್ಮಿಗಳಾದ ರಾಘವೇಂದ್ರ ಪ್ರಸಾದ್ ಪಿ., ಡಿ. ಸುಮಂತ್ ಕುಮಾರ್ ಹಾಗೂ ನಿರಂಜನ ಖಾಲಿಕೊಡ ಇದ್ದಾರೆ – ಪ್ರಜಾವಾಣಿ ಚಿತ್ರ

ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ತಜ್ಞರ ಕಳವಳ

ಒಣಕಣ್ಣು: ಸಮಸ್ಯೆ ಶೇಕಡ 30ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಯಲ್ಲಿಯೇ ಕಚೇರಿ ಕೆಲಸ, ಆನ್‌ಲೈನ್ ತರಗತಿ, ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯಿಂದಾಗಿ ನಗರದಲ್ಲಿ ಒಣಕಣ್ಣಿನ ಸಮಸ್ಯೆ (ಡ್ರೈ ಐ) ಕೋವಿಡ್ ಪೂರ್ವಕ್ಕೆ ಹೋಲಿಸಿದರೆ ಶೇ 30ರಷ್ಟು ಹೆಚ್ಚಳವಾಗಿದೆ' ಎಂದು ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಇಂದಿರಾನಗರದ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾದ ಡ್ರೈ ಐ ಕ್ಲಿನಿಕ್ ಅನ್ನು ಸಿ.ವಿ. ರಾಮನ್ ನಗರದ ಶಾಸಕ ಎಸ್. ರಘು ಗುರುವಾರ ಉದ್ಘಾಟಿಸಿದರು. ಕ್ಲಿನಿಕ್‌ನ ಉದ್ಘಾಟನಾ ಕೊಡುಗೆಯಾಗಿ ಆಸ್ಪತ್ರೆಯು ಆ.15ರ ವರೆಗೆ ಉಚಿತ ಒಣಕಣ್ಣು ತಪಾಸಣೆ ಮತ್ತು ವೈದ್ಯರ ಸಮಾಲೋಚನೆ ಸೌಲಭ್ಯ ಘೋಷಿಸಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಆಸ್ಪತ್ರೆಯ ವೈದ್ಯೆ ಡಾ. ಸಂಜನಾ ವತ್ಸ, 'ಸುದೀರ್ಘ ಅವಧಿ ಡಿಜಿಟಲ್ ಪರದೆಯನ್ನು ನೋಡುವುದರಿಂದ ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಡಿಜಿಟಲ್ ಪರದೆ ಮುಂದೆ ಕೆಲಸ ಮಾಡುವವರು ಸಾಮಾನ್ಯವಾಗಿ ಕಣ್ಣಿನ ರೆಪ್ಪೆಯನ್ನು ಮಿಟುಕಿಸುವುದು ಕಡಿಮೆ. ಇದರ ಜೊತೆಗೆ ಪರದೆಯಿಂದ ಹೊರ ಹೊಮ್ಮುವ ಬೆಳಕು ಕಣ್ಣಿನ ಮೇಲೆ ನೇರ ಪರಿಣಾಮ ಬೀರುತ್ತದೆ' ಎಂದರು.

'ಮಧುಮೇಹ, ಥೈರಾಯ್ಡ್ ಸಮಸ್ಯೆಗಳು ಮತ್ತು ವಿಟಮಿನ್ ಎ ಕೊರತೆಯೂ ಒಣಕಣ್ಣು ಸಮಸ್ಯೆಗೆ ಕಾರಣವಾಗುತ್ತಿದೆ. 20ರಿಂದ 40 ವರ್ಷದವರಲ್ಲಿ ಈ ಸಮಸ್ಯೆ ಹೆಚ್ಚಳವಾಗುತ್ತಿದೆ. ಇಂತಹ ಸಮಸ್ಯೆಗಳನ್ನು ಎದುರಿಸುತ್ತಿರುವವರಲ್ಲಿ ಬಹುತೇಕರು ಐಟಿ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳಾಗಿದ್ದಾರೆ. ಒಣಕಣ್ಣಿನ ಸಮಸ್ಯೆ ಇನ್ನೂ ಶೇ 15ರಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ' ಎಂದು ತಿಳಿಸಿದರು.

ಆಸ್ಪತ್ರೆಯ ಕ್ಲಿನಿಕಲ್ ಸೇವೆಯ ಪ್ರಾದೇಶಿಕ ಮುಖ್ಯಸ್ಥೆ ಡಾ.ಅರ್ಚನಾ ಎಸ್., 'ಕಣ್ಣಿನಲ್ಲಿ ತುರಿಕೆ, ಕೆಂಪು ಬಣ್ಣಕ್ಕೆ ತಿರುಗುವುದು, ದೃಷ್ಟಿ ಮಸುಕಾಗುವುದು, ಅಸ್ವಸ್ಥತೆ ಸೇರಿ ವಿವಿಧ ಲಕ್ಷಣಗಳು ಕಂಡುಬಂದ ತಕ್ಷಣ ನೇತ್ರ ತಜ್ಞರನ್ನು ಭೇಟಿ ಮಾಡಿ, ಸೂಕ್ತ ಚಿಕಿತ್ಸೆ ನೀಡಲಾಗುವುದು. ಇಂತಹ ರೋಗಲಕ್ಷಣಗಳಿಗೆ ಚಿಕಿತ್ಸೆಯನ್ನು ಪಡೆದುಕೊಳ್ಳದಿದ್ದರೆ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ' ಎಂದು ಹೇಳಿದರು.

ಎಥೆನಾಲ್: ಇಂದು ವಿಚಾರಸಂಕಿರಣ

ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಮತ್ತು ಬಿಕ್ವೆಸ್ಟ್ ಕನ್ಸಲ್ಟೆನ್ಸಿ ಸಹಯೋಗದಲ್ಲಿ 'ರಾಜ್ಯದಲ್ಲಿ ಎಥೆನಾಲ್ ಉತ್ಪಾದನೆ ನಿಯಮ, ಆವಿಷ್ಕಾರ ಮತ್ತು ಸ್ಥಿರತೆ' ಎಂಬ ವಿಷಯದ ಕುರಿತು ಒಂದು ದಿನದ ವಿಚಾರಸಂಕಿರಣವನ್ನು ಶುಕ್ರವಾರ (ಜುಲೈ8) ಬೆಳಿಗ್ಗೆ 9.30ಕ್ಕೆ ಎಂ.ಜಿ. ರಸ್ತೆಯಲ್ಲಿರುವ ತಾಜ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ.

ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಘಟಕಗಳನ್ನು ಸ್ಥಾಪಿಸಿ, ಅದರಿಂದ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳಿಂದ ಪೊಟ್ಯಾಷಿಯಂ, ಜೈವಿಕ ಗೊಬ್ಬರ ಮತ್ತು ಮಿಥೇನ್ ಗ್ಯಾಸ್ ಉತ್ಪಾದಿಸಬಹುದು. ಸದ್ಯ ರಾಜ್ಯದಲ್ಲಿ 31 ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಉತ್ಪಾದನೆ ಮಾಡಲಾಗುತ್ತಿದೆ. ಹೊಸದಾಗಿ 68 ಎಥೆನಾಲ್ ಘಟಕಗಳನ್ನು ಸ್ಥಾಪಿಸಿ, ಸಾಮರ್ಥ್ಯ ಹೆಚ್ಚಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ ಎಂದು ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಚಾರಸಂಕಿರಣವನ್ನು ಉದ್ಘಾಟನೆ ಮಾಡಲಿದ್ದಾರೆ.

12ರಂದು ಬಿಡಿಎ ಕಚೇರಿ ಮುಂದೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯನ್ನು 2013ರ ಕೇಂದ್ರ ಸರ್ಕಾರದ ಭೂಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆಯಡಿ ರೂಪಿಸಬೇಕು. ಇಲ್ಲದಿದ್ದರೆ ಯೋಜನೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಜುಲೈ 12ರಂದು ಬಿಡಿಎ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಪೆರಿಫೆರಲ್ ಭೂಸ್ವಾಧೀನ ರೈತರ ಹೋರಾಟ ಸಮಿತಿ ತಿಳಿಸಿದೆ.

ಬೆಂಗಳೂರಿನ ಉತ್ತರ ಭಾಗದಲ್ಲಿರುವ 65 ಕಿ.ಮೀ. ವರ್ತುಲ ರಸ್ತೆ ಅಭಿವೃದ್ಧಿಗೆ 2005ರಲ್ಲಿ ಬಿಡಿಎ ಯೋಜನೆ ರೂಪಿಸಿ, 1,810 ಎಕರೆ ರೈತರ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಆದರೆ ಇದುವರೆಗೂ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಇದರಿಂದ ಈ ಭಾಗದ ರೈತ ಕುಟುಂಬಗಳು ಕಂಗಾಲಾಗಿವೆ. ಇದಕ್ಕೆ ಸಂಬಂಧಿಸಿದಂತೆ ಬಿಡಿಎ ಮತ್ತು ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದರೂ ರೈತರಿಗೆ ಪರಿಹಾರ ನೀಡುವ ಕುರಿತು ತೀರ್ಮಾನ ಕೈಗೊಂಡಿಲ್ಲ ಎಂದು ಸಮಿತಿ ಸದಸ್ಯ ಶ್ರೀನಿವಾಸ ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಜನವರಿ 1, 2022ರಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅಬ್ದುಲ್ ನಜೀರ್ ಪೀಠವು, ಬಿಡಿಎಗೆ 2013ರ ಭೂಸ್ವಾಧೀನ ಮತ್ತು ಪುನರ್ ವಸತಿ ಕಾಯ್ದೆ ಅನ್ವಯಿಸುವುದಿಲ್ಲ. 1894ರ ಕಾಯ್ದೆ ಅಡಿಯಲ್ಲಿ ಬರುವ ಬಿಡಿಎ ಕಾಯ್ದೆಯಡಿ ಪರಿಹಾರವನ್ನು ನೀಡಿ ಯೋಜನೆ ಮುಂದುವರಿಸಬೇಕು ಎಂದು ನಿರ್ದೇಶಿಸಿತ್ತು. ಇದನ್ನೇ ಆಧರಿಸಿ 2013ರ ಭೂಸ್ವಾಧೀನ ಮತ್ತು ಪುನರ್ ವಸತಿ ಕಾಯ್ದೆ ಬಿಡಿಎಗೆ ಅನ್ವಯಿಸುವುದಿಲ್ಲ ಎಂದು ಬಿಡಿಎ ಅಧಿಕಾರಿಗಳು ಹೇಳುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸದ್ಯ ಈ ಪ್ರದೇಶದಲ್ಲಿ ಒಂದು ಎಕರೆ ಜಮೀನಿಗೆ ₹4–5 ಕೋಟಿ ಮಾರುಕಟ್ಟೆ ಬೆಲೆ ಇದೆ. ಎಲ್ಲಾ ಪಕ್ಷಗಳ ಜನಪ್ರತಿನಿಧಿಗಳು ಈ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದ್ದಾರೆ ಎಂದು ಸಮಿತಿ ಸದಸ್ಯರು ಆರೋಪಿಸಿದರು.

'ಬೆಂಗಳೂರಿನ ಅಭಿವೃದ್ಧಿಗಾಗಿ ವರ್ತುಲ ರಸ್ತೆ ಯೋಜನೆಗೆ ನಾವು ಜಮೀನು ನೀಡಲು ಸಿದ್ಧರಿದ್ದೇವೆ. ಆದರೆ 2013ರ ಭೂಸ್ವಾಧೀನ ಕಾಯ್ದೆ ಅಡಿಯಲ್ಲಿ ಬೆಲೆ ನಿಗದಿಪಡಿಸಿ ಖರೀದಿಸಬೇಕು. ಇಲ್ಲದಿದ್ದರೆ ಈ ಯೋಜನೆಯನ್ನು ರದ್ದುಗೊಳಿಸಬೇಕು. ಸುಮಾರು 18 ವರ್ಷಗಳಿಂದ ಹೋರಾಟ ನಡೆಸಿದರೂ ಇದುವರೆಗೂ ಕ್ರಮ ಕೈಗೊಳ್ಳದಿರುವುದು ಬಿಡಿಎ ಬೇಜವಾಬ್ದಾರಿತನಕ್ಕೆ ಸಾಕ್ಷಿ' ಎಂದರು.

ವಿಶಾಲಾಕ್ಷಿಗೆ ಬಡ್ತಿ

ಬೆಂಗಳೂರು: ಎಂ.ಕೆ. ವಿಶಾಲಾಕ್ಷಿ ಅವರಿಗೆ ವಿಧಾನಸಭೆಯ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.



ಕಾರ್ಯದರ್ಶಿ ಹುದ್ದೆಯ ಕಾರ್ಯಭಾರ ಜವಾಬ್ದಾರಿಯಲ್ಲಿದ್ದ ವಿಶಾಲಾಕ್ಷಿ ಅವರಿಗೆ ವಿಧಾನಸಭೆ ಸಚಿವಾಲಯದ ನೇಮಕಾತಿ ನಿಯಮಗಳ ಅನ್ವಯ ಮುಂಬಡ್ತಿ ನೀಡಿ ಅಧಿಸೂಚನೆ ಹೊರಡಿಸಲಾಗಿದೆ.

'3 ತಿಂಗಳಲ್ಲಿ ಎರಡು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂತರಪಾಳ್ಯದಲ್ಲಿ 200 ಹಾಸಿಗೆ ಮತ್ತು ದಾಸರಹಳ್ಳಿಯಲ್ಲಿ 290 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮೂರು ತಿಂಗಳಲ್ಲಿ ಲೋಕಾರ್ಪಣೆಯಾಗಲಿವೆ ಎಂದು ಗುರುವಾರ ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಪಂತರಪಾಳ್ಯದಲ್ಲಿ ನಿರ್ಮಿಸಲಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕನಕ ಭವನ,



ವಸತಿ ಸಚಿವ ವಿ. ಸೋಮಣ್ಣ ಅವರು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು. ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ತ್ರಿಲೋಕ ಚಂದ್ರ, ವಲಯ ಆಯುಕ್ತ ದೀಪಕ್ ಇದ್ದರು

ಚಂದ್ರಾಲೇಔಟ್ ಪ್ರಾಥಮಿಕ ಆರೋಗ್ಯ ಕೇಂದ್ರ, ಸ್ಪೆಕ್ಟ್ರಮ್ ಬೀದಿ ದೀಪಗಳ ಕಂಟ್ರೋಲ್ ರೂಂ, ಎಂ.ಸಿ.ಬಡಾವಣೆ ಆಸ್ಪತ್ರೆ ಹಾಗೂ ಅಗ್ರಹಾರ ದಾಸರಹಳ್ಳಿ ಆಸ್ಪತ್ರೆ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿ, 'ಆರ್ಥಿಕವಾಗಿ ಹಿಂದುಳಿದ ಮಕ್ಕಳು ಐಎಎಸ್ ಮತ್ತು ಐಪಿಎಸ್ ಅಧಿಕಾರಿಯಾಗಬೇಕು. ಅವರ ಶಿಕ್ಷಣದ ಆಸೆ ಈಡೇರಿಸಲು ಕನಕದಾಸರ ಸ್ಮರಣೆಯಲ್ಲಿ ಕನಕ ಭವನ ನಿರ್ಮಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 15ರಂದು ಇದನ್ನು ಉದ್ಘಾಟಿಸಲಿದ್ದಾರೆ' ಎಂದರು.

ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ತ್ರಿಲೋಕ ಚಂದ್ರ, ವಲಯ ಆಯುಕ್ತ ದೀಪಕ್, ಮುಖ್ಯ ಎಂಜಿನಿಯರ್ ಡೊಡ್ಡಯ್ಯ, ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಕುರುಬ ಸಮಾಜದ ಮುಖಂಡ ಟಿ.ವಿ.ಬಳಗಾವಿ, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಎಂ.ಸೋಮಶೇಖರ್, ರಾಮಪ್ಪ, ಶ್ರೀಧರ್ ಇದ್ದರು.



ಬೆಂಗಳೂರಿನಲ್ಲಿ ಗುರುವಾರ ದಿನವಿಡೀ ತುಂತುರು ಮಳೆಯ ಸಿಂಚನವಾಯಿತು. ಮೋಡದ ಹೊದಿಕೆಯ ನಡುವೆ ವಿಧಾನಸೌಧ, ಹೈಕೋರ್ಟ್ ಒಳಗೊಂಡ ಉದ್ಯಾನನಗರಿಯು ಕಂಡಿದ್ದು ಹೀಗೆ –ಪ್ರಜಾವಾಣಿ ಚಿತ್ರ/ಎಂ.ಎಸ್‌.ಮಂಜುನಾಥ್

ಚಳಿ, ಗಾಳಿ: ನಗರದ ನಾಗರಿಕರಿಗೆ ಮುಂಗಾರು ಮಳೆಯ ಹಿತಾನುಭವ

ರಾಜಧಾನಿಯಲ್ಲಿ ನಿರಂತರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ದಿನವಿಡೀ ಮಳೆಯಾಗಿದೆ. ಬೆಳಿಗ್ಗೆ ನಾಗಸಂದ್ರ, 8ನೇ ಮೈಲು, ಜಾಲಹಳ್ಳಿ, ಪೀಣ್ಯ ಕೈಗಾರಿಕೆ ವಲಯ, ಕೆಂಗೇರಿ, ಯಶವಂತಪುರ, ಶ್ರೀರಾಮಪುರ, ಮಲ್ಲೇಶ್ವರ, ಯಲಹಂಕ, ರಾಜಾಜಿನಗರ ಭಾಗದಲ್ಲಿ ಜೋರು ಮಳೆ ಸುರಿಯಿತು. ಮಧ್ಯಾಹ್ನ ಸ್ವಲ್ಪ ಸಮಯ ಬಿಡುವು ನೀಡಿದ್ದ ಮಳೆಯು ಸಂಜೆಯ ಬಳಿಕ ಮತ್ತೆ ಅಲ್ಲಲ್ಲಿ ಜೋರಾಗಿ ಸುರಿಯಿತು.

ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಕಚೇರಿಗೆ ತೆರಳುತ್ತಿದ್ದವರು ತೊಂದರೆಗೆ ಸಿಲುಕಿದರು. ಶಾಲಾ–ಕಾಲೇಜಿಗೆ ತೆರಳಲೂ ವಿದ್ಯಾರ್ಥಿಗಳು ಪರದಾಡಿದರು. ಸಂಜೆಯೂ ಮನೆ ಸೇರಲು ಜನರು ಪರದಾಡಿದರು.

ನಗರದಲ್ಲಿ ಥಂಡಿ ವಾತಾವರಣವಿ-ತ್ತು. ರಾಜಧಾನಿಯ ಜನರು ಮುಂಗಾರು ಮಳೆಯ ಹಿತಾನುಭವ ಅನುಭವಿಸಿದರು. ಜಿಟಿಜಿಟಿ ಮಳೆಯಿಂದ ರಕ್ಷಣೆ ಪಡೆಯಲು ಜನರು ಕೊಡೆ ಹಿಡಿದು ಸಾಗಿದರು. ನಿರಂತರ ಮಳೆಯಿಂದ ನಗರದ ಉಷ್ಣಾಂಶವೂ ತಗ್ಗಿತ್ತು.

ನಗರದಲ್ಲಿ ಗುಂಡಿ ಬಿದ್ದ ರಸ್ತೆಗಳಲ್ಲಿ ಮಳೆಯ ನೀರು ಸಂಗ್ರಹಗೊಂಡಿದ್ದು, ವಾಹನ ಸವಾರರು ಪರದಾಡಿದರು. ರಾಜಧಾನಿಯಲ್ಲಿ ಶುಕ್ರವಾರವೂ ಇದೇ ವಾತಾವರಣ ಮುಂದುವರಿಯಲಿದ್ದು, ವಿವಿಧೆಡೆ ಜೋರು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜೋರು ಮಳೆಯಾದರೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ ಆತಂಕವಿದೆ. ಮೇ ಅಂತ್ಯ ಹಾಗೂ ಜೂನ್ ಮೊದಲ ವಾರ ನಗರದಲ್ಲಿ ಸುರಿದ ಭಾರಿ ಮಳೆಯಿಂದ ಜನರು ಸಮಸ್ಯೆಗೆ ಸಿಲುಕಿದ್ದರು.



ಹನಿಮಳೆ– ಬಿಸಿಜೋಳ... ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ಗುರುವಾರ ಮಳೆಯ ವೇಳೆ ಬಿಸಿ ಬಿಸಿ ಜೋಳದ ಕಾಳು ಖರೀದಿಗೆ ಕಾದಿದ್ದ ಜನರು – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

‘ಬಿಬಿಎಂಪಿ ಮುಖ್ಯ ಆಯುಕ್ತರ ಫೋಟೊ ದುರುಪಯೋಗ’

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಹೆಸರು ಹಾಗೂ ಚಿತ್ರವನ್ನು ದುರುಪ-ಯೋಗಪಡಿಸಿಕೊಂಡು ಹಲವರಿಗೆ ಸಂದೇಶ ಕಳುಹಿಸಲಾಗುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂಬ ದೂರು ಸೈಬರ್ ಕ್ರೈಂ ವಿಭಾಗದಲ್ಲಿ ದಾಖಲಾಗಿದೆ.

ವ್ಯಕ್ತಿಯೊಬ್ಬ 70765 22681 ಸಂಖ್ಯೆ ಮೂಲಕ ಎಸ್‌ಎಂಎಸ್ ಹಾಗೂ ವಾಟ್ಸ್‌ಆ್ಯಪ್ ಸಂದೇಶ ಕಳು-ಹಿಸುತ್ತಿದ್ದಾನೆ. ಸಂದೇಶದಲ್ಲಿ ಮುಖ್ಯ ಆಯುಕ್ತರ ಹೆಸರು, ಚಿತ್ರವನ್ನು ಬಳಸಿ-ಕೊಳ್ಳುತ್ತಿದ್ದಾನೆ. ಚಾಟ್ ಮಾಡಿ ಗಿಫ್ಟ್ ಕಾರ್ಡ್ ಬಗ್ಗೆ ವಿಚಾರಿಸಿ, ವೆಬ್‌ಸೈಟ್ ಲಿಂಕ್ ಕಳುಹಿಸಿದ್ದಾನೆ. ಅಧಿಕಾರಿಗಳು ಸೇರಿದಂತೆ ಅವರ ಪರಿಚಿತರಿಗೆ ಸಂದೇಶ ಕಳುಹಿಸಲಾಗಿದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮಾಹಿತಿ ತಂತ್ರಜ್ಞಾನ ವಿಭಾಗದ ನಿರ್ದೇಶಕರು ಬೆಂಗಳೂರು ನಗರ ಕೇಂದ್ರ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮುಖ್ಯ ಆಯುಕ್ತರ ಹೆಸರಿನಲ್ಲಿ ಇಂತಹ ಯಾವುದೇ ಸಂದೇಶಗಳು ಬಂದರೆ ಕೂಡಲೇ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿ ಎಂದು ತುಷಾರ್ ಗಿರಿನಾಥ್ ನಾಗರಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಒರಾಯನ್ ಮಾಲ್‌ನಲ್ಲಿ ಕೊರಿಯಾ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಒರಾಯನ್ ಮಾಲ್ ಬ್ರಿಗೇಡ್ ಗೇಟ್‌ವೇನಲ್ಲಿ ಕೊರಿಯಾ ಉತ್ಸವ ಆಯೋಜಿಸಲಾಗಿದೆ.

ಜುಲೈ 10ರವರೆಗೆ ಉತ್ಸವ ನಡೆಯಲಿದೆ. ಕೊರಿಯಾ ಸಂಸ್ಕೃತಿ, ಸಾಹಸ ಕ್ರೀಡೆಗಳು ಹಾಗೂ ಪಾಕಶೈಲಿಗಳನ್ನು ಪರಿಚಯಿಸುವುದು ಉತ್ಸವದ ಉದ್ದೇಶವಾಗಿದೆ.

‘ಉಭಯ ದೇಶಗಳ ಸಂಸ್ಕೃತಿ ಪರಿಚಯಿಸುವ ಕಾರ್ಯಕ್ರಮ ಇದಾಗಿದೆ’ ಎಂದು ಬ್ರಿಗೇಡ್ ಗ್ರೂಪ್ ಕಾರ್ಯನಿರ್ವಾಹಕ ನಿರ್ದೇಶಕ ನಿರೂಪ ಶಂಕರ್ ಪ್ರತಿಕ್ರಿಯಿಸಿದ್ದಾರೆ.

‘ಭಾರತದಲ್ಲಿ ಕೊರಿಯನ್ ಉತ್ಪನ್ನಗಳಿಗೆ ಅಪಾರ ಬೇಡಿಕೆ ಇದೆ. ಈ ಕಾರ್ಯಕ್ರಮದ ಮೂಲಕ ಆಹಾರ, ಸಂಸ್ಕೃತಿ ಮತ್ತು ಉತ್ಪನ್ನಗಳೊಂದಿ-ಗೆ ಕೊರಿಯಾವನ್ನು ಪರಿಚಯಿಸಲು ಸಾಧ್ಯವಾಗಲಿದೆ. ಭವಿಷ್ಯದಲ್ಲಿ ಸಹ ಜನರಿಂದ ಇದೇ ಪ್ರೀತಿಯನ್ನು ಸ್ವೀಕರಿಸುವ ಭರವಸೆಯನ್ನು ಹೊಂದಿದ್ದೇವೆ’ ಎಂದು ಭಾರತದಲ್ಲಿ ಕೊರಿಯಾದ ರಾಯಭಾರಿಯಾಗಿರುವ ಜಾಂಗ್ ಜೆ-ಬಕ್ ಹೇಳಿದ್ದಾರೆ.



ಸ್ವಾತಂತ್ರ್ಯ ಉದ್ಯಾನದಲ್ಲಿ ವೈದ್ಯಕೀಯ ಸಿಬ್ಬಂದಿ ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗುತ್ತಿಗೆ–ಹೊರ ಗುತ್ತಿಗೆ ನೌಕರರ ಆಕ್ರೋಶ

ಸಮಾನ ವೇತನಕ್ಕಾಗಿ ಆಗ್ರಹಿಸಿ ವೈದ್ಯಕೀಯ ಸಿಬ್ಬಂದಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾನ ಕೆಲಸಕ್ಕೆ ಸಮಾನವೇತನ, ಸೇವಾಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಮತ್ತು ಹೊರ ಗುತ್ತಿಗೆ ನೌಕರರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಮತ್ತು ಹೊರ ಗುತ್ತಿಗೆ ನೌಕರರ ಸಂಘದ ಗೌರವಾಧ್ಯಕ್ಷ ಹಾಗೂ ಬಿಜೆಪಿ ಶಾಸಕ ಆಯನೂರು ಮಂಜುನಾಥ್ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾಯಿಸಿದ್ದ ನೌಕರರು, ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸಾವಿರಾರು ನೌಕರರು ಕರ್ತವ್ಯಕ್ಕೆ ಹಾಜರಾಗದೆ ಮುಷ್ಕರದಲ್ಲಿ ಭಾಗಿಯಾಗಿದ್ದರಿಂದ ಕೆಲ ಸರ್ಕಾರಿ ಆಸ್ಪತ್ರೆಗಳ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು.

‘ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿಯು 2020ರ ಡಿ.28ಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿ ಅನುಷ್ಠಾನ ಹಾಗೂ ಬೇಡಿಕೆಗಳ ಈಡೇರಿಕೆ ಬಗ್ಗೆ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರಿಗೆ ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ವರದಿ ಅನುಷ್ಠಾನಕ್ಕೆ ಸರ್ಕಾರ ಕ್ರಮ ಕೈಗೊಂಡಿಲ್ಲ’ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ವಯೋಮಿತಿ ಸಡಿಲಿಕೆ, ಕೃಪಾಂಕ ಹೆಚ್ಚಳ, ಮೌಲ್ಯಮಾಪನ ಪದ್ಧತಿ ರದ್ದತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಸಂಘದ ಅಧ್ಯಕ್ಷ ಎಚ್‌.ವೈ. ವಿಶ್ವರಾಧ್ಯ ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಕೆ.ಸುಧಾಕರ್, ‘ಗುತ್ತಿಗೆ-ಹೊರ-ಗುತ್ತಿಗೆ ನೌಕರರ ವೇತನ ಹೆಚ್ಚಳಕ್ಕೆ ಪ್ರಯತ್ನಿಸಲಾಗುತ್ತಿದೆ. ಆರೋಗ್ಯ ವಿಮೆ ವಿಸ್ತರಿಸಲು ಕೂಡ ಸರ್ಕಾರ ಕ್ರಮ ಕೈಗೊಂಡಿದೆ’ ಎಂದು ತಿಳಿಸಿದರು.

‘ಖಾಯಂ ನೌಕರರಿಗೆ ಕೊಡುವಷ್ಟೇ ವೇತನ ನೀಡುವುದು ಕಷ್ಟ. ಆದರೆ, ವೇತನ ಹೆಚ್ಚಿಸಲು ಪ್ರಯತ್ನಿಸಲಾಗು-ವುದು. ಆರೋಗ್ಯ ವಿಮೆ ವಿಸ್ತರಣೆ, 10 ದಿನಗಳ ವೇತನ ಸಹಿತ ರಜೆ ಬೇಡಿಕೆಗಳಿಗೆ ಸ್ಪಂದಿಸಲಾಗುವುದು. ನೌಕರರು ಮುಷ್ಕರ ಕೈಬಿಟ್ಟು ಸೇವೆಗೆ ಹಿಂದಿರುಗಬೇಕು’ ಎಂದು ಮನವಿ ಮಾಡಿದರು.

ಆಯನೂರು ಮನವೊಲಿಕೆ: ಮುಷ್ಕರ ಹಿಂದಕ್ಕೆ

ಸರ್ಕಾರ ಭರವಸೆ ನೀಡಿದ ಬೆನ್ನಲ್ಲೇ, ಮುಷ್ಕರ ವಾಪಸ್ ಪಡೆಯುವಂತೆ ಆಯನೂರು ಮಂಜುನಾಥ್ ಅವರು ನೌಕರರ ಮನವೊಲಿಸಿದರು.

ವೇತನ ಹೆಚ್ಚಳ ಸಂಬಂಧ ಮುಖ್ಯಮಂತ್ರಿ ಜತೆ ಚರ್ಚಿಸಿ ಎರಡು ದಿನಗಳಲ್ಲಿ ಆದೇಶ ಹೊರಡಿಸುವುದಾಗಿ ಸಚಿವರು ಭರವಸೆ ನೀಡಿದ್ದರೂ, ಆದೇಶ ಹೊರಡಿಸುವ ತನಕ ಹೋರಾಟ ಕೈಬಿಡುವುದಿಲ್ಲ ಎಂದು ನೌಕರರು ಪಟ್ಟು ಹಿಡಿದರು.

‘ಸರ್ಕಾರವೇ ಮುಷ್ಕರನಿರತ ನೌಕರರ ಬಳಿಗೆ ಬಂದು ಭರವಸೆ ನೀಡಿದೆ. ಬೇಡಿಕೆ ಈಡೇರದಿದ್ದರೆ ಅಧಿವೇಶನದಲ್ಲಿ ನಿಮ್ಮ ಪರವಾಗಿ ಹೋರಾಟ ನಡೆಸುತ್ತೇನೆ’ ಎಂದು ಆಯನೂರ ಭರವಸೆ ನೀಡಿದರು.

ಇದಕ್ಕೆ ಒಪ್ಪಿದ ನೌಕರರು, ‘ಮುಷ್ಕರವನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ. ಭರವಸೆ ಈಡೇರದಿದ್ದರೆ ಹೋರಾಟ ಮತ್ತೆ ತೀವ್ರಗೊಳ್ಳಲಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- ಕರ್ತವ್ಯಕ್ಕೆ ಹಾಜರಾಗದೆ ಮುಷ್ಕರದಲ್ಲಿ ಭಾಗಿಯಾಗಿದ್ದ ಸಾವಿರಾರು ನೌಕರರು
- ಕೆಲ ಸರ್ಕಾರಿ ಆಸ್ಪತ್ರೆಗಳ ವೈದ್ಯಕೀಯ ಸೇವೆಯಲ್ಲಿ ವ್ಯತ್ಯಯ
- ಸರ್ಕಾರದ ನಡೆಗೆ ಖಂಡನೆ

ಎಸಿಬಿ ಕಾರ್ಯವೈಖರಿ ಬಗ್ಗೆ ಸಂತೋಷ್ ಹೆಗ್ಡೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಾಯುಕ್ತವನ್ನು ನಿಷ್ಕ್ರಿಯಗೊಳಿಸಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಸ್ತಿತ್ವಕ್ಕೆ ತರಲಾಯಿತು. ಆದರೆ, ಅಕ್ರಮಗಳಲ್ಲಿ ಭಾಗಿಯಾದ ಯಾವ ಶಾಸಕರ ವಿರುದ್ಧವೂ ಎಸಿಬಿ ಇದುವರೆಗೂ ಪ್ರಕರಣ ದಾಖಲಿಸಿಲ್ಲ’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅಸಮಾಧಾನ ವ್ಯಕ್ತಪಡಿಸಿದರು.

ಪೀಸ್‌ಫುಲ್ ಇಂಡಿಯಾ ಟ್ರಸ್ಟ್ ಮತ್ತು ಪೀಸ್‌ಫುಲ್ ಇಂಡಿಯಾ ಟಿವಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಮಾನವ ಹಕ್ಕು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ಗುರುವಾರ ಆಯೋಜಿಸಿದ್ದ ‘ನ್ಯಾಯಕ್ಕಾಗಿ ಲೋಕಾಯುಕ್ತ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಲೋಕಾಯುಕ್ತ ಮತ್ತು ಎಸಿಬಿ ಕಾರ್ಯವೈಖರಿಯನ್ನು ವಿಶ್ಲೇಷಿಸಿದರು.

‘ಇತ್ತೀಚೆಗಷ್ಟೇ ಐಎಎಸ್ ಅಧಿಕಾರಿಯನ್ನು ಎಸಿಬಿ ಬಂಧಿಸಿದೆ. ಈ ಪ್ರಕರಣ-ವನ್ನು ಹೊರತುಪಡಿಸಿದರೆ ಭ್ರಷ್ಟಾಚಾ-ರದಲ್ಲಿ ಭಾಗಿಯಾದ ಯಾವ ಐಎಎಸ್ ಅಧಿಕಾರಿ ವಿರುದ್ಧವೂ ಪ್ರಕರಣ ದಾಖಲಿಸಿಲ್ಲ. ಸರ್ಕಾರಗಳು ಎಸಿಬಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಡೆಸಿಕೊ-ಳ್ಳುತ್ತಿವೆ’ ಎಂದು ಟೀಕಿಸಿದರು.

‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಎಸಿಬಿ ಸ್ಥಾಪಿಸಿತು. ಆಗ ವಿರೋಧ ಪಕ್ಷದಲ್ಲಿದ್ದ ಬಿಜೆಪಿ, ಅಧಿಕಾರಕ್ಕೆ ಬಂದರೆ 24 ಗಂಟೆಗಳಲ್ಲಿ ಎಸಿಬಿ ರದ್ದುಪಡಿಸಿ ಲೋಕಾಯುಕ್ತ ಬಲಪಡಿಸುವುದಾಗಿ ಘೋಷಿಸಿತ್ತು. 24 ತಿಂಗಳಾದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ ಎಸಿಬಿಯನ್ನು ಬಿಜೆಪಿ ಪೋಷಿಸುತ್ತಿದೆ. ಇದರಿಂದ, ಭ್ರಷ್ಟ ವ್ಯವಸ್ಥೆಗೆ ಯಾವುದೇ ಭಯ ಇಲ್ಲದಂತಾಗಿದೆ. ಎಲ್ಲ ರಾಜಕೀಯ ಪಕ್ಷಗಳ ಧೋರಣೆ ಮತದಾರರನ್ನು ಮಂಕು ಮಾಡುವ ಉದ್ದೇಶವೇ ಆಗಿದೆ’ ಎಂದು ಟೀಕಿಸಿದರು.

‘ಕಾನೂನುಗಳನ್ನು ರೂಪಿಸುವುದು ಶಾಸಕಾಂಗದ ಜವಾಬ್ದಾರಿ. ಆದರೆ, ಕಾನೂನು ರೂಪಿಸುವುದಕ್ಕೆಸೀಮಿತವಾ-ಗದೆಯೇ ಅಧಿಕಾರ ದುರ್ಬಳಕೆ ಮಾಡಿ-ಕೊಳ್ಳುತ್ತಿರುವುದೇ ಹೆಚ್ಚು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಇದೆ. ಭ್ರಷ್ಟಾಚಾರ ಹೆಚ್ಚಾದಂತೆ ರಾಜ್ಯದಲ್ಲಿಯೂ ಲೋಕಾಯುಕ್ತ ಸ್ಥಾಪಿಸಲಾಯಿತು. ಆದರೆ, ಕರ್ನಾಟಕದಲ್ಲಿ ಲೋಕಾಯುಕ್ತ ಸಂಸ್ಥೆಯ ಅಸ್ತಿತ್ವ ತೋರಿಸಿಕೊಟ್ಟಿದ್ದು ಎನ್. ವೆಂಕಟಾಚಲಯ್ಯ’ ಎಂದರು.

‘ನಾನು ಅಕ್ರಮ ಗಣಿಗಾರಿಕೆ ವಿರುದ್ಧ ವರದಿ ನೀಡಿದ್ದೆ. ಮುಖ್ಯಮಂತ್ರಿಗಳಾಗಿದ್ದ ಮೂವರ ಹೆಸರು ಈ ವರದಿಯಲ್ಲಿದೆ. ಈ ವರದಿ ಜಾರಿಗೆ 2012ರಲ್ಲಿ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ನಡೆಸಿತು. ಆದರೆ, ಅಧಿಕಾರಕ್ಕೆ ಬಂದ ನಂತರ ಜಾರಿಗೊಳಿಸಲಿಲ್ಲ’ ಎಂದು ದೂರಿದರು.



ಎನ್‌. ಸಂತೋಷ್ ಹೆಗ್ಡೆ ಅವರು ಕರಪತ್ರವನ್ನು ಬಿಡುಗಡೆ ಮಾಡಿದರು. ಮಾನವ ಹಕ್ಕು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ ಗೌರವಾಧ್ಯಕ್ಷ ಡಿ.ದೇವರಾಜು, ಅಧ್ಯಕ್ಷ ನರಸಿಂಹಯ್ಯ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ಪುಟ್ಟಸ್ವಾಮಿ ಇದ್ದರು –ಪ್ರಜಾವಾಣಿ ಚಿತ್ರ

ಆಕ್ಷೇಪಾರ್ಹ ಟ್ವೀಟ್: ಬಿಜೆಪಿ ಐ.ಟಿ ಸೆಲ್ ಉಸ್ತುವಾರಿಗೆ ಕೊಕ್

ಗುರುಗ್ರಾಮ (ಪಿಟಿಐ): ಇಸ್ಲಾಂ ವಿರುದ್ಧ ಮಾಡಿದ್ದ ಟ್ವೀಟ್‌ಗೆ ಸಂಬಂಧಿಸಿದಂತೆ ಹರಿಯಾಣ ಐ.ಟಿ ಘಟಕದ ಉಸ್ತುವಾರಿ-ಯಾಗಿದ್ದ ಅರುಣ್ ಯಾದವ್ ಅವರನ್ನು ಹುದ್ದೆಯಿಂದ ತೆಗೆದು-ಹಾಕಲಾಗಿದೆ.

ಅರುಣ್ ಯಾದವ್ ಅವರನ್ನು ಪದಚ್ಯುತಿಗೊಳಿಸಿರುವ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಒ.ಪಿ.ಧನ್‌ಕರ್ ಹೇಳಿಕೆ ನೀಡಿದ್ದಾರೆ. ಆದರೆ, ಇದಕ್ಕೆ ಯಾವುದೇ ಕಾರಣ ನೀಡಿಲ್ಲ.

ಯಾದವ್ ಅವರು 2017ರಲ್ಲಿ ಮಾಡಿದ್ದ ಟ್ವೀಟ್ ಈಚೆಗೆ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹರಿದಾಡಿತ್ತು. ಇದರ ಹಿಂದೆಯೇ ಅವರನ್ನು ಬಂಧಿಸಬೇಕು ಎಂಬ ಆಗ್ರಹವು ವ್ಯಾಪಕವಾಗಿ ಕೇಳಿಬಂದಿತ್ತು. ಆದರೆ, ಯಾದವ್ ವಿರುದ್ಧ ಯಾವುದೇ ದೂರು ದಾಖಲಾಗಿಲ್ಲ.

₹1 ಕೋಟಿ ಮೌಲ್ಯದ ಅಫೀಮು ವಶ

ಚನ್ನಪಟ್ಟಣ: ಅಫೀಮು ಮಾರಾಟ ಜಾಲದ ಮೇಲೆ ದಾಳಿ ನಡೆಸಿರುವ ಬೆಂಗಳೂರು ದಕ್ಷಿಣ ವಿಭಾಗದ ಅಬಕಾರಿ ಅಧಿಕಾರಿಗಳು ಇಬ್ಬರು ಆರೋಪಿಗಳನ್ನು ಬಂಧಿಸಿ ಅವರ ಬಳಿಯಿದ್ದ ₹1 ಕೋಟಿ ಮೌಲ್ಯದ ಅಫೀಮು ವಶಕ್ಕೆ ಪಡೆದಿದ್ದಾರೆ.

ಪಿಎಸ್‌ಐ ಅಕ್ರಮ: ತನಿಖಾ ಪ್ರಗತಿ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಲೂ ಟೂತ್ ಬಳಕೆ, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಹಾಗೂ ತಿದ್ದುಪಡಿ ಮಾಡಿರುವ ಒಎಂಆರ್ ಶೀಟ್ ಪ್ರತಿಗಳನ್ನು ಸಲ್ಲಿಸಿ’ ಎಂದು ಹೈಕೋರ್ಟ್ ಸಿಐಡಿಗೆ ನಿರ್ದೇಶಿಸಿದೆ.

ಪ್ರಕರಣದ ಆರೋಪಿ ಸಿ.ಎನ್. ಶಶಿಧರ್ ಮತ್ತಿತರರು ಸಲ್ಲಿಸಿರುವ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಡಿಜಿಪಿ ಅಮೃತ್ ಪೌಲ್ ಬಂಧನ ಸೇರಿದಂತೆ ತನಿಖೆಯ ಪ್ರಗತಿಯ ಕುರಿತಂತೆ ತಾಜಾ ಮಾಹಿತಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಲಾಯಿತು.

ವರದಿಯನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ತಿದ್ದುಪಡಿ ಮಾಡಲಾದ ಒಎಂಆರ್ ಶೀಟ್‌ಗಳ ಮೂಲ ಪ್ರತಿಯನ್ನು ಸಲ್ಲಿಸಿದ್ದೀರಿ, ಅವು ಬೇಡ, ತನಿಖಾಧಿಕಾರಿಯ ಬಳಿಯೇ ಇರಲಿ. ನಮಗೆ ನಕಲು ಪ್ರತಿಗಳನ್ನು ಸಲ್ಲಿಸಿ’ ಎಂದು ಸೂಚಿಸಿತು.

‘ಬ್ಲೂಟೂತ್ ಸೇರಿದಂತೆ ಯಾವ್ಯಾವ ಅಕ್ರಮ ವಿಧಾನಗಳನ್ನು ಅನುಸರಿಸಲಾ-ಗಿದೆ ಎಂಬ ಮಾಹಿತಿಯನ್ನು ಮುಂದಿನ ವಿಚಾರಣೆ ವೇಳೆ ಸಲ್ಲಿಸಬೇಕು. ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸಬೇಕು’ ಎಂದು ಸೂಚಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲರ ಮಾತಿಗೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಸಂದೇಶ್, ‘ಕೋರ್ಟ್ ಆದೇಶವನ್ನು ಹೊರಗಿನವರು ಲಾಭಕ್ಕೆ ಬಳಸಿಕೊಂಡರೆ ನಾನೇನು ಮಾಡಲಿ? ಕೋರ್ಟ್ ಹೊರಗಿನ ವಿಚಾರದ ಬಗ್ಗೆ ನಾನೇನೂ ಮಾಡಲಾಗುವುದಿಲ್ಲ. ಕೋರ್ಟ್ ಮುಂದಿರುವ ವಿಷಯವನ್ನಷ್ಟೇ ಪರಿಶೀಲಿಸುತ್ತೇನೆ’ ಎಂದರು.

‘ನಿಜವಾದ ಸಂತ್ರಸ್ತರಿಗೆ ನ್ಯಾಯ ಒದಗಿಸುವುದು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವುದು ಕೋರ್ಟ್ ಉದ್ದೇಶ. ಆ ನಿಟ್ಟಿನಲ್ಲಿ ಕೋರ್ಟ್ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿದೆ. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾದರೂ ಕಾನೂನಿನ ಸಂಕೋಲೆಯಿಂದ ತಪ್ಪಿಸಿಕೊಳ್ಳಬಾರದು’ ಎಂದರು.

ಕಾಣೆಯಾಗಿದ್ದಾರೆ



ಶಾಂತಾರಾಮ್ ಎನ್ (53 ವರ್ಷ)

ಎತ್ತರ 5.5, ಸಾಧಾರಣ ಮೈಕಟ್ಟು, ಕೆಂಪು ಮೈಬಣ್ಣ ಮತ್ತು ತಲೆಯ ಮುಂಭಾಗದಲ್ಲಿ ಕೂದಲು ಇರುವುದಿಲ್ಲ. 53 ವರ್ಷದ ಇವರು ದಿನಾಂಕ 16.6.22 ರಂದು ಮಾರತಹಳ್ಳಿಯಿಂದ ಕಾಣೆಯಾಗಿದ್ದಾರೆ. ಕಾಣೆಯಾದ ದಿನ ಬ್ರೌನ್ ಶರ್ಟ್ ಮತ್ತು ಬ್ಲಾಕ್ ಪ್ಯಾಂಟ್ ಧರಿಸಿದ್ದರು. ಇವರ ಸುಳಿವು ಸಿಕ್ಕಲ್ಲಿ ಸಂಪರ್ಕಿಸಿ

ನಿಮ್ಮದೇ ಚಿಂತೆಯಲ್ಲಿ ಮನೆಯವರೆಲ್ಲಾ ನಿಮ್ಮ ಬರುವಿಕೆಗಾಗಿ ಕಾಯುತ್ತಿದ್ದೇವೆ.

7259438765 - Jnaneshwari
8050957524 - Pattabhiram

ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಬಸವತತ್ವದ ಅರಿವಿನ ತಾಣವಾಗಲಿ ಕೂಡಲಸಂಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣನವರ ಐಕ್ಯಸ್ಥ-ಳವಾಗಿರುವ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮವು ಜನಾಕರ್ಷಣೆಯ ಕೇಂದ್ರವಾಗುವ ಜತೆಗೆ ಬಸವ ತತ್ವದ ಅರಿವು ಮೂಡಿಸುವ ತಾಣವೂ ಆಗಬೇಕು. ಇದಕ್ಕೆ ಪೂರಕವಾಗಿ ಸಂಗಮವನ್ನು ಅಭಿವೃದ್ಧಿ ಪಡಿಸಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಸಭೆಯನ್ನು ಗುರುವಾರ ನಡೆಸಿದ ಅವರು, ಕೂಡಲ ಸಂಗಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮ್ಯೂಸಿಯಂನಲ್ಲಿ ಬಸವಣ್ಣನವರ ಜೀವನಚರಿತ್ರೆ, ಅವರ ವಿಚಾರಧಾರೆ ಹಾಗೂ ಅವರ ಸಮಕಾಲೀನ ಶರಣರ ಕುರಿತ ಮಾಹಿತಿಯನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಅಳವಡಿಸಬೇಕು ಎಂದು ನಿರ್ದೇಶನ ನೀಡಿದರು.

ಮೊದಲ ಹಂತದ ಕಾಮಗಾರಿಯನ್ನು ಮೇ ಅಂತ್ಯದೊಳಗೆ ಮುಗಿಸಬೇಕು. ಬಸವ ಅಂತರರಾಷ್ಟ್ರೀಯ ಕೇಂದ್ರದ ಕಟ್ಟಡದ ಪರಿಷ್ಕೃತ ವಾಸ್ತು ವಿನ್ಯಾಸಕ್ಕೆ ಅನುಗುಣವಾಗಿ ಪರಿಷ್ಕೃತ ಅಂದಾಜನ್ನು ಅನುಮೋದನೆಗಾಗಿ ಸಲ್ಲಿಸುವಂತೆ ಸೂಚನೆ ನೀಡಿದರು.

ಸರ್ವಜ್ಞರ ಮನೆ ಅಭಿವೃದ್ಧಿ: ಹಾವೇರಿ ಜಿಲ್ಲೆಯ ಅಬಲೂರಿನಲ್ಲಿ ಕವಿ ಸರ್ವಜ್ಞರು ವಾಸವಿದ್ದ ಮನೆಯ ಅಭಿವೃದ್ಧಿ ಹಾಗೂ ಮಾಸೂರಿನಲ್ಲಿರುವ ಸಮಾಧಿ ಸ್ಥಳ ಅಭಿವೃದ್ಧಿಪಡಿಸುವ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಮುಂದಾಗಿದೆ.

ಮುಖ್ಯಮಂತ್ರಿ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ₹25 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ.

ಹಿರೇಕೆರೂರು ಪಟ್ಟಣದಲ್ಲಿ ಸರ್ವಜ್ಞ ಅಧ್ಯಯನ ಕೇಂದ್ರ ಸ್ಥಾಪನೆ ಹಾಗೂ ಸರ್ವಜ್ಞರ ಮನೆಯ ಸ್ಥಳ ಹಾಗೂ ಮಾಸೂರಿನ ಸಮಾಧಿ ಸ್ಥಳದ ಅಭಿವೃದ್ಧಿಗೆ ಬೇಕಿರುವ ಖಾಸಗಿ ಜಮೀನು ಖರೀದಿಸಲು ಸಭೆ ಅನುಮೋದನೆ ನೀಡಿದೆ.

ಸವಣೂರು ಅರಮನೆ ಪುನರುಜ್ಜೀವನ: ಶಿಥಿಲಾವಸ್ಥೆಯಲ್ಲಿದ್ದ ಸವಣೂರು ನವಾಬರ ಅರಮನೆ ಪುನರುಜ್ಜೀವನ ಕಾರ್ಯ ಪೂರ್ಣಗೊಂಡಿದ್ದು, ಇಲ್ಲಿ ಸ್ಥಳೀಯ ಇತಿಹಾಸವನ್ನು ನೆನಪಿಸುವ ವಸ್ತು ಸಂಗ್ರಹಾಲಯ ಸ್ಥಾಪಿಸಲು ಮುಖ್ಯಮಂತ್ರಿ ಸೂಚಿಸಿದರು.

ಕಿತ್ತೂರು ಅಭಿವೃದ್ಧಿಗೆ ₹45.56 ಕೋಟಿ

ಕಿತ್ತೂರಿನ ರಾಣಿ ಚೆನ್ನಮ್ಮನವರ ಅರಮನೆ, ಕೋಟೆ ಅಭಿವೃದ್ಧಿ ಹಾಗೂ ವಸ್ತು ಸಂಗ್ರಹಾಲಯಗಳ ನವೀಕರಣ ಯೋಜನೆಯನ್ನು ₹45.56 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಈ ಯೋಜನೆಗಳಿಗೆ ಒಪ್ಪಿಗೆ ಸೂಚಿಸಲಾಗಿದೆ.

₹18.05 ಕೋಟಿ ವೆಚ್ಚದಲ್ಲಿ ಚೆನ್ನಮ್ಮನವರ ಅರಮನೆ, ಕೋಟೆಯ ಸಂರಕ್ಷಣೆ ಹಾಗೂ ಮರು ನಿರ್ಮಾಣ ಮತ್ತು ವಸ್ತು ಸಂಗ್ರಹಾಲಯದ ನವೀಕರಿಸುವ ಜತೆಗೆ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ₹27.51 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ.

ಕಿತ್ತೂರು ಸಂಸ್ಥಾನದ ಸಂಪೂರ್ಣ ಕಥೆಯನ್ನು ಬಿಂಬಿಸುವಂತೆ ವಸ್ತು ಸಂಗ್ರಹಾಲಯದಲ್ಲಿ ರೂಪಿಸಬೇಕು. ಪ್ರತಿ ಪಾತ್ರಕ್ಕೂ ಸಮಾನ ಮಹತ್ವವನ್ನು ನೀಡಬೇಕು. ಕಿತ್ತೂರು ಅರಮನೆಯ ದರ್ಬಾರಿನ ಪ್ರತಿರೂಪವನ್ನು ನಿರ್ಮಿಸಲು ಹುಬ್ಬಳ್ಳಿಯ ಮೂರು ಸಾವಿರ ಮಠ ಹಾಗೂ ಅಮ್ಮಿನಭಾವಿ ಮಠಗಳ ವಾಸ್ತುಶಿ-ಲ್ಪವನ್ನು ಅಧ್ಯಯನ ಮಾಡುವಂತೆ ಬೊಮ್ಮಾಯಿ ಸಲಹೆ ನೀಡಿದರು.

ರಾಯಣ್ಣ ಸೈನಿಕ ಶಾಲೆಗೆ ಮೂಲಸೌಕರ್ಯ

ಬೆಳಗಾವಿ ಜಿಲ್ಲೆಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ಕಾಮಗಾರಿಯು ಆಗಸ್ಟ್ ಅಂತ್ಯಕ್ಕೆ ಮುಕ್ತಾಯಗೊಳ್ಳಲಿದ್ದು, ಈ ವಸತಿಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಎಲ್ಲ ಮೂಲಸೌಕರ್ಯಗಳನ್ನು ಒದಗಿಸುವಂತೆ ಮುಖ್ಯಮಂತ್ರಿ ಬೊಮ್ಮಾಯಿ ಸೂಚಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ’ರಕ್ಷಣಾ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ 2022-23ನೇ ಸಾಲಿಗೆ 6ನೇ ತರಗತಿಯಿಂದ ಶಾಲೆಯನ್ನು ಪ್ರಾರಂಭಿಸಲು ಅನುಮತಿ ದೊರೆತಿದೆ. 82 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಲಾಗಿದೆ. ಸೆಪ್ಟೆಂಬರ್‌ನಲ್ಲಿ ಶಾಲೆ ಪ್ರಾರಂಭವಾಗಲಿದೆ‘ ಎಂದರು.

ಈ ವಸತಿಶಾಲೆಗೆ ಬೇಕಾದ ಹುದ್ದೆಗಳ ಸೃಜನೆಗೆ ಸರ್ಕಾರ ಅನುಮೋದನೆ ನೀಡಿದೆ. ಸದ್ಯಕ್ಕೆ ಮೊರಾರ್ಜಿ ದೇಸಾಯಿ ವಸತಿಶಾಲೆಯ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಸೈನಿಕ ಶಾಲೆಯ ಹುದ್ದೆಗಳಿಗಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನೂ ರೂಪಿಸಲಾಗಿದ್ದು, ಇದಕ್ಕೆ ಅನುಮೋದನೆ ದೊರಕಿದ ಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ ಎಂದು ಸೂಚಿಸಿದರು.

ಎಫ್‌ಐಆರ್ ದಾಖಲಿಸದ ಇನ್‌ಸ್ಪೆಕ್ಟರ್, ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯ ಸುಲಿಗೆ ಯತ್ನ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸದೇ ಕರ್ತವ್ಯ ಲೋಪ ಎಸಗಿದ್ದ ಆರೋಪದ ಮೇರೆಗೆ ಕಲಾಸಿಪಾಳ್ಯ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂ.ಎಲ್.ಚೇತನ್‌ಕುಮಾರ್ ಹಾಗೂ ಪಿಎಸ್‌ಐ ಪ್ರಸನ್ನ ಕುಮಾರ್ ಅವರನ್ನು ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅಮಾನತು ಮಾಡಿ ಆದೇಶಿಸಿದ್ದಾರೆ.

ನಗರದ ಎಚ್.ಸಿದ್ದಯ್ಯ ರಸ್ತೆಯ 2ನೇ ಕ್ರಾಸ್ ನಿವಾಸಿ ಉದ್ಯಮಿ ಮುಯೀಜ್ ಅಹಮ್ಮದ್ (37) ಅವರಿಗೆ ಆಸ್ತಿ ವಿಚಾರವಾಗಿ, ಧಾರವಾಡದ ಜೈಲಿನಲ್ಲಿದ್ದ ರೌಡಿ ಹಾಗೂ ಹೊರಗಿನಿಂದ ಆತನ ಸಹಚರರು ಬೆದರಿಕೆ ಕರೆ ಮಾಡಿದ್ದರು. ಬೆದರಿಕೆ ಕರೆ ಹಿನ್ನೆಲೆಯಲ್ಲಿ ಮುಯೀಜ್ ಅಹಮ್ಮದ್ ಅವರು ಕಲಾಸಿಪಾಳ್ಯ ಪೊಲೀಸ್ ಠಾಣೆಗೆ ದೂರು ನೀಡಲು ತೆರಳಿದ್ದರು. ಆದರೆ, ಪೊಲೀಸರು ಎಫ್‌ಐಆರ್ ದಾಖಲಿಸದೆ, ಎನ್‌ಸಿಆರ್ ಮಾತ್ರ ಹಾಕಿದ್ದರು. ಈ ಘಟನೆ ಮೇನಲ್ಲಿ ನಡೆದಿತ್ತು.

ಬಾಂಬೆ ಸಲೀಂ ಎಂಬಾತ ಜೈಲಿನ ಒಳಗಿಂದ ಬೆದರಿಕೆ ಕರೆ ಮಾಡಲು ಹೇಗೆ ಸಾಧ್ಯವೆಂದು ಪ್ರಶ್ನಿಸಿ, ಜೈಲಿನ ಅಧಿಕಾರಿಗಳಿಗೂ ಅಹಮ್ಮದ್ ಪತ್ರ ಬರೆದಿದ್ದರು. ಈ ಪತ್ರವನ್ನು ಪೊಲೀಸ್ ಆಯುಕ್ತರಿಗೂ ಕಳುಹಿಸಿದ್ದರು. ಆಯುಕ್ತರು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಿಸಿಬಿ ಪೊಲೀಸರಿಗೆ ಸೂಚಿಸಿದ್ದರು. ಸಿಸಿಬಿ ವರದಿ ಆಧರಿಸಿ ಆಯುಕ್ತ ಪ್ರತಾಪ್ ರೆಡ್ಡಿ ಅವರು ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ.

ಜೂನ್ 24ರಂದು ಸಿಸಿಬಿ ಪೊಲೀಸರು ಬಾಂಬೆ ಸಲೀಂ, ಅಬ್ದುಲ್ ಜಾಫರ್, ಇಮ್ರಾನ್, ಬಾಂಬೆ ರಿಯಾಜ್, ಖಾದೀರ್ ಮತ್ತು ಅಲಿ ವಿರುದ್ಧ ಸುಲಿಗೆ, ಬೆದರಿಕೆ ಹಾಕಿದ ಆರೋಪದ ಅಡಿ ಪ್ರಕರಣ ದಾಖಲಿಸಿದ್ದರು. ಬಾಂಬೆ ಸಲೀಂ ಸೇರಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ಜಾಫರ್, ಅಲಿ ಜೂನ್ 5ರಂದು ಅಹಮ್ಮದ್ ಮನೆಗೆ ತೆರಳಿ, ₹ 8 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದರು. ಹಣ ನೀಡದಿದ್ದಾಗ ಕೊಲೆ ಬೆದರಿಕೆ ಹಾಕಿದ್ದರು. ಆದರೆ, ತನಿಖೆ ವೇಳೆ ದೃಢಪಟ್ಟಿದೆ.

ಆರೋಪಿಗಳಿಂದ ಚೇತನ್ ಕುಮಾರ್ ಹಾಗೂ ಪ್ರಸನ್ನ ಅವರು ಹಣ ತೆಗೆದುಕೊಂಡಿದ್ದಾರೆಯೇ ಎನ್ನುವ ಆಯಾಮದಲ್ಲೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣ ಏನು?: ಶಿವಾಜಿನಗರದ ಆಸ್ತಿಯ ತನ್ನ ಪಾಲಿಗೆ ಸೇರಿದ್ದು, ಮೇ 6ರಂದು ನೋಂದಣಿಯಾಗಿದೆ ಎಂಬುದು ಅಹಮ್ಮದ್ ವಾದ. ಇದೇ ಆಸ್ತಿ ತನಗೆ ಸೇರಿದ್ದು ಎಂಬುದು ರಿಯಾಜ್ ಪ್ರತಿವಾದ. ಈ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಈ ಆಸ್ತಿ ವಿಚಾರವಾಗಿ ಬೆದರಿಕೆ ಒಡ್ಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ

ನೆಲಮಂಗಲ: ಜೂಜು ಅಡ್ಡೆಯ ಮೇಲೆ ದಾಳಿ ಮಾಡಿದ ಇನ್‌ಸ್ಪೆಕ್ಟರ್ ಎ.ವಿ. ಕುಮಾರ್ ಅವರ ಮೇಲೆ ದುಷ್ಕರ್ಮಿಗಳು ಬುಧವಾರ ರಾತ್ರಿ ಹಲ್ಲೆ ನಡೆಸಿದ್ದಾರೆ. ಪೊಲೀಸರು 11 ಆರೋಪಿಗಳನ್ನು ಬಂಧಿಸಿ, 5 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.


ಎ.ವಿ.ಕುಮಾರ್

ಬಂಧಿತರನ್ನು ಪಟ್ಟಣದ ಚನ್ನಕೇಶವ ಸ್ವಾಮಿ ದೇವಾಲಯ ಬೀದಿ ನಿವಾಸಿ ಹನುಮಂತರಾಜು(54), ಚಂದ್ರಶೇಖರ್(46), ಅಡೇಪೇಟೆ ನಿವಾಸಿ ಮುನಿರಾಜು(19), ಗಂಗೇಗೌಡನಹಳ್ಳಿ ನಿವಾಸಿ ಗಂಗರಾಜು(33), ಮಹಿಮಾಪುರ ನಿವಾಸಿ ಗಿರೀಶ್(42), ಬೆಂಗಳೂರು ಪಟ್ಟೇಗಾರ್‌ಪಾಳ್ಯ ನಿವಾಸಿ ಬೇವಿನ-ಗುಡ್ಡೇಗೌಡ(51), ಗೊರಗುಂಟೆಪಾಳ್ಯ ನಿವಾಸಿ ಜಗದೀಶ್(30), ನಂದಿನಿ ಬಡಾವಣೆ ನಿವಾಸಿ ಉಮೇಶ್(34), ರಾಜಾಜಿನಗರ ನಿವಾಸಿ ರಾಜೇಂದ್ರ ಕುಮಾರ್(54), ಮಹಾಲಕ್ಷ್ಮೀ ಬಡಾವಣೆ ನಿವಾಸಿ ಶೇಖರ್(60), ವಿಜಯನಗರ ನಿವಾಸಿ ರಂಗಣ್ಣ(56) ಎಂದು ಗುರುತಿಸಲಾಗಿದೆ.

ಜಿಲ್ಲೆಯಾದ್ಯಂತ ಜೂಜು ಅಡ್ಡೆಗಳನ್ನು ನಿಯಂತ್ರಿಸಲು ವಿಶೇಷ ತಂಡ ರಚನೆ ಮಾಡಲಾಗಿದೆ ಎಂದು ಎ.ವಿ. ಕುಮಾರ್ ತಿಳಿಸಿದರು.

₹ 400 ಕೋಟಿ ಮೊತ್ತದ ಚೆಕ್ ಬೌನ್ಸ್: ಎಂಬೆಸ್ಸಿ ಗ್ರೂಪ್‌ನ ವೀರ್ವಾನಿ ಅರ್ಜಿ

ಪ್ರಕರಣ ರದ್ದತಿಗೆ ಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಿಯಲ್ ಎಸ್ಟೇಟ್ ವ್ಯವಹಾರದ ಕೊಡು–ಕೊಳ್ಳುವಿಕೆಯಲ್ಲಿ ₹ 400 ಕೋಟಿ ಮೊತ್ತದ ಚೆಕ್ ಬೌನ್ಸ್ ಆಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಎಂಬೆಸ್ಸಿ ಗ್ರೂಪ್ ಅಧ್ಯಕ್ಷ ಜಿತೇಂದ್ರ ವೀರ್ವಾನಿ ಹಾಗೂ ಇತರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ಮೆಸರ್ಸ್ ಒಎಂಆರ್ ಇನ್ವೆಸ್ಟ್‌ಮೆಂಟ್ಸ್ ಎಲ್‌ಎಲ್‌ಪಿ' ಕಂಪನಿಯ ಅಧ್ಯಕ್ಷರು ಕೂಡಾ ಆಗಿರುವ ಜಿತೇಂದ್ರ ವೀರ್ವಾನಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ತೀರ್ಪು ಪ್ರಕಟಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಾವು ಈ ವ್ಯವಹಾರದಲ್ಲಿ ಭಾಗಿಯಾಗಿಲ್ಲ ಎಂದು ಹೇಳುವ ಅರ್ಜಿದಾರರಿಗೆ ತಮ್ಮ ಮೇಲೆ ಅಷ್ಟೊಂದು ವಿಶ್ವಾಸವಿದ್ದರೆ, ವಿಚಾರಣೆ ಎದುರಿಸಿ ಶುದ್ಧವಾಗಿ ಹೊರಬರುವ ಅಗತ್ಯವಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಅರ್ಜಿದಾರರು ತಮ್ಮನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವುದರ ಹಿಂದೆ ವಿವಾದಾಸ್ಪದವಾದ ಅನೇಕ ಪ್ರಶ್ನೆಗಳಿವೆ. ಚೆಕ್‌ಗಳನ್ನು ಭದ್ರತೆಗಾಗಿ ಮಾತ್ರ ನೀಡಲಾಗಿದೆ ಎಂಬ ಅವರ ವಾದವನ್ನು ಈ ಹಂತದಲ್ಲಿ ಮಾನ್ಯ ಮಾಡಲು ಸಾಧ್ಯವಿಲ್ಲ. ಮೇಲಾಗಿ, ಕಂಪನಿಯ ಪದಾಧಿಕಾರಿಗಳ ಮೂಲಕ ಸಭೆ ನಡೆಸದೆ ಇಷ್ಟೊಂದು ಬೃಹತ್ ಮೊತ್ತದ ವಹಿವಾಟು ಕಾರ್ಯಗತಗೊಳ್ಳಲು ಹೇಗೆ ತಾನೇ ಸಾಧ್ಯ' ಎಂದು ನ್ಯಾಯಪೀಠ ಅರ್ಜಿದಾರರನ್ನು ಪ್ರಶ್ನಿಸಿದೆ.

'ಆರೋಪಿಗಳು ಮತ್ತು ದೂರುದಾರರ ನಡುವಿನ ವ್ಯವಹಾರದ ಅಗಾಧತೆಯ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಕಂಪನಿಯ ನಿರ್ದೇಶಕರು ಅಥವಾ ಅಧ್ಯಕ್ಷರು ಹೇಳುವುದನ್ನು ಪುಷ್ಟೀಕರಿಸಲು ಸಾಧ್ಯವಿಲ್ಲ. ಪ್ರಕರಣದಲ್ಲಿ ಆರೋಪಿಯಾಗಿರುವವರು ವ್ಯವಹಾರದಲ್ಲಿ ಯಾವ ರೀತಿ ಭಾಗಿಯಾಗಿದ್ದಾರೆ ಮತ್ತು ಆ ವ್ಯಕ್ತಿಗಳ ಪಾತ್ರವೇನು ಎಂಬುದನ್ನು ದೂರಿನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಹಾಗಾಗಿ, ಇವರೆಲ್ಲಾ ವಿಚಾರಣೆಗೆ ಒಳಪಡಬೇಕು' ಎಂದು ನ್ಯಾಯಪೀಠ ಹೇಳಿದೆ.

'ಒಎಂಆರ್‌ಐ ಎಲ್‌ಎಲ್‌ಪಿ ಹೆಸರಿನಲ್ಲಿ ನೀಡಲಾಗಿದ್ದ ₹ 400 ಕೋಟಿ ಮೊತ್ತದ ಚೆಕ್ ಬೌನ್ಸ್ ಆಗಿದೆ' ಎಂದು ಆರೋಪಿಸಿ ದುಬೈ ನಿವಾಸಿ ಪರ್ಧನಾನಿ ಚತುರ್ಭುಜ ಬಸ್ಸಾರ್‌ಮಲ್ ಹೆಸರಿನ 80 ವರ್ಷದ ಹಿರಿಯ ನಾಗರಿಕರು ಸಲ್ಲಿಸಿರುವ ದೂರಿನ ಅನುಸಾರ ವೀರ್ವಾನಿ ಮತ್ತು ಇತರರ ವಿರುದ್ಧ ನಗರದ 21ನೇ ಎಸಿಎಂಎಂ ನ್ಯಾಯಾಲಯದಲ್ಲಿ, ನೆಗೊಷಿಯಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ–1881ರ ಕಲಂ 138ರ ಅನುಸಾರ ಪ್ರಕರಣ ದಾಖಲಿಸಲಾಗಿದೆ. ಒಎಂಆರ್ ಇನ್ವೆಸ್ಟ್‌ಮೆಂಟ್ ಕಂಪನಿಯು ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ವಸತಿಗೃಹ ನಿರ್ಮಾಣ ಕಂಪನಿಯೂ ಆಗಿದೆ.

ಸಿಸಿಬಿ ಪೊಲೀಸರ ಕಾರ್ಯಾಚರಣೆ ಮೂವರು ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರತ್ಯೇಕ ಪ್ರಕರಣ: ₹ 83 ಲಕ್ಷ ಮೌಲ್ಯದ ಮಾದಕ ವಸ್ತುವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯ್‌ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 12 ಗ್ರಾಂ ಎಂಡಿಎಂಎ ಕ್ರಿಸ್ಟಲ್, 27 ಗ್ರಾಂ ಬ್ರೌನ್ ಷುಗರ್ ಹಾಗೂ ಎರಡು ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಇವುಗಳ ಒಟ್ಟು ಮೌಲ್ಯ ₹ 3 ಲಕ್ಷ.

ಆರೋಪಿಗಳಾದ ಸೈಯದ್ ಸಲೀಂ ಹಾಗೂ ಶೇಖ್ ಮುದಾಸಿರ್ ಅಹಮ್ಮದ್ ಬೆಂಗಳೂರಿನವರೇ ಆಗಿದ್ದು, ಕಡಿಮೆ ಸಮಯದಲ್ಲಿ ಹಣ ಗಳಿಸುವ ದುರುದ್ದೇಶದಿಂದ ನಗರದಲ್ಲಿ ನೆಲೆಸಿದ್ದ ನೈಜೀರಿಯಾದ ಪ್ರಜೆಗಳಿಗೆ ಹಾಗೂ ಮುಂಬೈನ ಗ್ರಾಹಕರಿಗೆ ಮಾದಕ ಪದಾರ್ಥ ಪೂರೈಕೆ ಮಾಡುತ್ತಿದ್ದರು. ಪ್ರತಿ ಗ್ರಾಂಗೆ ₹ 3 ಸಾವಿರಕ್ಕೆ ಖರೀದಿಸಿ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಐಟಿ, ಬಿಟಿ ಉದ್ಯೋಗಿಗಳಿಗೆ ₹ 8 ಸಾವಿರದಿಂದ 10 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.


ಶೇಖ್ ಮುದಾಸಿರ್


ಸೈಯದ್


ಮೃತ್ಯುಂಜಯ

ಬಂಧಿತ ಆರೋಪಿಗಳ ಪೈಕಿ ಒಬ್ಬ ರೌಡಿಪಟ್ಟಿಯಲ್ಲಿದ್ದು, ನಗರದ ವಿವಿಧ ಠಾಣೆಗಳಲ್ಲಿ 8 ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮತ್ತೊಂದು ಪ್ರಕರಣದಲ್ಲಿ ಕೆ.ಆರ್. ಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ

ಅಪರಾಧ ಸುದ್ದಿ

ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು ₹ 80 ಲಕ್ಷ ಮೌಲ್ಯದ ನಿಷೇಧಿತ ಮಾದಕ ವಸ್ತು ವಶಕ್ಕೆ ಪಡೆದು, ಆರೋಪಿ ಮೃತ್ಯುಂಜಯ ಎಂಬಾತನನ್ನು ಬಂಧಿಸಿದ್ದಾರೆ.

1 ಕೆ.ಜಿ 5 ಗ್ರಾಂ ಹಶೀಶ್ ಆಯಿಲ್, 1 ಕೆ.ಜಿ 200 ಗ್ರಾಂ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ ಎರಡು ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಆರೋಪಿಯು ಆಂಧ್ರಪ್ರದೇಶದ ಪರಿಚಯಸ್ಥರಿಂದ ಮಾದಕ ವಸ್ತುಗಳನ್ನು ಖರೀದಿಸಿ ಕಳ್ಳಸಾಗಣೆ ಮಾಡುತ್ತಿದ್ದ. ಈತನ ವಿರುದ್ಧ ಈ ಹಿಂದೆ ಮಾಲೂರು, ಬಾಣಸವಾಡಿ, ಎಚ್‌ಎಎಲ್ ಹಾಗೂ ವೈಯಾಲಿಕಾವಲ್ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಸರಣಿ ಅಪಘಾತ: ಆಟೊ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಬೆಳಿಗ್ಗೆ ಮೂರು ವಾಹನಗಳ ಮಧ್ಯೆ ಸರಣಿ ಅಪಘಾತ ಸಂಭವಿಸಿದ್ದು, ಆಟೊ ಚಾಲಕ, ಸುಗ್ಗಟ್ಟದ ನಿವಾಸಿ ಮಂಜುನಾಥ್ ಮೃತಪಟ್ಟಿದ್ದಾರೆ.

ಬಿ.ಬಿ. ರಸ್ತೆಯ ಹುಣಸ-ಮಾರನಹಳ್ಳಿಯ ಭಾರತೀನಗರ ಕ್ರಾಸ್‌ನಲ್ಲಿ ಮಂಜುನಾಥ್ ಬೆಳಿಗ್ಗೆ 6.30ರ ಸುಮಾರಿಗೆ ಆಟೊ ಚಾಲನೆ ಮಾಡಿಕೊಂಡು ತೆರಳುತ್ತಿದ್ದರು. ಎದುರಿಗೆ ತೆರಳುತ್ತಿದ್ದ ಕ್ಯಾಬ್‌ನ ಚಾಲಕ ವಾಹನವನ್ನು ನಿಧಾನ ಮಾಡಿದಾಗ ಮಂಜುನಾಥ್ ಸಹ ಆಟೊದ ವೇಗ ಕಡಿಮೆ ಮಾಡಿದರು. ಆಗ ಹಿಂಬದಿಯಿಂದ ವೇಗವಾಗಿ ಬಂದ ಲಾರಿ ಆಟೊಕ್ಕೆ ಡಿಕ್ಕಿ ಹೊಡೆದಿದೆ.

ಗಂಭೀರವಾಗಿ ಗಾಯಗೊಂಡ ಮಂಜುನಾಥ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ.

ಸುದ್ದಿ 2 ನಿಮಿಷ

'ನಿತ್ಯ 10 ಲಕ್ಷ ನಕಲಿ ಖಾತೆಗಳ ರದ್ದು'

ನ್ಯೂಯಾರ್ಕ್ (ಎ.ಪಿ): ನಕಲಿ ಎಂದು ಗುರುತಿಸಿ ಸುಮಾರು 10 ಲಕ್ಷ ಖಾತೆಗಳನ್ನು ಪ್ರತಿನಿತ್ಯವು ಅಳಿಸಿಹಾಕಲಾಗುತ್ತಿದೆ ಎಂದು ಟ್ವಿಟರ್ ಹೇಳಿದೆ. ನಕಲಿ ಖಾತೆಗಳ ಕುರಿತು ಎಲಾನ್ ಮಸ್ಕ್ ಅವರು ಎತ್ತಿದ್ದ ಆಕ್ಷೇಪವನ್ನು ಈ ಬೆಳವಣಿಗೆ ದೃಢಪಡಿಸುವಂತಿದೆ.

ಸಕ್ರಿಯ ಬಳಕೆದಾರರಲ್ಲಿ, ಸ್ವಯಂಚಾಲಿತ ಸ್ಪ್ಯಾಮ್ ಖಾತೆಗಳ ಪ್ರಮಾಣ ಶೇ 5ಕ್ಕೂ ಕಡಿಮೆ ಎಂದು ಕಂಪನಿಯು ನಿರೂಪಿಸದೇ ಹೋದರೆ ತಾನು ಟ್ವಿಟರ್ ಖರೀದಿ ಪ್ರಸ್ತಾವದಿಂದ ಹಿಂದೆ ಸರಿಯುವುದಾಗಿ ಟೆಸ್ಲಾ ಸಿಇಒ ಆಗಿರುವ ಮಸ್ಕ್ ಎಚ್ಚರಿಸಿದ್ದರು.

ಆದರೆ, ತಪ್ಪು ಮಾಹಿತಿಗಳ ಪ್ರಸಾರ ಮತ್ತು ಸ್ಕ್ಯಾಮ್‌ಗಳಿಗೆ ಉತ್ತೇಜನ ನೀಡುವ ಖಾತೆಗಳ ಸಂಖ್ಯೆ ಕುರಿತು ಟ್ವಿಟರ್ ಕಡಿಮೆ ಅಂದಾಜು ಮಾಡಿದೆ. ಸ್ಪ್ಯಾಮ್ ಖಾತೆಗಳ ಸಂಖ್ಯೆ ಒಟ್ಟು ಬಳಕೆದಾರರಿಗಿಂತಲೂ ಶೇ 5ಕ್ಕೂ ಕಡಿಮೆ ಇದೆ ಎಂದು ಟ್ವಿಟರ್ ಪ್ರತಿಪಾದಿಸಿತ್ತು.

ಮೊಬೈಲ್ ತಂದು ಸಿಕ್ಕಿಬಿದ್ದ ಕೈದಿ

ಬೆಂಗಳೂರು: ಇಲ್ಲಿನ ಪರಪ್ಪನ ಅಗ್ರಹಾರ ಜೈಲಿಗೆ ಕರೆತಂದಿದ್ದ ಕೊಡಗು ಜಿಲ್ಲೆಯ ಪೊನ್ನಂಪೇಟೆ ಕೈದಿ ರವಿಕುಮಾರ್ ಎಂಬಾತ ಮೊಬೈಲ್ ಹಾಗೂ ಮೆಮೊರಿ ಕಾರ್ಡ್ ಅನ್ನು ಜೈಲಿನ ಒಳಕ್ಕೆ ಕೊಂಡೊಯ್ಯುವಾಗ ಜೈಲು ಸಿಬ್ಬಂದಿಗೆ ಸಿಕ್ಕಿ ಬಿದ್ದಿದ್ದಾನೆ.

ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ರವಿಕುಮಾರ್ ಜೈಲಿನಲ್ಲಿದ್ದ. ಕಳವು ಪ್ರಕರಣದಲ್ಲಿ ವಿಚಾರಣೆಗಾಗಿ ಪೊನ್ನಂಪೇಟೆ ಪೊಲೀಸರು ನ್ಯಾಯಾಲಯದ ಅನುಮತಿ ಮೇರೆಗೆ ಈತನನ್ನು ಕರೆದೊಯ್ದಿದ್ದರು. ಅಲ್ಲಿ ಕುಟುಂಬಸ್ಥರು ಈತನನ್ನು ಭೇಟಿ ಮಾಡಿದ್ದರು. ಅಲ್ಲಿಂದ ಬರುವಾಗ ಮೊಬೈಲ್ ತಂದು, ಸಿಕ್ಕಿ ಬಿದ್ದಿದ್ದಾನೆ. ಪ್ಯಾಂಟ್‌ನಲ್ಲಿ ಬಚ್ಚಿಟ್ಟಿದ್ದ ಮೊಬೈಲ್ ತಪಾಸಣೆ ವೇಳೆ ಸಿಕ್ಕಿತು. ಪೊನ್ನಂಪೇಟೆಯಲ್ಲಿ ಭೇಟಿಯಾದವರು ಈತನಿಗೆ ಮೊಬೈಲ್ ನೀಡಿರಬಹುದು ಎಂದು ಸಿಬ್ಬಂದಿ ಶಂಕಿಸಿದ್ದಾರೆ.

ಆರೋಗ್ಯ ಸಮಸ್ಯೆ ಇದ್ದರೂ 162 ಕೆ.ಜಿ ತೂಕದ ಮಹಿಳೆಗೆ ಸಹಜ ಹೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ 162 ಕೆ.ಜಿ. ತೂಕದ 32 ವರ್ಷದ ಮಹಿಳೆಗೆ ನಗರದ ಮಣಿಪಾಲ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಸಹಜ ಹೆರಿಗೆ ಮಾಡಿಸಿದ್ದಾರೆ.

ಅವರಿಗೆ ಜನಿಸಿದ ಗಂಡು ಮಗು 3.14 ಕೆ.ಜಿ. ತೂಕವಿದೆ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ. ಮಹಿಳೆಯು ಸ್ಥೂಲಕಾಯದಿಂದಾಗಿ ಮಧುಮೇಹ ಸೇರಿದಂತೆ ವಿವಿಧ ಸಮಸ್ಯೆ ಎದುರಿಸುತ್ತಿದ್ದರು ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

'ಗರ್ಭಾವಸ್ಥೆಯಲ್ಲಿ ಸ್ಥೂಲಕಾಯ ಹೊಂದಿದ್ದರೆ ಅಪಾಯದ ಗರ್ಭಧಾರಣೆ ಎಂದು ಪರಿಗಣಿಸಲಾಗುತ್ತದೆ. ತಾಯಿ ಮರಣ, ಗರ್ಭಪಾತ ಸೇರಿದಂತೆ ವಿವಿಧ ಅಪಾಯಗಳಿರುತ್ತವೆ. ಮಗುವಿನ ಆರೋಗ್ಯದಲ್ಲಿಯೂ ವ್ಯತ್ಯಯವಾಗುವ ಸಾಧ್ಯತೆ ಇರುತ್ತದೆ. ಈ ಪ್ರಕರಣದಲ್ಲಿ ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ' ಎಂದು ಆಸ್ಪತ್ರೆಯ ಡಾ. ಅರವಿಂದ ಸತೀಶ್ ಹೇಳಿದ್ದಾರೆ.

'ಮಹಿಳೆ ಆಸ್ಪತ್ರೆಗೆ ದಾಖಲಾದಾಗ ಅತಿಯಾದ ಹೆರಿಗೆ ನೋವು ಅನುಭವಿಸುತ್ತಿದ್ದರು. ಆಸ್ಪತ್ರೆಯಲ್ಲಿ ಲಭ್ಯವಿರುವ ಸೀಮಿತ ಸಿಬ್ಬಂದಿಯ ನೆರವಿನಿಂದಲೇ ಅಗತ್ಯ ವ್ಯವಸ್ಥೆ ಮಾಡಿಕೊಂಡು, ಹೆರಿಗೆ ಮಾಡಿಸಲಾಯಿತು' ಎಂದು ತಿಳಿಸಿದ್ದಾರೆ.

ಲಸಿಕೆಯ ಗುರಿ ಸಾಧನೆಯಲ್ಲಿ ಕೆಲವೆಡೆ ವ್ಯತ್ಯಾಸ ● ಉದ್ಯೋಗ, ಶಿಕ್ಷಣ ಸೇರಿ ವಿವಿಧ ಕಾರಣದಿಂದ ಸ್ಥಳ ಬದಲಾವಣೆ

ಮೊದಲ ಡೋಸ್‌ಗಿಂತ ಎರಡನೆ ಡೋಸ್ ಅಧಿಕ !

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಕೆಲ ಜಿಲ್ಲೆಗಳಲ್ಲಿ ಮೊದಲ ಡೋಸ್ ಲಸಿಕೆ ಪಡೆದವರ ಸಂಖ್ಯೆಗಿಂತ ಎರಡನೇ ಡೋಸ್ ಲಸಿಕೆ ಪಡೆದವರ ಸಂಖ್ಯೆಯೇ ಅಧಿಕವಿದೆ.

ಕೋವಿಡ್ ನಿಯಂತ್ರಣದ ಬಳಿಕ ಉದ್ಯೋಗ, ಶಿಕ್ಷಣ ಸೇರಿದಂತೆ ವಿವಿಧ ಕಾರಣಗಳಿಂದ ವಲಸಿಗರ ಸಂಖ್ಯೆ ಹೆಚ್ಚಿದೆ. ಅನ್ಯರಾಜ್ಯದವರೂ ಇಲ್ಲಿಗೆ ಬರಲಾರಂಭಿಸಿದ್ದಾರೆ. ಹೊರರಾಜ್ಯದಲ್ಲಿ ಮೊದಲ ಡೋಸ್ ಪಡೆದವರು ಇಲ್ಲಿ ಎರಡನೇ ಡೋಸ್ ಪಡೆಯುತ್ತಿರುವುದರಿಂದ ಈ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೀಗಾಗಿ, ಕೋಲಾರ, ಬೀದರ್, ಮಂಡ್ಯ ಸೇರಿದಂತೆ 13 ಜಿಲ್ಲೆಗಳಲ್ಲಿ ಮೊದಲ ಡೋಸ್ ಲಸಿಕೆಗೆ ಹೋಲಿಸಿದರೆ, ಎರಡನೇ ಡೋಸ್ ಅಧಿಕ ಮಂದಿಗೆ ವಿತರಣೆ ಮಾಡಲಾಗಿದೆ. ಅವಧಿಗೂ ಮುನ್ನ ಶೇಕಡವಾರು ಗುರಿ ಸಾಧನೆಯೂ ಸಾಧ್ಯವಾಗಿದೆ.

ರಾಜ್ಯದಲ್ಲಿ 2021 ಜ.16ರಂದು ಲಸಿಕೆ ವಿತರಣಾ ಅಭಿಯಾನಕ್ಕೆ ಚಾಲನೆ ದೊರೆತಿದೆ. ಕೋಲಾರದಲ್ಲಿ 13.33 ಲಕ್ಷ ಮಂದಿ ಮೊದಲ ಡೋಸ್ ಪಡೆದರೆ, 13.54 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಮಂಡ್ಯದಲ್ಲಿ 14.64 ಲಕ್ಷ ಮೊದಲ ಡೋಸ್ ಹಾಗೂ 15 ಲಕ್ಷ ಎರಡನೇ ಡೋಸ್ ನೀಡಲಾಗಿದೆ. ಬೆಳಗಾವಿಯಲ್ಲಿ 40.57 ಲಕ್ಷ, ಬೀದರ್‌ನಲ್ಲಿ 14.20 ಲಕ್ಷ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ 9.16 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಈ ಜಿಲ್ಲೆಗಳಲ್ಲಿ ಎರಡನೇ ಡೋಸ್ ಹಾಕಿಸಿಕೊಂಡವರ ಸಂಖ್ಯೆ ಕ್ರಮವಾಗಿ 40.91 ಲಕ್ಷ, 14.39 ಲಕ್ಷ ಹಾಗೂ 9.24 ಲಕ್ಷವಿದೆ.

ಪ್ರಮಾಣದಲ್ಲಿ ವ್ಯತ್ಯಾಸ: ಗದಗ, ಕೊಡಗು, ಕಲಬುರಗಿ, ಹಾಸನ, ಹಾವೇರಿ, ಯಾದಗಿರಿ, ದಾವಣಗೆರೆ ಹಾಗೂ ರಾಮನಗರ ಜಿಲ್ಲೆಯಲ್ಲಿಯೂ ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ವಿತರಣೆಯ ಒಟ್ಟಾರೆ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತಿದೆ. ಎರಡನೇ ಡೋಸ್ ಸಾಧನೆ ಪ್ರಮಾಣ ಅಧಿಕವಾಗುತ್ತಿದೆ.

'ಜಿಲ್ಲೆಯಲ್ಲಿ ವಲಸಿಗರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ನೆರೆಯ ಆಂಧ್ರಪ್ರದೇಶ ಸೇರಿದಂತೆ ವಿವಿಧೆಡೆಯಿಂದ ಕಾರ್ಮಿಕರು ಬರುತ್ತಾರೆ. ಹೀಗಾಗಿ, ಲಸಿಕೆ ವಿತರಣೆಯಲ್ಲಿ ಮೊದಲ ಡೋಸ್‌ಗಿಂತ ಎರಡನೇ ಡೋಸ್ ವಿತರಣೆ ಅಧಿಕವಿದೆ' ಎಂದು ಕೋಲಾರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಗದೀಶ್ ತಿಳಿಸಿದರು.

'ಮೊದಲ ಹಾಗೂ ಎರಡನೇ ಡೋಸ್ ವಿತರಣೆಯಲ್ಲಿ ಈಗಾಗಲೇ ನಿಗದಿತ ಗುರಿ ಸಾಧಿಸಲಾಗಿದೆ. ವಲಸೆ ಸೇರಿದಂತೆ ವಿವಿಧ ಕಾರಣಗಳಿಂದ ಕೆಲ ಜಿಲ್ಲೆಗಳಲ್ಲಿ ಮೊದಲ ಡೋಸ್ ಪಡೆದವರ ಸಂಖ್ಯೆಗಿಂತ ಎರಡನೇ ಡೋಸ್ ಪಡೆದವರ ಸಂಖ್ಯೆ ಅಧಿಕವಿದೆ. ತಾಂತ್ರಿಕ ಕಾರಣದಿಂದಲೂ ಕೆಲವು ಬಾರಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ವಿವರಿಸಿದರು.

ಮುನ್ನೆಚ್ಚರಿಕೆ ಡೋಸ್‌ಗೆ ಸಿಗದ ವೇಗ

ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ರಾಜ್ಯದಲ್ಲಿ ವೇಗ ದೊರೆತಿಲ್ಲ. 35.91 ಲಕ್ಷ ಮಂದಿ ಈವರೆಗೆ ಮತ್ತೊಂದು ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. 2022ರ ಜ.10ರಂದು ಮುನ್ನೆಚ್ಚರಿಕೆ ಡೋಸ್ ಲಸಿಕೆ ವಿತರಣೆಗೆ ರಾಜ್ಯದಲ್ಲಿ ಚಾಲನೆ ನೀಡಲಾಗಿತ್ತು. ಆರೋಗ್ಯ ಕಾರ್ಯಕರ್ತರಲ್ಲಿ 7.62 ಲಕ್ಷ, ಕೋವಿಡ್ ಮುಂಚೂಣಿ ಯೋಧರಲ್ಲಿ 9.45 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 4.77 ಲಕ್ಷ ಹಾಗೂ 4.67 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಂಡಿದ್ದಾರೆ. 12ರಿಂದ 14 ವರ್ಷದವರಲ್ಲಿ 16.44 ಲಕ್ಷ, 15ರಿಂದ 17 ವರ್ಷದವರಲ್ಲಿ 24.85 ಲಕ್ಷ ಹಾಗೂ 18ರಿಂದ 44 ವರ್ಷದವರಲ್ಲಿ 2.91 ಕೋಟಿ ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.90 ಕೋಟಿ ಮಂದಿಗೆ ಎರಡು ಡೋಸ್ ಲಸಿಕೆ ನೀಡಲಾಗಿದೆ. 18ರಿಂದ 60 ವರ್ಷದವರಲ್ಲಿ 3.63 ಲಕ್ಷ ಹಾಗೂ 60 ವರ್ಷಗಳು ಮೇಲ್ಪಟ್ಟವರಲ್ಲಿ 24.47 ಲಕ್ಷ ಮಂದಿ ಮಾತ್ರ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಅಂಕಿ-ಅಂಶಗಳು

11.26 ಕೋಟಿ
ಲಸಿಕೆಯ ಒಟ್ಟು ಡೋಸ್‌ಗಳು

5.48 ಕೋಟಿ
ಮೊದಲ ಡೋಸ್ ಪಡೆದವರು

5.40 ಕೋಟಿ
ಎರಡನೇ ಡೋಸ್ ಪಡೆದವರು

37.59 ಲಕ್ಷ
ಮುನ್ನೆಚ್ಚರಿಕೆ ಡೋಸ್ ಪಡೆದವರು

ಬಿಬಿಎಂಪಿ... ಇಲ್ಲಿವೆ ನೋಡಿ ಫ್ಲೆಕ್ಸ್...

ನೀವು ವಾಸ ಮಾಡುತ್ತಿರುವ ನಗರದ ಸ್ಥಳದಲ್ಲೂ ಫ್ಲೆಕ್ಸ್ ಇದ್ದರೆ ಅದರದ್ದೊಂದು ಫೋಟೊ, ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊ ವಾಟ್ಸ್ ಆ್ಯಪ್ ಮಾಡಿ. ಬಡಾವಣೆಯಲ್ಲಿ ಅಂತಹ ಎಷ್ಟು ಫ್ಲೆಕ್ಸ್‌ಗಳು ಎಲ್ಲೆಲ್ಲಿ ನಿಮ್ಮ ಕಣ್ಣಿಗೆ ಬಿದ್ದಿವೆ ಎಂಬ ಮಾಹಿತಿಯನ್ನೂ ಕಳುಹಿಸಿ. 'ಪ್ರಜಾವಾಣಿ' ಫ್ಲೆಕ್ಸ್ ತೆರವಿಗೆ ಇಂಬುಗೊಡಲು ವೇದಿಕೆ ಕಲ್ಪಿಸಲಿದ್ದು, ಆಯ್ದ ಬರಹಗಳು ಪ್ರಕಟವಾಗಲಿವೆ.

9606038256



ವಿಜಯನಗರದ ಪ್ರಶಾಂತನಗರ ಬಡಾವಣೆಯ ಅಯೋಧ್ಯ ಫುಡ್‌ಲೈನ್ ಹೋಟೆಲ್ ಮುಂಭಾಗದಲ್ಲಿರುವ ಫ್ಲೆಕ್ಸ್ **ರಕ್ಷಿತ್ ಗಣಪತಿ,** ವಿಜಯನಗರ.



ರಾಜಾಜಿನಗರದ 1ನೇ ಬ್ಲಾಕ್ 19ನೇ ಮುಖ್ಯರಸ್ತೆಯಲ್ಲಿ ಸಾಕಷ್ಟು ದಿನಗಳಿಂದ ಇರುವ ಫ್ಲೆಕ್ಸ್

ಎಲಿಷ ಆ್ಯಂಡ್ರೂಸ್ ಅಮಾನತು ರದ್ದು: ವಿಚಾರಣೆಗಿಲ್ಲ ತಡೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ ಎಲಿಷ ಆ್ಯಂಡ್ರೂಸ್(ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ) ಅಮಾನತುಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಹೊರಡಿಸಿದ್ದ ಆದೇಶವನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ (ಕೆಎಟಿ) ರದ್ದುಪಡಿಸಿದೆ.

ಎಂಜಿನಿಯರ್‌ಗಳ ಬಡ್ತಿಗೆ ಸಂಬಂಧಿಸಿದ ಕಡತ ವಿಲೇವಾರಿ ವಿಳಂಬ ಆರೋಪದಲ್ಲಿ ನಗರಾಭಿವೃದ್ಧಿ ಇಲಾಖೆಯೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ನೀಡಿದ್ದ ವರದಿ ಆಧರಿಸಿ ಡಿಪಿಎಆರ್ ಅಮಾನತುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಆ್ಯಂಡ್ರೂಸ್ ಕೆಎಟಿ ಮೊರೆಹೋಗಿದ್ದರು.

'ನಿರ್ದಿಷ್ಟ ಆಧಾರವಿಲ್ಲದೆ ಮಾಡಿರುವ ಅಮಾನತು ಆದೇಶವನ್ನು ಹಿಂಪಡೆದು ತಕ್ಷಣವೇ ಸೇವೆಗೆ ನಿಯೋಜಿಸಿಕೊಳ್ಳಬೇಕು. ಆದರೂ, ಅಗತ್ಯವಿದ್ದರೆ ಯಾವುದೇ ಪೂರ್ವಗ್ರಹ ಇಲ್ಲದೆ ಅರ್ಜಿದಾರರ ವಿರುದ್ಧ ಶಿಸ್ತುಕ್ರಮದ ಪ್ರಕ್ರಿಯೆಗಳನ್ನು ಮುಂದುವರಿಸಬಹುದು' ಎಂದು ಕೆಎಟಿ ಅಧ್ಯಕ್ಷ ನ್ಯಾಯಮೂರ್ತಿ ಆರ್. ಬಿ. ಬೂದಿಹಾಳ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.



ಎಲಿಷ ಆ್ಯಂಡ್ರೂಸ್

ಕಡತ ವಿಲೇವಾರಿ ವೇಳೆ ವಿಳಂಬ ಧೋರಣೆ ಅನುಸರಿಸಿದ ಹಾಗೂ ಸರ್ಕಾರಿ ನೌಕರರ ತರವಲ್ಲದ ವರ್ತನೆ ತೋರಿದ ಆರೋಪವನ್ನು ಅವರು ಎದುರಿಸುತ್ತಿದ್ದರು. 'ಕಡತಗಳನ್ನು ನಿಗದಿತ ಕಾಲ ಮಿತಿಯೊಳಗೆ ವಿಲೇವಾರಿ ಮಾಡುವಂತೆ ಸತತವಾಗಿ ನಿರ್ದೇಶನ ನೀಡಿದ್ದರೂ ಎಲಿಷ ಅವರು ನಿರ್ಲಕ್ಷಿಸಿದ್ದಾರೆ. 1966ರ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮ 3(1) ಅನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿದ್ದಾರೆ. ಅವರನ್ನು ಅಮಾನತು ಮಾಡಿ, ಇಲಾಖಾ ವಿಚಾರಣೆ ಆರಂಭಿಸಬೇಕು' ಎಂದು ರಾಕೇಶ್ ಸಿಂಗ್ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

ಬೀದಿ ವ್ಯಾಪಾರಿಗಳಿಗೆ ಯೋಜನೆ: ಸಹಾಯ ಕೇಂದ್ರ

1.80 ಲಕ್ಷ ಜನರಿಗೆ ಪ್ರಧಾನ ಮಂತ್ರಿ ಸ್ವನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಲ್ಲಿ ಬಿಬಿಎಂಪಿ ಸಮಾಜಕಲ್ಯಾಣ ವಿಭಾಗದ ವತಿಯಿಂದ 1.80 ಲಕ್ಷ ಜನರಿಗೆ ಸಾಲ ನೀಡುವ ಗುರಿ ಹೊಂದಲಾಗಿದೆ ಎಂದು ವಿಶೇಷ ಆಯುಕ್ತ ಡಾ. ವಿ. ರಾಮ್‌ಪ್ರಸಾದ್ ಮನೋಹರ್ ಹೇಳಿದರು.

'ಈ ಮೊದಲು 55 ಸಾವಿರ ಜನರಿಗೆ ಸೌಲಭ್ಯ ಕಲ್ಪಿಸುವ ಯೋಜನೆ ಇತ್ತು. ಅದನ್ನು 1.80 ಲಕ್ಷ ಜನರಿಗೆ ಹೆಚ್ಚಿಸಿ, ಅದರ ಸಮ್ಮತಿಗೆ ಕಳುಹಿಸಲಾಗಿದೆ. ಫಲಾನುಭವಿಗಳಿಗೆ ಇದನ್ನು ತಲುಪಿಸುವ ಕಾರ್ಯ ಆರಂಭವಾಗಿದೆ' ಎಂದರು.

ಗಾಂಧಿಬಜಾರ್‌ನಲ್ಲಿ ಬೀದಿ ವ್ಯಾಪಾರಿಗಳಿಗೆ ಸ್ವನಿಧಿ ಯೋಜನೆಯನ್ನು ಆರಂಭಿಸಲಾಗಿದೆ. ಮುಂದಿನ ವಾರ ಸಿಟಿ ಮಾರುಕಟ್ಟೆಯಲ್ಲೂ ಕಾರ್ಯಕ್ರಮ ಆಯೋಜಿಸಲಾಗಿದೆ. ಬೀದಿ ವ್ಯಾಪಾರಿಗಳು ಇರುವ ಕಡೆಯೇ ಸಹಾಯ ಕೇಂದ್ರ ತೆರೆಯಲಾಗುತ್ತದೆ. ಅರ್ಜಿ ಪಡೆದು, ಸಾಲ ವಿತರಿಸುವ ಕೆಲಸವನ್ನೂ ಅಲ್ಲೇ ಮಾಡಲಾಗುತ್ತದೆ ಎಂದು ತಿಳಿಸಿದರು.

ಬ್ಯಾಂಕ್‌ಗಳಲ್ಲಿ ಬೀದಿ ವ್ಯಾಪಾರಿಗಳು ಸಾಲ ಪಡೆಯಲು ಸಾಕಷ್ಟು ಪ್ರಯಾಸ ಪಡಬೇಕು. ಆದರೆ ಈ ಯೋಜನೆಯಲ್ಲಿ ಅವರಿಗೆ ಸುಲಭ ಹಾಗೂ ತುರ್ತಾಗಿ ಸಾಲ ಲಭ್ಯವಾಗಲಿದೆ ಎಂದು ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮಗಳಿಗೆ ಅನುಮತಿ ನೀಡಲು ಕೆಲವು ಇತಿಮಿತಿಗಳನ್ನು ಪರಿಶೀಲಿಸಲಾಗುತ್ತದೆ. ಎಲ್ಲದಕ್ಕೂ ಒಂದೇ ರೀತಿಯ ಮಾನದಂಡ ಇರುವುದಿಲ್ಲ. ಅದು ಆಯಾ ಪ್ರಕರಣ ಆಧಾರವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಚಾಮರಾಜಪೇಟೆ ಈದ್ಗಾ ಆಟದ ಮೈದಾನಕ್ಕೆ ಸಂಬಂಧಿಸಿದಂತೆ ಕಾನೂನು ತಜ್ಞರ ಸಲಹೆ ಪಡೆದು ಮುಂದುವರಿಯಲಾಗುತ್ತದೆ. ಯಾರು ಏನೇ ಹೇಳಿದರೂ ಕಾನೂನು ರೀತಿಯೇ ಕ್ರಮವಾಗುತ್ತದೆ ಎಂದು ಉತ್ತರಿಸಿದರು.

ಜಿಎಸ್‌ಟಿ ಪರಿಶೀಲನೆ: 'ಬಿಬಿಎಂಪಿ ವತಿಯಿಂದ ಜಿಎಸ್‌ಟಿ ಪಾವತಿಸುವುದು ಕಡಿಮೆಯಾಗಿದೆ ಎಂಬ ದೂರಿದೆ. ಆದರೆ ಇದು ಯಾವ ಪ್ರಕರಣ ಎಂದು ಪರಿಶೀಲಿಸಬೇಕಾಗಿದೆ. ಕೆಲವು ಕಾಮಗಾರಿಗಳಿಗೆ, ಗುತ್ತಿಗೆದಾರರಿಗೆ ವಿನಾಯಿತಿ ಇದೆ. ನಾವು ಯಾವುದೇ ರೀತಿಯಲ್ಲಿ ತಪ್ಪು ಮಾಡಲು ಸಾಧ್ಯವಿಲ್ಲ. ಎಲ್ಲವೂ ಆನ್‌ಲೈನ್‌ನಲ್ಲೇ ಇರುತ್ತದೆ. ಅಲ್ಲದೆ ಆಡಿಟ್ ಕೂಡ ಆಗುತ್ತದೆ' ಎಂದು ರಾಮ್‌ಪ್ರಸಾದ್ ವಿವರ ನೀಡಿದರು.

ಬಿಬಿಎಂಪಿ ಶಾಲೆ ಮಕ್ಕಳಿಗೆ ಶೂಗಳನ್ನು ನೀಡಲು ಟೆಂಡರ್ ಕರೆಯಲಾಗಿದೆ. ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಗುಣಮಟ್ಟದ ಶೂಗಳನ್ನು ವಿತರಿಸಲಾಗುತ್ತದೆ. ಕನ್ನಡ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಬಂದಿಲ್ಲ. ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಲಾಗಿದೆ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವನಿಧಿ 7ನೇ ಜುಲೈ 2022ವರೆಗೆ

ಅರ್ಹ ಅರ್ಜಿ 62,279	ಮಂಜೂರು 37,559	ವಿಲೇವಾರಿ 28,680
ಬ್ಯಾಂಕ್‌ನಿಂದ ವಾಪಸ್ 13,406	ಅನರ್ಹ 5,649	ಮುಗಿದ ಪ್ರಕರಣ 7,863
ಶಾಖೆಗಳ ಸಂಖ್ಯೆ 2,722	ಮಂಜೂರು ಹಣ ₹40.81 ಕೋಟಿ	ವಿತರಿಸಿದ ಹಣ ₹30.9ಕೋಟಿ
ಶಿಫಾರಸು ಅರ್ಜಿಗಳು 57,842	ಮಂಜೂರಾದ ಶಿಫಾರಸು ಅರ್ಜಿಗಳು 57,247	ತಿರಸ್ಕೃತಗೊಂಡ ಶಿಫಾರಸು ಅರ್ಜಿಗಳು 213
ಮಂಜೂರಾಗಲು ತೆಗೆದುಕೊಂಡ ಸಮಯ ಸರಾಸರಿ 41 ದಿನ		

ಪದವಿ ಪಠ್ಯಪುಸ್ತಕ ವಿಳಂಬ: ಕ್ರಮಕ್ಕೆ ಸೂಚನೆ

ವರದಿ ಪರಿಣಾಮ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಪದವಿಗಳ ಎರಡನೇ ಸೆಮಿಸ್ಟರ್‌ನ ಕನ್ನಡ ವಿಭಾಗದ ಪಠ್ಯಪುಸ್ತಕಗಳ ಪೂರೈಕೆ ವಿಳಂಬವಾಗಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಸೂಚಿಸಲಾಗಿದೆ.

'ಪದವಿ ಪಠ್ಯ ಪುಸ್ತಕಕ್ಕೂ ಪರದಾಟ' ಶೀರ್ಷಿಕೆ ಅಡಿಯಲ್ಲಿ 'ಪ್ರಜಾವಾಣಿ'ಯಲ್ಲಿ ಗುರುವಾರ ವರದಿ ಪ್ರಕಟವಾದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವರ ಕಚೇರಿಯಿಂದ ಈ ಸೂಚನೆ ನೀಡಲಾಗಿದೆ.

'ವರದಿಯಲ್ಲಿನ ಅಂಶಗಳ ಕುರಿತು ಕೂಡಲೇ ಪರಿಶೀಲಿಸಬೇಕು. ಪಠ್ಯಪುಸ್ತಕ ಮುದ್ರಣದಲ್ಲಿ ವಿಳಂಬಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಬೇಕು. ಇದೇ ರೀತಿ ರಾಜ್ಯದ ಇತರ ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳ ವಿತರಣೆಯು ನಿಗದಿತ ಕಾಲಮಿತಿಯಲ್ಲಿ ಆಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಕೈಗೊಂಡ ಕ್ರಮಗಳ ಬಗ್ಗೆ ವಿವರ ಸಲ್ಲಿಸಬೇಕು' ಎಂದು ಉನ್ನತ ಶಿಕ್ಷಣ ಸಚಿವರ ಕಚೇರಿಯಿಂದ ಪ್ರಧಾನ ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.



ಪ್ರಶಸ್ತಿ ಪ್ರದಾನ

ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ ಸಂಸ್ಥೆ ಆಯೋಜಿಸಿದ್ದ ಕುವೆಂಪು 118ನೇ ಜಯಂತಿ ಮತ್ತು ದೇ. ಜವರೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಅಬುದಾಬಿ(ದುಬೈ) ಕರ್ನಾಟಕ ಸಂಘದ ಅಧ್ಯಕ್ಷ ಸರ್ವೋತ್ತಮಶೆಟ್ಟಿ ಅವರಿಗೆ ದೇ.ಜ.ಗೌ ಪ್ರಶಸ್ತಿ ನೀಡಿ ಗೌರವಿಸಿದರು. (ಎಡದಿಂದ) ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ಕವಿ ನಾಗತಿಹಳ್ಳಿ ರಮೇಶ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ಆದರ್ಶ ಸುಗಮ ಸಂಗೀತ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ, ಕುವೆಂಪು ಕನಾನಿಕೇತನ ಸಂಸ್ಥೆ ಅಧ್ಯಕ್ಷ ಕುವೆಂಪು ಪ್ರಕಾಶ್ ಇದ್ದರು. –ಪ್ರಜಾವಾಣಿ ಚಿತ್ರ

'ಡಿಕೆಶಿ ವಿರುದ್ಧ ಸಿದ್ದರಾಮೋತ್ಸವ'

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸಿದ್ದರಾಮೋತ್ಸವ ಆಯೋಜಿಸಲಾಗುತ್ತಿದೆಯೇ ಹೊರತು ಬೇರೆ ಯಾರ ವಿರುದ್ಧವೂ ಅಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್ ಕಟೀಲ್ ಟೀಕಿಸಿದ್ದಾರೆ.

'ಬಿಜೆಪಿ ವಿರುದ್ಧ ಸಿದ್ದರಾಮೋತ್ಸವ ಅಲ್ಲ. ಕಾಂಗ್ರೆಸ್‌ನಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕು ಮತ್ತು ಹೈಕಮಾಂಡ್‌ಗೆ ತಮ್ಮ ಶಕ್ತಿ ತೋರಿಸಬೇಕು ಹಾಗೂ ಮುಂದಿನ ಮುಖ್ಯಮಂತ್ರಿ ನಾನೇ ಎನ್ನುವ ಒತ್ತಡ ಹೇರಲು ಸಿದ್ದರಾಮಯ್ಯ ಅವರು ಅನುಸರಿಸಿದ ತಂತ್ರಗಾರಿಕೆ ಇದು' ಎಂದು ಗುರುವಾರ ಪ್ರತಿಕ್ರಿಯಿಸಿದ್ದಾರೆ.

'ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹಾಕಿ ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನವನ್ನು ಸಿದ್ದರಾಮಯ್ಯ ಅವರು ಮಾಡುತ್ತಿದ್ದಾರೆ. ಜತೆಗೆ, ಡಿ.ಕೆ.ಶಿವಕುಮಾರ್ ಅವರನ್ನು ರಾಜಕೀಯವಾಗಿ ಮುಗಿಸುವ ಎರಡನೇ ಪ್ರಯತ್ನ. ಇದು ಸಿದ್ದರಾಮಯ್ಯ ತಂತ್ರ. ಅವರು ಎಲ್ಲೆಡೆ ಇದೇ ರೀತಿಯ ತಂತ್ರ ಬಳಸಿದ್ದಾರೆ. ಜನತಾದಳವನ್ನು ಮುಗಿಸಿ ಕಾಂಗ್ರೆಸ್ ಸೇರಿದರು. ಇಲ್ಲಿನ ಮೂಲ ಕಾಂಗ್ರೆಸ್‌ನವರನ್ನು ಹೊರಗಿಟ್ಟರು. ಅಧಿಕಾರ ಹಿಡಿಯಲು ಖರ್ಗೆ ಅವರನ್ನು ಹೊರಗಿಟ್ಟರು. ಪರಮೇಶ್ವರ ಅವರನ್ನು ಸೋಲಿಸಿದರು' ಎಂದು ಹೇಳಿದ್ದಾರೆ.

'ಸಿದ್ದರಾಮೋತ್ಸವದಿಂದ ನಮಗೆ ಭಯ ಇಲ್ಲ. ಡಿಕೆಶಿ ಅವರಿಗೆ ಭಯವಾಗುತ್ತಿದ್ದು ಅವರು ನಿದ್ರೆ ಮಾಡುತ್ತಿಲ್ಲ' ಎಂದು ವ್ಯಂಗ್ಯವಾಡಿದರು.

ಔಷಧ ವ್ಯಾಪಾರಿ ಕೊಲೆ, ಐಎಸ್ ಕೈವಾಡ?: ಅಧಿಕಾರಿಗಳ ಶಂಕೆ

ನವದೆಹಲಿ (ಪಿಟಿಐ): ಮಧ್ಯಪ್ರಾಚ್ಯ ಉಗ್ರ ಸಂಘಟನೆ ಐಎಸ್ ಹಿಂಸಾಚಾರದಿಂದ ಸ್ವಯಂ ಪ್ರೇರಿತರಾಗಿ ಅಮರಾವತಿಯ ಔಷಧ ವ್ಯಾಪಾರಿ ಉಮೇಶ್ ಪ್ರಹ್ಲಾದರಾವ್ ಕೊಲ್ಹೆ ಹತ್ಯೆ ಮಾಡಿರುವ ಬಗ್ಗೆ ತನಿಖೆ ನಡೆಯುತ್ತಿದ್ದು, ಆರೋಪಿಗಳು ಉಗ್ರ ಸಂಘಟನೆ ಜತೆ ಸಂಪರ್ಕ ಹೊಂದಿದ್ದಾರೆಯೇ ಎಂಬುದನ್ನು ತನಿಖಾಧಿಕಾರಿಗಳು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿಯಿಂದ ಅಮಾನತ್ತಾದ ನೂಪುರ್ ಶರ್ಮಾ ಅವರಿಗೆ ಬೆಂಬಲ ಸೂಚಿಸಿದ ಕಾರಣಕ್ಕೆ ಉಮೇಶ್ ಕೊಲ್ಹೆ ಅವರನ್ನು ಜೂನ್ 21ರಂದು ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇಬ್ಬರು ಕತ್ತು ಸೀಳಿ ಹತ್ಯೆ ಮಾಡಿದ್ದರು.

ಆರೋಪಿಗಳಿದ್ದ ಸ್ಥಳಗಳಲ್ಲಿ ನಡೆಸಿದ ಶೋಧದ ವೇಳೆ ದ್ವೇಷದ ಸಂದೇಶ ಹರಡುವ ಕರಪತ್ರಗಳು, ಚಾಕು, ಮೊಬೈಲ್ ಫೋನ್, ಸಿಮ್ ಕಾರ್ಡ್‌ಗಳು, ಮೆಮೊರಿ ಕಾರ್ಡ್ ಮತ್ತು ಇತರ ದಾಖಲೆಗಳು ಪತ್ತೆಯಾಗಿವೆ.

'ಮೇಲ್ನೋಟಕ್ಕೆ ಹಂತಕರು ಐಸಿಸ್‌ನಿಂದ 'ಸ್ವಯಂ ಪ್ರೇರಿತರಾಗಿ' ಕೃತ್ಯವೆಸಗಿರಬಹುದು. ತನಿಖಾಧಿಕಾರಿಗಳು ಐಎಸ್ ಸೇರಿದಂತೆ ವಿದೇಶಿ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದಾರೆಯೇ ಎಂದು ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

ಹತ್ಯೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬುಧವಾರ ಮಹಾರಾಷ್ಟ್ರದ 13 ಸ್ಥಳಗಳಲ್ಲಿ ಶೋಧ ನಡೆಸಿದೆ. ಎನ್‌ಐಎ ಪ್ರಕರಣದ ತನಿಖೆ ವಹಿಸಿಕೊಳ್ಳುವುದಕ್ಕೂ ಮೊದಲು ಮಹಾರಾಷ್ಟ್ರ ಪೊಲೀಸರು ಏಳು ಜನರನ್ನು ಬಂಧಿಸಿದ್ದರು.

'ಭೀತಿ ಹರಡುವುದೇ ಹಂತಕರ ಗುರಿ'

ಮುಂಬೈ (ಪಿಟಿಐ): ಅಮರಾವತಿಯಲ್ಲಿ ಔಷಧ ವ್ಯಾಪಾರಿ ಉಮೇಶ್ ಕೊಲ್ಹೆ ಅವರ ಕೊಲೆಯ ಉದ್ದೇಶ ಭಯೋತ್ಪಾದನೆಯ ಭೀತಿಯನ್ನು ಸಮಾಜದಲ್ಲಿ ಮೂಡಿಸುವುದೇ ಆಗಿತ್ತು ಎಂದು ತನಿಖಾ ಸಂಸ್ಥೆ ಎನ್‌ಐಎ ಅಧಿಕಾರಿಗಳು ವಿಶೇಷ ಕೋರ್ಟ್‌ಗೆ ತಿಳಿಸಿದ್ದಾರೆ.

ಪ್ರಕರಣ ಕುರಿತಂತೆ ಬಂಧಿತರಾಗಿರುವ ಏಳು ಆರೋಪಿಗಳನ್ನು ಕೋರ್ಟ್ ವಿಚಾರಣೆ ಆಲಿಸಿದ ನಂತರ, ಜುಲೈ 15ರವರೆಗೂ ಎನ್‌ಐಎ ವಶಕ್ಕೆ ಒಪ್ಪಿಸಿತು. ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರ ವಿವಾದಾಸ್ಪದ ಹೇಳಿಕೆಯನ್ನು ಹಂಚಿಕೊಂಡಿದ್ದಕ್ಕಾಗಿ ವ್ಯಾಪಾರಿ ಕೊಲೆ ಆಗಿತ್ತು.



ಕುಂಬ್ಡಾಜೆ ಪಂಚಾಯಿತಿಗೆ ಐಸಿಡಿಎಸ್ ಮೇಲುಸ್ತುವಾರಿ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಚೆಕ್ ಹಸ್ತಾಂತರಿಸಿದರು

ಊರ ಬಾಲೆ ಉಳಿಸಲು ಎದ್ದು ನಿಂತ ಜನ

ಒಂದನೇ ಪುಟದಿಂದ...

ಇನ್ನೂ ₹ 20 ಲಕ್ಷ ಒಟ್ಟು ಮಾಡುವ ಗುರಿ ಇಟ್ಟುಕೊಂಡಿದ್ದಾರೆ.

ಕುಂಬ್ಡಾಜೆ ಗ್ರಾಮದ ಕಜಮಲೆ ನಿವಾಸಿ ಉದಯ ಮತ್ತು ಸವಿತಾ ದಂಪತಿಯ ಪುತ್ರಿ ಸಾನ್ವಿ, ನಾರಂಪಾಡಿ ಫಾತಿಮಾ ಶಾಲೆಯ ಎರಡನೇ ತರಗತಿ ವಿದ್ಯಾರ್ಥಿನಿ. ಆಕೆಗೆ ನಿರಂತರ ಚಿಕಿತ್ಸೆ ನೀಡಲಾಗುತ್ತಿದೆ. ಅಸ್ಥಿಮಜ್ಜೆ ಕಸಿ ನಡೆಸಲೇಬೇಕು ಎಂದು ವೈದ್ಯರು ತಿಳಿಸಿದ ನಂತರ ದಂಪತಿ ಚಿಂತೆಗೆ ಒಳಗಾಗಿದ್ದರು. ಕೂಲಿ ಕೆಲಸ ಮಾಡುತ್ತಿರುವ ಅವರ ಅಳಲು ಕಂಡು ಗ್ರಾಮ ಪಂಚಾಯಿತಿ ಜೂನ್ 19ರಂದು 'ಸಾನ್ವಿ ವೈದ್ಯಕೀಯ ಚಿಕಿತ್ಸಾ ಸಮಿತಿ'ಯನ್ನು ರಚಿಸಿತು. ಒಂದು ವಾರದ ನಂತರ ನಿಧಿ ಸಂಗ್ರಹ ಕಾರ್ಯ ಆರಂಭಿಸಿತು.

ಮಾರ್ಪನಡ್ಕದಿಂದ ಈ ಅಭಿಯಾನ ಆರಂಭಗೊಂಡಿದ್ದು, ಬದಿಯಡ್ಕ, ಬೆಳ್ಳೂರು, ಕಾರಡ್ಕ, ಎಣ್ಮಕಜೆ ಮತ್ತು ಚೆಂಗಳ ಪಂಚಾಯಿತಿಗಳ ಜನರೂ ಹಣ ಸಂಗ್ರಹಿಸಲು ತೊಡಗಿದರು. 'ಕುಟುಂಬಶ್ರೀ' ಕಾರ್ಯಕರ್ತರು, ಸ್ವಸಹಾಯ ಗುಂಪುಗಳ ಸದಸ್ಯರು, ಕ್ಲಬ್‌ಗಳು, ಸಂಘ–ಸಂಸ್ಥೆಗಳು, ಪೊಲೀಸ್ ಠಾಣೆ, ಸರ್ಕಾರಿ ಕಚೇರಿ, ಶಾಲೆ, ಆಸ್ಪತ್ರೆ ಹೀಗೆ ಎಲ್ಲ ಕಡೆಗಳಲ್ಲಿ ಹಣ ಸಂಗ್ರಹಿಸಲಾಗುತ್ತಿದೆ.

ನೆರವಿಗೆ ಸಂಪರ್ಕಿಸಿ

ಸಾನ್ವಿ ವೈದ್ಯಕೀಯ ಚಿಕಿತ್ಸಾ ಸಮಿತಿ, ಕೇರಳ ಗ್ರಾಮೀಣ ಬ್ಯಾಂಕ್ ಖಾತೆ ಸಂಖ್ಯೆ: 40413101052286; ಐಎಫ್‌ಎಸ್‌ಸಿ: KLGB0040413; ಗೂಗಲ್ ಪೇ: 8921968983

ಜನರಿಗೆ ತೊಂದರೆಯಾದಾಗ ಎಲ್ಲವನ್ನು ಮರೆತು ಒಂದಾಗುವ ದೊಡ್ಡ ಗುಣ ಇರುವ ಪಂಚಾಯಿತಿ ಇದು. ಇದನ್ನು ಸೌಹಾರ್ದ ಪಂಚಾಯಿತಿ ಎಂದೂ ಕರೆಯುತ್ತಿದ್ದೇವೆ

ಹಮೀದ್ ಪೊಸೊಳಿಗೆ
ಗ್ರಾಮ ಪಂಚಾಯಿತಿ ಅಧ್ಯಕ್ಷ

'100ಕ್ಕೂ ಹೆಚ್ಚು ಮಂದಿಯನ್ನು ಒಳಗೊಂಡ ಸಮಿತಿ ಹಣ ಸಂಗ್ರಹಿಸಲಾಗುತ್ತಿದೆ. ಬಡ ಕುಟುಂಬಕ್ಕೆ ಆಸರೆಯಾಗುವುದು ಊರಿನ ಜವಾಬ್ದಾರಿ ಎಂದು ಕೊಂಡು ಹೃದಯ ವೈಶಾಲ್ಯ ಮೆರೆಯುತ್ತಿದ್ದಾರೆ' ಎಂದು ಸಮಿತಿಯ ಸಂಚಾಲಕ ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಕ್ರೀದ್: ಪ್ರಾಣಿ ಬಲಿಗೆ ಹಲವು ನಿರ್ಬಂಧ

ಒಂದನೇ ಪುಟದಿಂದ...

ಸಾರ್ವಜನಿಕ ಪ್ರದೇಶ, ರಸ್ತೆಗಳು, ಶಾಲಾ, ಕಾಲೇಜು, ಆಸ್ಪತ್ರೆ ಆವರಣ, ಉದ್ಯಾನ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿ ಬಲಿ ನೀಡಬಾರದು. ಜಿಲ್ಲಾಡಳಿತ, ಸ್ಥಳೀಯ ಆಡಳಿತಗಳು ನಿಗದಿಪಡಿಸಿದ ಸ್ಥಳಗಳಲ್ಲಿ ಮಾತ್ರ ಬಲಿ ನೀಡಬಹುದು. ಬಲಿ ನೀಡುವಾಗ ಶುಚಿತ್ವ, ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು. ಪ್ರಾಣಿ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು ಎಂದು ಆದೇಶ ಹೇಳಿದೆ.

ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕೋವಿಡ್ ನಿಯಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸ್ಥಳೀಯ ಆಡಳಿತ, ಪೊಲೀಸರು, ಸಂಬಂಧಿಸಿದ ಇಲಾಖೆ ಅಧಿಕಾರಿಗಳು ನೀಡುವ ಸಾಮಾನ್ಯ ನಿರ್ದೇಶನಗಳನ್ನು ಪಾಲಿಸಬೇಕು.

ಬೃಹತ್ ಬೆಂಗಳೂರು ನಗರ ಪಾಲಿಕೆ ಸೇರಿದಂತೆ ಜಿಲ್ಲಾಡಳಿತಗಳೂ ಪ್ರತ್ಯೇಕ ಆದೇಶ ಹೊರಡಿಸಿದ್ದು, ಪ್ರಾಣಿ ಬಲಿ ನಿಷೇಧಿಸಿವೆ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಪ್ರಾಣಿ ಬಲಿ ತಡೆ ಕಾಯ್ದೆಯ ಅನ್ವಯ 6 ತಿಂಗಳ ಶಿಕ್ಷೆ, ಭಾರತೀಯ ದಂಡ ಸಂಹಿತೆ ಅನ್ವಯ 5 ವರ್ಷಗಳ ಶಿಕ್ಷೆ ವಿಧಿಸುವ ಎಚ್ಚರಿಕೆ ನೀಡಿವೆ.

ಪ್ರಾಣಿವಧೆ ಕಾಯ್ದೆಯ ಅನ್ವಯ ಆಹಾರಕ್ಕೆ ಯೋಗ್ಯವಾದ ಪ್ರಾಣಿಗಳನ್ನು ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ವಧೆ ಮಾಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಸೂಚಿಸಿದ್ದಾರೆ.

ನಗರದಲ್ಲಿ ಇಂದು

ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನದ 44ನೇ ವಾರ್ಷಿಕೋತ್ಸವದ ಪ್ರಯುಕ್ತ ಮಹಾಶಕ್ತಿ ದ್ವಾರದ ಉದ್ಘಾಟನೆ: ಅತಿಥಿಗಳು: ಎಚ್.ಡಿ. ದೇವೇಗೌಡ, ಡಿ.ವೈ. ಪಾಟೀಲ, ಚೆನ್ನಮ್ಮ ದೇವೇಗೌಡ, ಡಿ.ಕೆ. ಸುರೇಶ್, ಎಚ್. ಡಿ. ಕುಮಾರಸ್ವಾಮಿ, ಮುನಿರತ್ನ, ವಿ.ಸೋಮಣ್ಣ, ಆಯೋಜನೆ ಮತ್ತು ಸ್ಥಳ: ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ನಂದಿನಿ. ಕೆ.ಆರ್., ಎಂ.ಆರ್. ಜಯರಾಮ್, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ನಾಣ್ಯ ದರ್ಶಿನಿ ಪ್ರದರ್ಶನ: ಉದ್ಘಾಟನೆ: ಆರ್. ಗುರುಮೂರ್ತಿ, ಅಧ್ಯಕ್ಷತೆ: ರಾಜೇಂದ್ರ ಮರು, ರಿಜ್ವಾನ್ ರಜಾಕ್, ಅನೀಶ್ ಮೆಹ್ತಾ, ಆಯೋಜನೆ: ಕನ್ನಡ ನಾಡು ನಾಣ್ಯ ಸಂಘ, ಸ್ಥಳ: ಶಿಕ್ಷಕರ ಸದನ, ಬೆಳಿಗ್ಗೆ 11

ಸಂಸ್ಕೃತಿ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ: ಅತಿಥಿಗಳು: ರಘು ದೀಕ್ಷಿತ್, ಚೈತ್ರಾ ವಾಸುದೇವನ್, ಸ್ಫೂರ್ತಿ ವಿಶ್ವಾಸ, ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ, ಅವಿರಾಮ್ ಶರ್ಮಾ, ಪಿ. ದಯಾನಂದ್ ಪೈ, ರವಿ ವೆಂಕಟೇಸಂ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾಲೇಜು, ವಿ.ವಿ ಪುರಂ, ಬೆಳಿಗ್ಗೆ 11.30

'ಸತ್ಯು ಸಂಭ್ರಮ-93'-ಸತ್ಯು ಮತ್ತು ರಂಗ ಚಳವಳಿ ಸಂವಾದ: ಅತಿಥಿಗಳು: ಕೆ.ಎಂ. ಚೈತನ್ಯ ಅವರಿಂದ ರಂಗ ವಿದ್ಯಾರ್ಥಿಗಳ ಜೊತೆ ಸಂವಾದ, 'ಸತ್ಯು ಮತ್ತು ನಾವು': ಹಿರಿಯ ರಂಗ ಕರ್ಮಿಗಳಿಂದ ನೆನಪಿನ ಮಾತು, ಆಯೋಜನೆ: ವಿಭಿನ್ನ, ಸ್ಥಳ ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4

ಕನ್ನಡ ಅಭಿವೃದ್ಧಿ ಪ್ರಾಧಿಕಾರದ 3ನೇ ದಶಕದ ಸಮಾರಂಭ ಮತ್ತು 23 ಪುಸ್ತಕಗಳ ಲೋಕಾರ್ಪಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪುಸ್ತಕ ಲೋಕಾರ್ಪಣೆ: ವಿ. ಸುನೀಲ್ ಕುಮಾರ್, ಜೆ.ಸಿ. ಮಾಧುಸ್ವಾಮಿ, ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ಉದಯ್.ಬಿ. ಗರುಡಾಚಾರ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಚೈತನ್ಯ ಸಂಜೆ: ಅಧ್ಯಕ್ಷತೆ: ಶಾಂತಾಮಣಿ ಮೃತ್ಯುಂಜಯ, ಅತಿಥಿಗಳು: ಲಯನ್ ಶೋಭಾ ಮಹೇಶ್, ಕೆ.ವಿ. ನಾಗರಾಜಮೂರ್ತಿ, ಬಸವರಾಜ ಬಲ್ಲೂರು, ಆಯೋಜನೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ಭರಣಿ ನುಡಿನಮನ 'ಸನ್ಮಾನ ಸುಖ'

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸುವರ್ಣ ಮಹೋತ್ಸವ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಎಲ್. ಬೈರಪ್ಪ, ಅತಿಥಿಗಳು: ವಿ. ಸೋಮಣ್ಣ, ಗೋವಿಂದ ಕಾರಜೋಳ, ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ಸ್ಥಳ: ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣ, ಹೊಸಹಳ್ಳಿ, ವಿಜಯನಗರ, ಬೆಳಿಗ್ಗೆ: 10.15



ಸಿದ್ಧಲಿಂಗ ಸ್ವಾಮೀಜಿ



ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಂಜನಾ ಬಛಲ, ಅತಿಥಿಗಳು: ವೈಜಯಂತಿ ಕಾಶಿ, ಶಕುಂತಲಾ ಆರ್. ಪ್ರಭಾತ್, ಪ್ರಜ್ಞಾ ಯೋಗೇಶ್, ಸ್ಥಳ: ಪತ್ತಿ ಸಭಾಂಗಣ(ರಾಮ ಮಂದಿರ), ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 6

ನಾಟಕ ಪ್ರದರ್ಶನ: ಉದ್ಘಾಟನೆ: ಪ.ರಾ. ಕೃಷ್ಣಮೂರ್ತಿ, ಅಧ್ಯಕ್ಷತೆ: ಕೂಡ್ಲೂರು ವೆಂಕಟಪ್ಪ, ಅತಿಥಿಗಳು: ಗಣೇಶಯಾಜಿ, ರಾಮಚಂದ್ರಪ್ಪ, ಆಯೋಜನೆ: ಕಲಾರಂಗ ಲೋಕ, ಸ್ಥಳ: ಉದಯಭಾನು ಕಲಾಸಂಘ, ಗವೀಪುರ, ಕೆ.ಜಿ. ನಗರ, ಸಂಜೆ 6.30

ದೇವನಹಳ್ಳಿ ರೈತರ ನಿಯೋಗದ ಜತೆ ಮಾತುಕತೆ

ಬಲವಂತದಿಂದ ಭೂಸ್ವಾಧೀನ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಉದ್ದೇಶಗಳಿಗಾಗಿ ರೈತರಿಂದ ಬಲವಂತವಾಗಿ ಜಮೀನು ಸ್ವಾಧೀನ ಮಾಡಿಕೊಳ್ಳಬಾರದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ರೈತರ ನಿಯೋಗ ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಗುರುವಾರ ಅವರು ಮಾತನಾಡಿದರು.

ಸ್ವಯಂಪ್ರೇರಿತರಾಗಿ ಜಮೀನು ನೀಡುವ ರೈತರ ಜಮೀನುಗಳನ್ನಷ್ಟೆ ಸ್ವಾಧೀನ ಮಾಡಿಕೊಳ್ಳಬೇಕು. ಬಲವಂತವಾಗಿ ಇಲ್ಲವೇ, ಬೆದರಿಕೆ ಹಾಕಿ ಭೂಮಿ ವಶಕ್ಕೆ ಪಡೆಯಬಾರದು. ಇಂತಹ ವಿಷಯದಲ್ಲಿ ರೈತರಿಂದ ದೂರುಗಳು ಬಂದರೆ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಸ್ವಇಚ್ಛೆಯಿಂದ ಭೂಮಿ ನೀಡುವ ರೈತರ ಸರ್ವೆ ನಂಬರ್‌ಗಳನ್ನು ಪಡೆದುಕೊಂಡು ಮಾರುಕಟ್ಟೆ ದರದಂತೆ ಪರಿಹಾರ ನೀಡಬೇಕು. ತಹಶೀಲ್ದಾರ್, ಉಪವಿಭಾಗಾಧಿಕಾರಿ ಸೇರಿದಂತೆ ಕೆಐಎಡಿಬಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಒಪ್ಪಿಗೆ ನೀಡದ ರೈತರ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಬೇಕು ಎಂದು ನಿರ್ದೇಶನ ನೀಡಿದರು.

ಕೈಗಾರಿಕೆಗಳ ಸ್ಥಾಪನೆಯಿಂದ ರಾಜ್ಯದ ಆರ್ಥಿಕಾಭಿವೃದ್ಧಿ ಸಾಧ್ಯ. ಉದ್ಯೋಗವೂ ಸೃಷ್ಟಿಯಾಗುತ್ತದೆ. ಕೈಗಾರಿಕೆಗಳ ಬೆಳವಣಿಗೆಗೆ ಭೂಸ್ವಾಧೀನ ಅನಿವಾರ್ಯ. ಅದಕ್ಕಾಗಿ ರೈತರ ಒಕ್ಕಲೆಬ್ಬಿಸುವಿಕೆಯನ್ನು ಸರ್ಕಾರ ಬಯಸುವುದಿಲ್ಲ ಎಂದು ಮುರುಗೇಶ ಆರ್. ನಿರಾಣಿ ಅವರು ಭರವಸೆ ನೀಡಿದರು.

'ಕೈಗಾರಿಕೆಗಳ ಸ್ಥಾಪನೆಗೆ ಚನ್ನರಾಯಪಟ್ಟಣದಲ್ಲಿ 1,777 ಎಕರೆ ಜಮೀನು ಗುರುತಿಸಲಾಗಿದೆ. ಇದಕ್ಕೆ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭೂಸ್ವಾಧೀನ ಮಾಡುತ್ತೇವೆ. ಒಪ್ಪದಿದ್ದರೆ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

ಸಣ್ಣ ಕೈಗಾರಿಕೆಗಳ ಸಚಿವ ಎಂ.ಟಿ.ಬಿ.ನಾಗರಾಜ್, ಸಂಸದ ಬಿ.ಎನ್.ಬಚ್ಚೇಗೌಡ, ಶಾಸಕ ನಿಸರ್ಗ ನಾರಾಯಣಸ್ವಾಮಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ, ಕೆಐಎಡಿಬಿ ಸಿಇಒ ಶಿವಶಂಕರ್ ಉಪಸ್ಥಿತರಿದ್ದರು.



ಬೆಂಗಳೂರಿನ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ರೈತರ ನಿಯೋಗದ ಜತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಮಾತನಾಡಿದರು.





ಮಡಿಕೇರಿ ಮಂಗಳೂರು ರಸ್ತೆಯಲ್ಲಿ ಕರ್ತೋಜಿ ಬಳಿ ಕುಸಿದಿದ್ದ ಮಣ್ಣನ್ನು ತೆರವುಗೊಳಿಸುವ ಕಾರ್ಯಾಚರಣೆ ಗುರುವಾರ ನಡೆಯಿತು (ಎಡ). ಬಂಟ್ವಾಳ ತಾಲ್ಲೂಕಿನ ಪಂಜಿಕಲ್ಲು ಗ್ರಾಮದ ಮುಕ್ಕುಡ ಎಂಬಲ್ಲಿ ಗುಡ್ಡ ಕುಸಿತದಿಂದ ಮೂವರು ಕಾರ್ಮಿಕರು ಸಾವನ್ನಪ್ಪಿದ್ದು, ಮನೆ ಮಾಲೀಕರ ಮಾರುತಿ ಕಾರು ಮಣ್ಣಿನಡಿ ಸಿಲುಕಿ ನುಜ್ಜುಗುಜ್ಜಾಗಿದೆ.

ವಿವಿಧ ಜಿಲ್ಲೆಗಳಲ್ಲಿ ಮುಂದುವರಿದ ಮಳೆ: ಹಲವೆಡೆ ಮನೆಗಳ ಕುಸಿತ: ಗ್ರಾಮಗಳಿಗೆ ನುಗ್ಗಿದ ನೀರು

ಜಲಾಶಯಗಳಿಗೆ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಭಾರಿ ಮಳೆ ಸುರಿದಿದ್ದು, ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿವೆ. ಜಲಾಶಯಗಳಲ್ಲಿ ಒಳಹರಿವು ಹೆಚ್ಚಾಗಿದೆ. ಹಲವೆಡೆ ಮನೆಗಳು ಬಿದ್ದಿವೆ. ಗ್ರಾಮಗಳಿಗೆ ನೀರು ನುಗ್ಗಿ ಸಂತ್ರಸ್ತರಾದವರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸಲಾಗಿದೆ.

ಉತ್ತರ ಕನ್ನಡದ ಜೊಯಿಡಾ ತಾಲ್ಲೂಕಿನ ಅಣಶಿ ಘಟ್ಟದಲ್ಲಿ ಆಗಾಗ ಗುಡ್ಡ ಕುಸಿಯುತ್ತಿದೆ. ಹಾಗಾಗಿ ರಾಜ್ಯ ಹೆದ್ದಾರಿ 34ರಲ್ಲಿ ಸಂಜೆ 6ರಿಂದ ಬೆಳಿಗ್ಗೆ 6ರ ಅವಧಿಯಲ್ಲಿ ಭಾರಿ ವಾಹನಗಳು, ಸಂಜೆ 7ರಿಂದ ಬೆಳಿಗ್ಗೆ 7ರ ಅವಧಿಯಲ್ಲಿ ಇತರ ಎಲ್ಲ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ನಿರಂತರ ಮಳೆಯಿಂದಾಗಿ ಜಿಲ್ಲೆಯಲ್ಲಿ ಸಾಕಷ್ಟು ಹಾನಿಯಾಗಿದೆ. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ‘ಹೊನ್ನಾವರ, ಕುಮಟಾ ಮತ್ತು ಕಾರವಾರದಲ್ಲಿ ತಲಾ ಒಂದು ಕಾಳಜಿ ಕೇಂದ್ರ ಆರಂಭಿಸಲಾಗಿದೆ. ಒಟ್ಟು 33 ಮಂದಿ ಆಶ್ರಯ ಪಡೆದಿದ್ದಾರೆ. ಜೂನ್ 1ರಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ 91 ಮನೆಗಳಿಗೆ ಹಾನಿಯಾಗಿದೆ’ ಎಂದು ಮಾಹಿತಿ ನೀಡಿದರು.

ಜಿಲ್ಲೆಯಾದ್ಯಂತ ದಿನವಿಡೀ ವರ್ಷಧಾರೆಯಾದ ಪರಿಣಾಮ ಹಳ್ಳ ಕೊಳ್ಳಗಳು ಭರ್ತಿಯಾಗಿವೆ. ಹೊನ್ನಾವರ ತಾಲ್ಲೂಕಿನ ಗುಂಡಬಾಳ, ಬಡಗಣಿ ಮತ್ತು ಭಾಸ್ಕೇರಿ ಹಳ್ಳಗಳು ಉಕ್ಕೇರಿದ್ದು, ಸುತ್ತಮುತ್ತಲಿನ ಹಲವು ಗ್ರಾಮಗಳಿಗೆ ನೀರು ನುಗ್ಗಿದೆ. ಗುಡ್ಡೇಬಾಳ ಕ್ರಾಸ್, ವರ್ಣಕೇರಿಯಲ್ಲಿ ರಾಷ್ಟ್ರೀಯ ಹೆದ್ದಾರಿ 69ರ ಮೇಲೆ ಗುಡ್ಡ ಕುಸಿದಿದ್ದು, ತಾಲ್ಲೂಕು ಆಡಳಿತವು ಮಣ್ಣುತೆರವು ಮಾಡಿದೆ.

ಭಟ್ಕಳದಲ್ಲಿ ಮನೆಯೊಂದು ಕುಸಿದಿದ್ದು, ಮಹಿಳೆ ಗಾಯಗೊಂಡಿದ್ದಾರೆ. ಸಿದ್ದಾಪುರ ತಾಲ್ಲೂಕಿನ ಹರಿಗಾರದಲ್ಲಿ, ಮಾವಿನಕೊಡ ಗ್ರಾಮದ ಕಾರೆಸಾಲದಲ್ಲಿ ಹಾಗೂ ಬಿಳಗಿ ಗ್ರಾಮದಲ್ಲಿ ಒಟ್ಟು ಮೂರು ಮನೆಗಳ ಮೇಲೆ ಮರಗಳು ಬಿದ್ದಿವೆ. ಯಾರಿಗೂ ಪ್ರಾಣಾಪಾಯವಾಗಿಲ್ಲ.

ಮುಂಡಗೋಡ ತಾಲ್ಲೂಕಿನ ಕಾತೂರು ಸಮೀಪ ಶಿಂಗನಹಳ್ಳಿಯಲ್ಲಿ ರಾಜ್ಯ ಹೆದ್ದಾರಿಯ ಮೇಲೆ ಮರ ಬಿದ್ದು ಸ್ವಲ್ಪ ಹೊತ್ತು ವಾಹನಗಳ ಸಂಚಾರಕ್ಕೆ ಅಡಚಣೆಯಾಗಿತ್ತು. ತಾಲ್ಲೂಕಿನ ವಿವಿಧೆಡೆ ಮರ ಬಿದ್ದು ಮೂರು ಮನೆಗಳು, ಶಾಲಾ ಅಡುಗೆ ಕೊಠಡಿಗೆ ಹಾನಿಯಾಗಿದೆ.

ಉಳಿದಂತೆ, ಸಿದ್ದಾಪುರ, ಶಿರಸಿ, ಯಲ್ಲಾಪುರ, ಜೊಯಿಡಾ ಹಾಗೂ ಕರಾವಳಿ ತಾಲ್ಲೂಕುಗಳಲ್ಲಿ ಮಧ್ಯಾಹ್ನದ ನಂತರ ಮಳೆ ಮತ್ತಷ್ಟು ವೇಗ ಪಡೆದಿದೆ. ಜಲಾಶಯಗಳಿಗೆ ಒಳಹರಿವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವಿವಿಧೆಡೆ ಗುರುವಾರ ತುಂತುರು ಮಳೆಯಾಗಿದೆ. ಜೇವರ್ಗಿ, ಯಡ್ರಾಮಿ ಮತ್ತು ಚಿಂಚೋಳಿ ತಾಲ್ಲೂಕಿನಲ್ಲಿ ಕೊಪ್ಪಳ ನಗರ ಸೇರಿ ಯಲಬುರ್ಗಾ, ಕುಕನೂರು, ಅಳವಂಡಿ, ಮುನಿರಾಬಾದ್ ಮತ್ತು ತಾವರಗೇರಾದಲ್ಲಿ ಮಳೆಯಾಗಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರದ ಬಟ್ಟಪಾಡಿಯಲ್ಲಿ ಮಳೆಯಿಂದಾಗಿ ಕಡಲ್ಕೊರೆತ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಕೊಡಗು: ರಸ್ತೆಗೆ ಮಣ್ಣು ಕುಸಿದು ಸಂಚಾರ ವ್ಯತ್ಯಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಮಡಿಕೇರಿ– ಚೆಟ್ಟಳ್ಳಿ ರಸ್ತೆಯಲ್ಲಿ ಗುರುವಾರ ಮಣ್ಣು ಕುಸಿದು ಸಂಚಾರ ಬಂದ್ ಆಗಿತ್ತು. ಮಡಿಕೇರಿ– ಮಂಗಳೂರು ರಸ್ತೆಯ ಕರ್ತೋಜಿ ಹಾಗೂ ಮದೆನಾಡು ಸಮೀಪ ಕುಸಿದ ಮಣ್ಣಿನ ತೆರವು ಕಾರ್ಯಾಚರಣೆ ನಡೆಯುತ್ತಿದ್ದು, ರಸ್ತೆಯ ಒಂದು ಬದಿ ಮಾತ್ರ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕಾವೇರಿ ಕೊಲ್ಲಿಯಲ್ಲಿ ಹೊಲಗಳಿಗೆ ನೀರು ನುಗ್ಗಿದೆ. ಭಾಗಮಂಡಲದ ಕೊಟ್ಟೂರು ಗ್ರಾಮದಲ್ಲಿ ಅಪಾಯಕಾರಿ ಪರಿಸ್ಥಿತಿಯಲ್ಲಿದ್ದವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕಾರ್ಯ ಆರಂಭವಾಗಿದೆ. ಜಿಲ್ಲೆಯಲ್ಲಿ ಅತಿ ಹೆಚ್ಚು 15 ಸೆಂ.ಮೀ.ನಷ್ಟು ಮಳೆ ಮಡಿಕೇರಿ ಸಮೀಪದ ಗಾಳಿ ಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುರಿದಿದೆ.

ರೇಣುಕಾ ಜಲಾಶಯ: ಒಳಹರಿವು ಹೆಚ್ಚಳ

ಬೆಳಗಾವಿ: ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದ್ದು, ಜಿಲ್ಲೆಯಲ್ಲಿ ನದಿಗಳು ಮೈದುಂಬಿ ಹರಿಯುತ್ತಿವೆ.

ಸವದತ್ತಿ ತಾಲ್ಲೂಕಿನ ನವಿಲುತೀರ್ಥದ ರೇಣುಕಾಸಾಗರ ಜಲಾಶಯದಲ್ಲಿ ಬುಧವಾರ 2,053.50 ಅಡಿ ನೀರು ಸಂಗ್ರಹವಿತ್ತು. ಗುರುವಾರ ಅದು 2,054.50 ಅಡಿಗೆ ಮುಟ್ಟಿದ್ದು, ಒಂದು ಅಡಿ ನೀರು ಏರಿಕೆಯಾಗಿದೆ. ಒಳಹರಿವಿನ ಪ್ರಮಾಣವೂ 1,664 ಕ್ಯುಸೆಕ್‌ನಿಂದ 7,729 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಚಿಕ್ಕೋಡಿ ತಾಲ್ಲೂಕಿನ ದೂಧಗಂಗಾ ನದಿಯ ಎರಡು ಕಿರುಸೇತುವೆಗಳು ಮುಳುಗಡೆಯಾಗಿವೆ. ಖಾನಾಪುರ ಪಟ್ಟಣದಲ್ಲಿ ಗುರುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 8.24 ಸೆ.ಮೀ ಮಳೆಯಾಗಿದೆ.

ಮನೆ ಹಾನಿಗೆ ₹ 5 ಲಕ್ಷ ಪರಿಹಾರ: ಅಶೋಕ

ಮಂಗಳೂರು: ‘ಮಳೆಯಿಂದ ಪೂರ್ತಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ₹ 5 ಲಕ್ಷ ಪರಿಹಾರ ನೀಡಲಾಗುವುದು. ಈ ಸಂಬಂಧ ಗುರುವಾರ ಮುಖ್ಯಮಂತ್ರಿ ಜತೆ ಚರ್ಚಿಸಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಉಳ್ಳಾಲ ತಾಲ್ಲೂಕಿನ ಬಟ್ಟಪ್ಪಾಡಿ ಕಡಲ್ಕೊರೆತ ಪ್ರದೇಶಕ್ಕೆ ಭೇಟಿ ನೀಡಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೆಂಗಳೂರಿಗೆ ಹೋದ ಕೂಡಲೇ ಶೇ 50ರಷ್ಟು ಪರಿಹಾರ ಮೊತ್ತ ಬಿಡುಗಡೆಗೆ ಆದೇಶ ನೀಡುತ್ತೇನೆ. ಕಡಿಮೆ ಪ್ರಮಾಣದ ಹಾನಿ ಆಗಿರುವವರಿಗೆ ಹಾನಿಯ ಪ್ರಮಾಣದ ಆಧಾರದಲ್ಲಿ ₹50 ಸಾವಿರ ಹಾಗೂ ₹10 ಸಾವಿರ ನೀಡಲು ಅವಕಾಶವಿದೆ. ಈ ಮೊತ್ತವನ್ನು ಒಂದೇ ಕಂತಿನಲ್ಲಿ ಕೊಡಲಾಗುವುದು. ಮನೆಗೆ ನೀರು ನುಗ್ಗಿ ಹಾನಿಯಾದರೆ ₹ 10 ಸಾವಿರ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ. ರಾಜ್ಯದ ಏಳು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿದ್ದು, ಮನೆ, ಕೃಷಿ, ಜಾನುವಾರು ಹಾನಿಯಾದರೆ ವಿಳಂಬ ಇಲ್ಲದೆ ಪರಿಹಾರ ನೀಡುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

ಬಂಟ್ವಾಳ ತಾಲ್ಲೂಕು ಪಂಜಿಕಲ್ಲಿನಲ್ಲಿ ಭೂ ಕುಸಿತದಿಂದ ಮೃತಪಟ್ಟಿರುವ ಮೂವರು ಕಾರ್ಮಿಕರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ನೀಡಲಾಗುವುದು. ಕೇರಳದಿಂದ ಬಂದಿರುವ ಈ ಕಾರ್ಮಿಕರ ಮೃತದೇಹವನ್ನು ಅವರ ತವರಿಗೆ ಕಳುಹಿಸಲು ಮುತುವರ್ಜಿ ವಹಿಸಲಾಗುವುದು ಎಂದು ತಿಳಿಸಿದರು.

ಲಿಂಗನಮಕ್ಕಿ: ಸೊರಗಿದ ಜಲಾಶಯದ ಒಡಲು

ಪ್ರಜಾವಾಣಿ ವಾರ್ತೆ

ಕಾರ್ಗಲ್: ಕಳೆದ ವರ್ಷದ ಇದೇ ದಿನಕ್ಕೆ ಹೋಲಿಸಿದರೆ ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟವು ಸುಮಾರು 15 ಅಡಿ ಕಡಿಮೆ ಇದ್ದು, ಮುಂಬರುವ ದಿನಗಳಲ್ಲಿ ಜಲ ವಿದ್ಯುತ್ ಉತ್ಪಾದನೆಗೆ ತೊಂದರೆಯಾಗಬಹುದು ಎಂದು ಆತಂಕ ಮೂಡಿದೆ.

156 ಟಿಎಂಸಿ ಅಡಿ ನೀರಿನ ಗರಿಷ್ಠ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಸದ್ಯ 38.36 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಾಗಿದೆ. ಇದು ಜಲಾಶಯದ ಗರಿಷ್ಠ ಸಂಗ್ರಹಣಾ ಸಾಮರ್ಥ್ಯದ ಕಾಲುಭಾಗದಷ್ಟೇ ಆಗಿದ್ದು, ಗಣನೀಯ ಪ್ರಮಾಣದಲ್ಲಿ ನೀರಿನ ಕೊರತೆ ಎದುರಾಗಿದೆ. ಈ ಸಾಲಿನ ಬೇಸಿಗೆಯಲ್ಲಿ ಭಾರಿ ಪ್ರಮಾಣದ ನೀರು ಬಳಕೆಯಾಗಿದ್ದು, ಜಲಾಶಯದ ಒಡಲು ಸೊರಗಲು ಪ್ರಮುಖ ಕಾರಣವಾಗಿದೆ.

ಈಗಷ್ಟೇ ಮುಂಗಾರು ಚುರುಕುಗೊಂಡಿದ್ದು, ಒಳಹರಿವಿನ ಪ್ರಮಾಣ 57,638 ಕ್ಯುಸೆಕ್‌ಗೆ ಏರಿಕೆಯಾಗಿರುವುದು ಆಶಾದಾಯಕವಾಗಿದೆ.

ಶರಾವತಿ ಕೊಳ್ಳದಲ್ಲಿ ಅಧಿಕ ಮಳೆ ಸುರಿಯುತ್ತಿರುವ ಕಾರಣ ವಿದ್ಯುತ್ ಉತ್ಪಾದನೆಗೆ ಜಲಾಶಯದಿಂದ ಬಳಸುವ ಹೊರಹರಿವಿನ ಪ್ರಮಾಣವನ್ನು ಗರಿಷ್ಠ ಮಟ್ಟದಲ್ಲಿ ನಿಲ್ಲಿಸಲಾಗಿದ್ದು, ಕೇವಲ 2,448 ಕ್ಯುಸೆಕ್ ನೀರು ಹರಿಸಲಾಗುತ್ತಿದೆ.

ಪ್ರಮುಖವಾದ 5 ಜಲವಿದ್ಯುದಾಗರಗಳಾದ ಲಿಂಗನಮಕ್ಕಿ, ಮಹಾತ್ಮ ಗಾಂಧಿ, ಶರಾವತಿ, ಗೇರುಸೊಪ್ಪ ಮತ್ತು ಅಂಬುತೀರ್ಥ ಕಿರು ಜಲವಿದ್ಯುದಾಗಾರಗಳಲ್ಲಿ ವಿದ್ಯುತ್ ಉತ್ಪಾದನೆಗೆ ಲಿಂಗನಮಕ್ಕಿ ಜಲಾಶಯದ ನೀರು ಬಳಕೆಯಾಗುತ್ತದೆ.



ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದಿರುವುದು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	118.10	36,608	3,712
ಹಾರಂಗಿ	2,859	2,853.46	10,015	15,560
ಕಬಿನಿ	2,284	2,278.5	17,500	4,000
ಹೇಮಾವತಿ	2,922	2,913.60	16,660	250
ಲಿಂಗನಮಕ್ಕಿ	1,819	1,769.05	57,638	-
ಸೂಪಾ (ಮೀ)	564	525.05	30,755	-
ಮಾಣಿ	595	575.32	9,902	-
ತುಂಗಭದ್ರಾ	1,633	1,618.87	60,941	248
ಮಲಪ್ರಭಾ	2,079.50	2,054.50	7,729	194
ಘಟಪ್ರಭಾ	2,175	2,093.66	10,675	1,097
ಭದ್ರಾ	186	163.9	31,667	139
ಆಲಮಟ್ಟಿ (ಮೀ)	519.60	514.34	43,066	451
ನಾರಾಯಣಪುರ (ಮೀ)	492.25	491.02	263.11	114.1

* ನೆಲಮಟ್ಟದಿಂದ

ಕರಾವಳಿಯಲ್ಲಿ ಕಡಲ್ಕೊರೆತ ಹೆಚ್ಚಳ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆ ಮುಂದುವರೆದಿದೆ. ಕಡಲ್ಕೊರೆತ ಹೆಚ್ಚಳವಾಗಿದ್ದು, ಬೈಂದೂರು ತಾಲ್ಲೂಕಿನ ಮರವಂತೆಯಲ್ಲಿ ಸ್ಥಳೀಯರೇ ಕಡಲ್ಕೊರೆತ ತಡೆಗೆ ಮರಳಿನ ಚೀಲಗಳನ್ನು ಹಾಕಿದ್ದಾರೆ.

ಮಂಗಳೂರು ತಾಲ್ಲೂಕಿನ ಅದ್ಯಪಾಡಿ–ಕೆಂಜಾರು ರಸ್ತೆ ಕುಸಿದು ಸಂಚಾರ ಕಡಿತಗೊಂಡಿದೆ. ಬೆಳ್ತಂಗಡಿಯ ವೇಣೂರು ಸುದೆರ್ದುವಿನಲ್ಲಿ ಹಟ್ಟಿಯ ಛಾವಣಿ ಬಿದ್ದು ದನವೊಂದು ಸತ್ತಿದೆ. ಕಾಸರಗೋಡಿನ ಅಗ್ನಿಶಾಮಕದಳ ಕಚೇರಿ ಮೇಲೆ ಮರ ಬಿದ್ದು 3 ವಾಹನ ಜಖಂಗೊಂಡಿವೆ.

ಸುಬ್ರಹ್ಮಣ್ಯ ಬಳಿ ಬಂಡೆಯೊಂದು ಉರುಳಿ ಹಳಿ ಮೇಲೆ ಬಿದ್ದಿತ್ತು. ಇದರಿಂದ ಕೆಲ ಗಂಟೆ ರೈಲು ಸಂಚಾರ ಸ್ಥಗಿತಗೊಂಡಿತ್ತು.

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗ ಳೂರು, ಮೂಡಿಗೆರೆ, ಕೊಪ್ಪ, ಎನ್.ಆರ್.ಪುರ, ಕಳಸ, ಶೃಂಗೇರಿ ಭಾಗದಲ್ಲಿ ಮಳೆಯಾಗಿದೆ. ಉಡುಪಿ ಜಿಲ್ಲೆಯಾದ್ಯಂತ ಸುರಿಯುತ್ತಿರುವ ಭಾರಿ ಮಳೆಗೆ ಬೈಂದೂರು ತಾಲ್ಲೂಕಿನಲ್ಲಿ ನೆರೆ ಬಂದಿದೆ. ಸೌಪರ್ಣಿಕ ನದಿ ತುಂಬಿ ಹರಿದು ನಾವುಂದ ಗ್ರಾಮ ಮುಳುಗಡೆಯಾಗಿದೆ.

ಜನ ಹಾಗೂ ಜಾನುವಾರು ಸಂಕಷ್ಟಕ್ಕೆ ಸಿಲುಕಿದ್ದು, ಜಿಲ್ಲಾಡಳಿತ ಬೋಟ್ ಹಾಗೂ ದೋಣಿಗಳನ್ನು ಬಳಸಿಕೊಂಡು ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುತ್ತಿದೆ. ಬಂಟ್ವಾಡಿಯಲ್ಲಿ ಸೇತುವೆ ಹಾಗೂ ಕಿಂಡಿ ಅಣೆಕಟ್ಟು ಕಾಮಗಾರಿ ನಡೆಯುತ್ತಿರುವುದರಿಂದ ನೆರೆ ನೀರು ಹರಿದುಹೋಗಲು ಅಡ್ಡಿಯಾಗಿದ್ದು ನೆರೆಯ ಪ್ರಮಾಣ ಹೆಚ್ಚಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಎಡಬಿಡದೆ ಸುರಿಯುತ್ತಿರುವ ಮಳೆಯಿಂದ ಸಾಲ್ಬುಡ, ಕುದ್ರು ಗ್ರಾಮಗಳಿಗೆ ನೀರು ನುಗ್ಗಿದ್ದು, ಭತ್ತದ ಕೃಷಿಗೆ ಹಾನಿಯಾಗಿದೆ. ಸ್ಥಳೀಯರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಣಾ ಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಶಿವಮೊಗ್ಗ: ಜಿಲ್ಲೆಯಾದ್ಯಂತ ಗುರುವಾರವೂ ಮಳೆ ಮುಂದುವರಿದಿದ್ದು, ತುಂಗಾ, ಭದ್ರಾ, ಶರಾವತಿ ನದಿಗಳು, ತೊರೆ, ಹಳ್ಳ, ಕೊಳ್ಳಗಳು ಉಕ್ಕಿ ಹರಿಯುತ್ತಿವೆ. ದಾವಣಗೆರೆ ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ಮಳೆ ವಿವರ

ಸ್ಥಳ	ಸೆಂಟಿಮೀಟರ್
ಹೊಸನಗರ	31.52
ಹುಲಿಕಲ್	25.4
ಭಟ್ಕಳ	16.6
ಕೊಡಸಳ್ಳಿ	14.6
ಯಲ್ಲಾಪುರ	12.4
ಹೊನ್ನಾವರ,ಕುಮಟಾ	11.6
ಗೇರುಸೊಪ್ಪ	11.4
ಹುಂಚ	10.46
ಸಿದ್ದಾಪುರ	10.4

ವಿವರಣೆ ಕೇಳಿದ ಹೈಕೋರ್ಟ್

ಒಂದನೇ ಪುಟದಿಂದ

‘ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ (2013ರ ಏಪ್ರಿಲ್ 5) ಆಗಿನ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಿದ್ದ, ಈಗಿನ ಎಸಿಬಿಯ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಮನೆ ಮೇಲೆ ಸಿಬಿಐ ದಾಳಿ ನಡೆಸಿತ್ತು. ಅಧೀನ ಅಧಿಕಾರಿಗಳ ಮೂಲಕ ಗಣಿ ಕಂಪನಿ ಮಾಲೀಕರಿಂದ ಸಿಂಗ್ ಮಾಮೂಲು ವಸೂಲಿ ಮಾಡಿಸುತ್ತಿದ್ದರು. ಸ್ವಸ್ತಿಕ್ ನಾಗರಾಜ್ ಅವರಿಂದ ₹ 3 ಲಕ್ಷ ಪಡೆದಿದ್ದರು ಎಂಬ ಆರೋಪವಿದೆ. ಈ ಪ್ರಕರಣ ಇನ್ನೂ ವಿಚಾರಣಾ ಹಂತದಲ್ಲಿದೆ. ಸೀಮಂತ್ ಕುಮಾರ್ ಸಿಂಗ್ ವಿರುದ್ಧ ಸಿಬಿಐ ಯಾವುದೇ ಕ್ರಮವನ್ನೂ ಸೂಚಿಸಿಲ್ಲ. ಈ ಕುರಿತ ತನಿಖಾ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿ’ ಎಂದು ಸಿಬಿಐ ವಕೀಲ ಪಿ.ಪ್ರಸನ್ನ ಕುಮಾರ್ ಅವರಿಗೆ ನಿರ್ದೇಶಿಸಿತು.

ಜಟಾಪಟಿ: ‘ಈ ಪ್ರಕರಣದಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಜಿಲ್ಲಾಧಿಕಾರಿಯ ಆಪ್ತ ಸಹಾಯಕನಾಗಿರಲು ಅವಕಾಶ ಕೊಟ್ಟಿದ್ದು ಯಾರು?, ಆತನಿಗೆ ಕರ್ತವ್ಯ ನಿರ್ವಹಿಸಲು ಆದೇಶ ಎಲ್ಲಿದೆ?, ಈ ಕುರಿತ ಮಾಹಿತಿಗಳನ್ನೂ ಮುಚ್ಚಿಡುತ್ತಿದ್ದೀರಿ, ಸಂಸ್ಥೆಯ ರಕ್ಷಣೆ ಮಾಡುವುದನ್ನು ಬಿಟ್ಟು ಆರೋಪಿಯನ್ನು ರಕ್ಷಿಸುತ್ತಿದ್ದೀರಿ’ ಎಂದು ಎಸಿಬಿ ವಿರುದ್ಧ ಸಂದೇಶ್ ಮತ್ತೊಮ್ಮೆ ಹರಿಹಾಯ್ದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಮನಮೋಹನ್, ‘ತಾವು ಅರ್ಜಿ ವಿಚಾರಣೆ ವ್ಯಾಪ್ತಿಯಿಂದ ಆಚೆಗೆ ಹೋಗುತ್ತಿದ್ದೀರಿ. ಅರ್ಜಿದಾರರು, ಪ್ರತಿವಾದಿಗಳನ್ನು ಹೊರತುಪಡಿಸಿದ ಪ್ರಕರಣಕ್ಕೆ ಸಂಬಂಧವಿಲ್ಲದ ಅಧಿಕಾರಿಗಳ ವಿವರ ಮತ್ತು ದಾಖಲೆಗಳನ್ನು ಕಾನೂನು ಪ್ರಕಾರವೇ ಕೋರ್ಟ್ ತರಿಸಿಕೊಳ್ಳಬೇಕಾಗುತ್ತದೆ’ ಎಂದು ಸುಪ್ರೀಂ ಕೋರ್ಟ್‌ನ ಪೂರ್ವ ನಿದರ್ಶನಗಳನ್ನು ಮಂಡಿಸಿದರು.

ಈ ಮಾತಿಗೆ ಕೆರಳಿದ ನ್ಯಾ. ಸಂದೇಶ್, ‘ಎಡಿಜಿಪಿ ಬಗ್ಗೆ ಅನುಮಾನ ಬರಲು ಕಾರಣಗಳಿವೆ. ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗಿದ್ದಾರೆ. ಎಸಿಬಿ ಸಂಸ್ಥೆಯ ಹಿತ ಕಾಪಾಡುವ ಉತ್ಸಾಹ ಅವರಲ್ಲಿ ಕಾಣುತ್ತಿಲ್ಲ. ಬೇಕಾದರೆ ಅವರು ತಮ್ಮ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಲಿ. ಎಡಿಜಿಪಿ ಬಗ್ಗೆ ನನಗೆ ವೈಯುಕ್ತಿಕ ದ್ವೇಷವಿಲ್ಲ. ಇದರಿಂದ ನನಗೆ ಆಗಬೇಕಾದ್ದು ಏನೂ ಇಲ್ಲ. ಸಾರ್ವಜನಿಕರ ಹಿತರಕ್ಷಣೆಗಾಗಿ ಈ ರೀತಿಯ ನಿರ್ದೇಶನ ನೀಡುತ್ತಿದ್ದೇನೆ. ನೀವು ಎಡಿಜಿಪಿ ಪರ ವಹಿಸಿಕೊಂಡು ಮಾತನಾಡುವುದು ಸರಿಯಲ್ಲ’ ಎಂದು ಗುಡುಗಿದರು.

ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿದರು.

ನ್ಯಾ.ಸಂದೇಶ್ ಕ್ರಮ ಪ್ರಶ್ನಿಸಿದ ಎಡಿಜಿಪಿ

ಒಂದನೇ ಪುಟದಿಂದ

‘ಕಳೆದ ತಿಂಗಳ 29 ಮತ್ತು ಇದೇ 4ರಂದು ನನ್ನ ವಿರುದ್ಧ ತೆರೆದ ನ್ಯಾಯಾಲಯದಲ್ಲಿ ಸಂದೇಶ್ ಅವರು ಟೀಕೆ ಮಾಡಿದ್ದಾರೆ. ಹೀಗಾಗಿ ಅವರು, ನನ್ನ ವಿರುದ್ಧ ಮೌಖಿಕವಾಗಿ ಟೀಕೆ ಮಾಡದಂತೆ ನಿರ್ಬಂಧ ಹೇರಬೇಕು’ ಎಂದೂ ಅರ್ಜಿಯಲ್ಲಿ ಕೋರಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಲಂಚ ಪ್ರಕರಣದಲ್ಲಿ ಆರೋಪಿಯೊಬ್ಬರು ಹೈಕೋರ್ಟ್‌ಗೆ ಜಾಮೀನು ಸಲ್ಲಿಸಿದ್ದಾರೆ. ಅದರಲ್ಲಿ ನಾನಾಗಲಿ ಅಥವಾ ಡಿಪಿಎಆರ್ ಕಾರ್ಯದರ್ಶಿಯಾಗಲಿ ಪ್ರತಿವಾದಿಯಾಗಿಲ್ಲ. ನ್ಯಾಯಮೂರ್ತಿಗಳು ಅದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಂತೆ ಪರಿಗಣಿಸಿ ವಿಚಾರಣೆ ನಡೆಸುತ್ತಿದ್ದಾರೆ. ನನ್ನ ಮತ್ತು ನನ್ನ ನೇತೃತ್ವದ ಎಸಿಬಿಯ ಪ್ರಾಮಾಣಿಕತೆ, ಬದ್ಧತೆ ಬಗ್ಗೆ ಅನಗತ್ಯ ಟೀಕೆ ಮಾಡಿದ್ದಾರೆ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಅನರ್ಹರಿಗೆ ₹79 ಕೋಟಿ ಪರಿಹಾರ

ಒಂದನೇ ಪುಟದಿಂದ

ಭೂಸ್ವಾಧೀನದ ಮಾಹಿತಿ ಇದ್ದರೂ ಪರಿಹಾರ ವಿತರಣೆ:

ಈ ಜಮೀನಿನ ಮೂಲ ಖಾತೆದಾರರು ತ್ರಿಪುರ ಭೈರವಿ ಮಠದ ಮಹಾಂತ ಪಿ.ಕೃಷ್ಣಾನಂದ ಗಿರಿ ಗೋಸ್ವಾಮಿ. ಅವರು ಅವಿವಾಹಿತರು. ನಂಜನಗೂಡು ತಾಲ್ಲೂಕಿನಲ್ಲಿ 891 ಎಕರೆ ಜಾಗ ಹೊಂದಿರುವುದಾಗಿ ಅವರು ಘೋಷಿಸಿಕೊಂಡಿದ್ದರು. ಅವರ ನಿಧನದ ಬಳಿಕ ಸಹೋದರ ಭೀಷ್ಮ ಪಿತಾಮಹ ಹಾಗೂ ಮಠದ ಮಹಾಂತ ಕೃಷ್ಣ ಮೋಹನಾನಂದ ಗಿರಿ ಗೋಸ್ವಾಮಿ ನಡುವೆ ಉತ್ತರದಾಯಿತ್ವದ ಜಗಳ ಆರಂಭವಾಯಿತು. ಈ ಹಿಡುವಳಿಗಳು ಪಿತ್ರಾರ್ಜಿತ ಎಂದು ಸಹೋದರ ವಾದಿಸಿದರೆ, ಇದು ಮಠಕ್ಕೆ ಸೇರಿದ್ದು ಎಂದು ಮಹಾಂತರು ವಾದಿಸಿದರು. ಭೂನ್ಯಾಯ ಮಂಡಳಿಯು ಭೀಷ್ಮ ಪಿತಾಮಹ ಕುಟುಂಬಕ್ಕೆ 90 ಯುನಿಟ್ ಜಮೀನು ಹಂಚಿಕೆ ಮಾಡಿತು.

ಈ ಪ್ರಕರಣದಲ್ಲಿ ಒಂಬತ್ತು ಮಂದಿಗೆ ತಲಾ 10 ಯುನಿಟ್ ಜಮೀನು ಹಂಚಿಕೆ ಮಾಡಿ ಅಕ್ರಮ ಎಸಗಲಾಗಿದೆ. ಜತೆಗೆ, ಈ ಪ್ರಕರಣದಲ್ಲಿ ಮೃತಪಟ್ಟವರಿಗೂ ಪರಿಹಾರ ನೀಡಲಾಗಿದೆ. ಭೂ ಸು ಧಾ ರ ಣಾ ಕಾ ಯ್ದೆ ಯ ಪ್ರಕಾರ, ಭೂನ್ಯಾಯ ಮಂಡಳಿಯು ಕುಟುಂಬದ ಐವರು ಸದಸ್ಯರಿಗೆ ಗರಿಷ್ಠ 20 ಯುನಿಟ್ ಜಮೀನು ಹಂಚಿಕೆ ಮಾಡಬಹುದು. ಆದರೆ, ಈ ಪ್ರಕರಣದಲ್ಲಿ 90 ಯುನಿಟ್ ಹಂಚಿಕೆ ಮಾಡಲಾಗಿದೆ. ಇಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 2(12) ಬದಲು ಹಿಂದೂ ಅವಿಭಕ್ತ ಕುಟುಂಬ ಕಾಯ್ದೆ 2005 ರ ಪ್ರಕಾರ ಕುಟುಂಬದ ವ್ಯಾಖ್ಯಾನ ಮಾಡಿ ಭೂಮಿತಿಯನ್ನು ನಿಷ್ಕರ್ಷೆ ಮಾಡಿ ಹಂಚಿಕೆ ಮಾಡಲಾಗಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಹಂಚಿಕೆಯಾದ ಜಮೀನುಗಳು ಕೆಐಎಡಿಬಿಗೆ ಭೂಸ್ವಾಧೀನ ಆಗಿರುವ ವಿಚಾರ ಭೂನ್ಯಾಯ ಮಂಡಳಿ ಅಧ್ಯಕ್ಷರಿಗೆ ತಿಳಿದಿತ್ತು. ಆದರೂ, ತರಾತುರಿಯಲ್ಲಿ ಹಂಚಿಕೆದಾರರ ಹೆಸರಿಗೆ ಆದೇಶವನ್ನು ಹೊರಡಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ. ಕೆಎಎಸ್ ಅಧಿಕಾರಿಗಳ ಜತೆಗೆ, ಹಿಂದಿನ ಶಿರಸ್ತೇದಾರ ಟಿ.ರಮೇಶ್ ಬಾಬು, ಹಿಂದಿನ ರಾಜಸ್ವ ನಿರೀಕ್ಷಕ ಬಿ.ಎಲ್. ಶಿವರಾಜ್, ಹಿಂದಿನ ಗ್ರಾಮ ಲೆಕ್ಕಿಗ ಎಸ್.ವೆಂಕಟೇಶ ಭಾಗಿಯಾಗಿದ್ದು, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ ಎಂದು ಮೈಸೂರು ಜಿಲ್ಲಾಧಿಕಾರಿ ಅವರು ರಾಜ್ಯ ಸರ್ಕಾರಕ್ಕೆ ಅವರಿಗೆ 2022ರ ಜೂನ್ 24ರಂದು ವರದಿ ಸಲ್ಲಿಸಿದ್ದಾರೆ.

ಸ್ನೇಕ್ ಶ್ಯಾಮ್, ಸೂರ್ಯಕೀರ್ತಿ ಸಾಥ್: ನಗರದ ಸುತ್ತಮುತ್ತ ಚಿತ್ರೀಕರಣ

ಮೈಸೂರಿನಲ್ಲಿ ‘ಸ್ನೇಕ್ ಸಿಟಿ’ ಖ್ಯಾತಿಯ ಸೈಮನ್

• ಮೋಹನ್ ಕುಮಾರ ಸಿ.

ಮೈಸೂರು: ‘ನ್ಯಾಟ್ ಜಿಯೊ’ ಚಾನೆಲ್‌ನ ಜನಪ್ರಿಯ ಕಾರ್ಯಕ್ರಮ ‘ಸ್ನೇಕ್ ಸಿಟಿ’ ಖ್ಯಾತಿಯ ಸೈಮನ್ ಕೀಸ್, ಸೂಝಿ ಗಿಲೆಟ್ ಮೈಸೂರಿನಲ್ಲಿ ಬೀಡು ಬಿಟ್ಟು, ಕಳೆದ ಎರಡು ತಿಂಗಳಿಂದ ಚಿತ್ರೀಕರಣ ನಡೆಸಿದ್ದಾರೆ.

ದಕ್ಷಿಣ ಆಫ್ರಿಕಾ, ಅಮೆರಿಕ, ಯುರೋಪ್‌ನ ನಗರಗಳ ಹಾವುಗಳನ್ನು ರಕ್ಷಿಸಿ ಸುರಕ್ಷಿತ ಪ್ರದೇಶಗಳಿಗೆ ಬಿಡುವ, ಹಾವುಗಳ ಬಗ್ಗೆ ಅರಿವು ಮೂಡಿಸುತ್ತಿರುವ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವ ಕೀಸ್–ಗಿಲೆಟ್ ಜೋಡಿ ಜನಪ್ರಿಯತೆಯನ್ನು ಪಡೆದಿದ್ದು, ಏಷ್ಯಾದ ಮೊದಲ ನಗರವಾಗಿ ಮೈಸೂರನ್ನು ಆಯ್ಕೆ ಮಾಡಿಕೊಂಡಿದೆ.

ಅವರೊಂದಿಗೆ ಮೈಸೂರಿನ ಉರಗ ಸಂರಕ್ಷಕ ಸ್ನೇಕ್ ಶ್ಯಾಮ್, ಸ್ನೇಕ್ ಸೂರ್ಯಕೀರ್ತಿ ತೆರೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮೈಸೂರು ಸುತ್ತಮುತ್ತ 100ಕ್ಕೂ ಹೆಚ್ಚು ಹಾವುಗಳನ್ನು ಅವರು ಸಂರಕ್ಷಿಸಿದ್ದಾರೆ.


‘9ನೇ ಸೀಸನ್‌ನಲ್ಲಿ ಮೈಸೂರು ಸುತ್ತಮುತ್ತ ಸಂರಕ್ಷಿಸಿದ ಹಾವುಗಳ ಚಿತ್ರೀಕರಣ ನಡೆದಿದೆ. ಕೈಗಾರಿಕೆಗಳು, ಮಳಿಗೆಗಳು ಹಾಗೂ ಮನೆಗಳೊಳಗೆ ಕಾಣಿಸಿಕೊಂಡ ಹಾವುಗಳನ್ನು ಕೀಸ್–ಗಿಲೆಟ್ ಜೋಡಿ ರಕ್ಷಿಸಿ ಸುರಕ್ಷಿತ ಜಾಗಗಳಿಗೆ ಬಿಡುವುದನ್ನು ಚಿತ್ರೀಕರಿಸಿದ್ದು, ಆಫ್ರಿಕಾ– ಭಾರತದ ಹಾವುಗಳ ಸಾಮ್ಯತೆ ಹಾಗೂ ವ್ಯತ್ಯಾಸಗಳ ಬಗ್ಗೆ ಸರಣಿಯಲ್ಲಿ ಮಾತನಾಡಿದ್ದಾರೆ’ ಎಂದು ನಿರ್ದೇಶಕ ಬೆನ್ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪೂರ್ವ, ಪಶ್ಚಿಮ ಘಟ್ಟಗಳು ಹಾಗೂ ಬಯಲು ಪ್ರದೇಶ ಸಂಧಿಸುವ ಸ್ಥಳದಲ್ಲಿರುವ ಮೈಸೂರು ಜಿಲ್ಲೆಯಲ್ಲಿ ವೈವಿಧ್ಯಮಯ ಹಾವುಗಳಿವೆ. ನಾಗರ ಹಾವು, ಮಂಡಲ, ಕೊಳಕು ಮಂಡಲ, ಕೇರೆ, ಹಸಿರು, ಕಟ್ಟು ಹಾವು ಸೇರಿದಂತೆ ಹಲವು ಹಾವುಗಳ ವರ್ತನೆ, ಜೀವನ ಕ್ರಮಗಳನ್ನು ಅಧ್ಯಯನ ನಡೆದಿದೆ. ಎರಡು ದಶಕದಲ್ಲಿ ಹಾವುಗಳ ಜೊತೆಗಿನ ಒಡನಾಟ ತೆರೆಯಲ್ಲಿ ಹಂಚಿಕೊಂಡಿದ್ದೇನೆ’ ಎಂದು ಸೈಮನ್ ಹೇಳಿದರು.

‘ಭಾರತದಲ್ಲಿ ಹಾವುಗಳ ಬಗ್ಗೆ ಇರುವ ಪೂಜನೀಯ ಸ್ಥಾನದ ಬಗ್ಗೆ ಹೆಮ್ಮೆಯಿದೆ. ಆದರೆ, 12 ವರ್ಷ ದ್ವೇಷ ಸಾಧಿಸುತ್ತದೆ ಎಂಬೆಲ್ಲ ಮೂಢನಂಬಿಕೆಗಳೂ ಇಲ್ಲಿವೆ. ವೈಜ್ಞಾನಿಕ ಶಿಕ್ಷಣವನ್ನು ನೀಡುವುದೇ ಕಾರ್ಯಕ್ರಮದ ವಿಶೇಷ. ಆಗುಂಬೆ ಕಾಡಿನಲ್ಲಿ ಕಾಳಿಂಗ ಸರ್ಪದ ಬಗ್ಗೆಯೂ ಚಿತ್ರೀಕರಣ ನಡೆಸಲಾಗುವುದು. ಆಫ್ರಿಕಾದ ಬ್ಲ್ಯಾಕ್ ಮಾಂಬಾ ಹಾಗೂ ಭಾರತದ ಕಾಳಿಂಗ ಅತಿ ವಿಷಪೂರಿತ. ಕಾಳಿಂಗ ಸರ್ಪ ಸುಂದರವಾಗಿದ್ದರೂ ಅತಿ ಭಯಾನಕ’ ಎಂದರು.

ಸೂಝಿ ಗಿಲೆಟ್ ಮಾತನಾಡಿ, ‘ಹಾವಿನ ವಿಷವನ್ನು ಕ್ಯಾನ್ಸರ್, ಪಾರ್ಕಿನ್‌ಸನ್ಸ್, ಹೃದಯ ಸಂಬಂಧಿ ರೋಗಗಳ ಔಷಧಕ್ಕೆ ಬಳಸಲಾಗುತ್ತದೆ. ಅವುಗಳ ಸಂರಕ್ಷಣೆಯಲ್ಲೇ ಮಾನವ ಸಂಕುಲದ ಉಳಿವೂ ಇದೆ. ಮಾನವ–ವನ್ಯಜೀವಿಗಳ ಸಂಘರ್ಷವನ್ನು ತಡೆಗಟ್ಟುವುದಕ್ಕಾಗಿ ಸ್ನೇಕ್ ಸಿಟಿ ಕಾರ್ಯಕ್ರಮ ನೀಡುತ್ತಿದ್ದೇವೆ’ ಎಂದರು.

ಜುಲೈ 18ರಿಂದ ಪ್ರಸಾರ: ದಕ್ಷಿಣ ಆಫ್ರಿಕಾದ ಹಾವುಗಳ ಕುರಿತು ‘ಸ್ನೇಕ್ ಸಿಟಿ’ ಸೀಸನ್ 8ರ ಆವೃತ್ತಿ ಜುಲೈ 18ರಿಂದ ನಿತ್ಯ ರಾತ್ರಿ 9ರಿಂದ 6 ಕಂತುಗಳಲ್ಲಿ ಪ್ರಸಾರವಾಗಲಿದೆ. ಇದಾದ ಬಳಿಕ ಮೈಸೂರಿನ ಹಾವುಗಳ ಕುರಿತ ಆವೃತ್ತಿ ಪ್ರಸಾರವಾಗಲಿದೆ.



ಮೈಸೂರಿನ ಮನೆಯೊಂದರಲ್ಲಿ ಸಂರಕ್ಷಿಸಿದ ಕೇರೆ ಹಾವಿನೊಂದಿಗೆ ಸೈಮನ್ ಕೀಸ್ ಮತ್ತು ಸೂಝಿ ಗಿಲೆಟ್

ಮುಖ್ಯಾಂಶಗಳು

- ಏಷ್ಯಾದ ಮೊದಲ ನಗರವಾಗಿ ಮೈಸೂರು ಆಯ್ಕೆ
- ‘ಸ್ನೇಕ್ ಸಿಟಿ’ ಸೀಸನ್ 9ರ ಆವೃತ್ತಿಗೆ ಚಿತ್ರೀಕರಣ

ಟಾಟಾ ಪ್ರಾಜೆಕ್ಟ್ಸ್ ಕಂಪನಿಗೆ ನೆರವು

ಲಂಚ: ಸಿಬಿಐನಿಂದ 6 ಅಧಿಕಾರಿಗಳ ಬಂಧನ

ನವದೆಹಲಿ (ಪಿಟಿಐ): ಟಾಟಾ ಪ್ರಾಜೆಕ್ಟ್ ಕಂಪನಿಗೆ ನೆರವಾಗುವ ಸಲುವಾಗಿ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಎಸ್. ಝಾ ಹಾಗೂ ಟಾಟಾ ಪ್ರಾಜೆಕ್ಟ್‌ನ ಐವರು ಅಧಿಕಾರಿಗಳನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಟಾಟಾ ಪ್ರಾಜೆಕ್ಟ್ಸ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷ ದೇಶರಾಜ್ ಪಾಠಕ್, ಸಹಾಯಕ ಉಪಾಧ್ಯಕ್ಷ ಆರ್. ಎನ್.ಸಿಂಗ್ ಬಂಧಿತ ಪ್ರಮುಖ ಅಧಿಕಾರಿಗಳಾಗಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಅಧಿಕಾರಿಗಳು 11 ಸ್ಥಳಗಳಲ್ಲಿ ಬುಧವಾರ ಶೋಧ ಕೈಗೊಂಡಿದ್ದರು. ಗುರುವಾರವೂ ಶೋಧ ನಡೆದಿದ್ದು, ಗುರುಗ್ರಾಮದಲ್ಲಿನ ಸ್ಥಳವೊಂದರಲ್ಲಿ ₹ 93 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ಝಾ ಅವರು ಸದ್ಯ ಇಟಾನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಟಾಟಾ ಪ್ರಾಜೆಕ್ಟ್ ಹಾಗೂ ಇತರ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಲಂಚ ತೆಗೆದುಕೊಂಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಝಾ ಅವರ ಮೇಲೆ ಸಿಬಿಐ ಕಣ್ಣಿರಿಸಿತ್ತು.

ದೇಶದ ಈಶಾನ್ಯ ರಾಜ್ಯಗಳಲ್ಲಿ ವಿದ್ಯುತ್ ಮೂಲಸೌಕರ್ಯಗಳನ್ನು ಸುಧಾರಿಸಲು ವಿಶ್ವಬ್ಯಾಂಕ್ ನೆರವಿನಲ್ಲಿ ಈಶಾನ್ಯ ಪ್ರದೇಶ ವಿದ್ಯುತ್ ವ್ಯವಸ್ಥೆ ಸುಧಾರಣಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮದಡಿ, ಟಾಟಾ ಪ್ರಾಜೆಕ್ಟ್ಸ್‌ಗೆ ಸಿಕ್ಕಿಂ ಹಾಗೂ ಅರುಣಾಚಲ ಪ್ರದೇಶದಲ್ಲಿನ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ.

ಸಂವಿಧಾನ ಟೀಕಿಸಿದ್ದ ಸಜಿ ವಿರುದ್ಧ ಎಫ್‌ಐಆರ್

ಪತ್ತನಂತಿಟ್ಟ, ಕೇರಳ (ಪಿಟಿಐ): ಇತ್ತೀಚೆಗೆ ಸಂವಿಧಾನ ಟೀಕಿಸಿದ್ದ ಕೇರಳ ಸಿಪಿಎಂ ಶಾಸಕ ಸಜಿ ಚೆರಿಯನ್ ವಿರುದ್ಧ ಕೀಯುವಿಪುರ ಠಾಣೆ ಪೊಲೀಸರು ಗುರುವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಸಜಿ ಹೇಳಿಕೆಗೆ ಪ್ರತಿಪಕ್ಷಗಳು ಸೇರಿ ವಿವಿಧ ವಲಯಗಳಿಂದ ಟೀಕೆ ವ್ಯಕ್ತವಾಗಿದೆ. ಸಜಿ ವಿರುದ್ಧ ಪ್ರಕರಣ ದಾಖಲಿಸುವಂತೆ ಎರ್ನಾಕುಲಂನ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ತಿರುವಲ್ಲದ ಮ್ಯಾಜಿಸ್ಟ್ರೇಟ್ ಕೋರ್ಟ್, ಸಜಿ ಅವರನ್ನು ಬಂಧಿಸುವಂತೆ ಆದೇಶ ನೀಡಿತ್ತು.

ಆದರೆ, ಸಜಿ ಅವರು, 'ನಾನು ಸಂವಿಧಾನ ಗೌರವಿಸುವವನು. ಪತ್ತನಂತಿಟ್ಟ ಜಿಲ್ಲೆಯ ಮಲ್ಲಪಲ್ಲಿಯಲ್ಲಿ ಕಾರ್ಯಕ್ರಮದಲ್ಲಿ ನಾನು ಮಾತನಾಡಿದ ವಿಚಾರವನ್ನು ತಿರುಚಲಾಗಿದೆ' ಎಂದು ವಿಧಾನಸಭೆಯಲ್ಲಿ ಹೇಳಿದ್ದಾರೆ.

ಮಾಜಿ ಸಂಸದ ರಾಜ್ ಬಬ್ಬರ್‌ಗೆ 2 ವರ್ಷ ಜೈಲು ಶಿಕ್ಷೆ



ಲಖನೌ (ಪಿಟಿಐ): 1996ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ರಾಜ್ ಬಬ್ಬರ್ ಅವರಿಗೆ ಇಲ್ಲಿನ ನ್ಯಾಯಾಲಯವು 2 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

1996ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸರ್ಕಾರಿ ಕೆಲಸಕ್ಕೆ ಅಡ್ಡಿ ಮತ್ತು ಮತಗಟ್ಟೆ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ರಾಜ್ ಬಬ್ಬರ್ ತಪ್ಪಿತಸ್ಥರೆಂದು ನ್ಯಾಯಾಲಯ ತೀರ್ಪು ನೀಡಿತ್ತು.

ನಟ, ರಾಜಕಾರಣಿ ರಾಜ್ ಬಬ್ಬರ್ ಅವರಿಗೆ ಕೋರ್ಟ್ ₹8,500 ದಂಡವನ್ನೂ ವಿಧಿಸಿದೆ. ಶಿಕ್ಷೆ ಪ್ರಕಟವಾದ ಸಂದರ್ಭ ಮಾಜಿ ಸಂಸದರು ನ್ಯಾಯಾಲಯದಲ್ಲಿ ಹಾಜರಿದ್ದರು.

ಅಂದು ಸಮಾಜವಾದಿ ಪಕ್ಷದಲ್ಲಿದ್ದ ರಾಜ್ ಬಬ್ಬರ್ ಅವರು, ಲಖನೌ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. 1996 ರ ಮೇ 2 ರಂದು ಘಟನೆ ನಡೆದಿತ್ತು. ಮತಗಟ್ಟೆ ಅಧಿಕಾರಿ ಎಫ್‌ಐಆರ್ ದಾಖಲಿಸಿದ್ದರು.

ಪೋಕ್ಸೊ ಪ್ರಕರಣ: ಮಲಯಾಳ ನಟ ಶ್ರೀಜಿತ್ ರವಿ ಸೆರೆ

ತ್ರಿಶ್ಶೂರ್ (ಕೇರಳ) (ಪಿಟಿಐ): ಇಬ್ಬರು ಬಾಲಕಿಯರ ಜತೆಗೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ಮಲಯಾಳಂ ನಟ ಶ್ರೀಜಿತ್ ರವಿ (46) ಅವರನ್ನು ಪೋಕ್ಸೊ ಪ್ರಕರಣದಡಿ ಗುರುವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಶ್ರೀಜಿತ್ ರವಿಯನ್ನು ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದೂ ಹೇಳಿದ್ದಾರೆ.

ಜುಲೈ 4ರಂದು ಕಪ್ಪು ಬಣ್ಣದ ಕಾರಿನಲ್ಲಿ ಬಂದ ಅಪರಿಚಿತ ವ್ಯಕ್ತಿ ಇಲ್ಲಿನ ಉದ್ಯಾನವೊಂದರಲ್ಲಿದ್ದ ಇಬ್ಬರು ಬಾಲಕಿಯರ ಜತೆ ಅಸಭ್ಯವಾಗಿ ವರ್ತಿಸಿದ್ದಾನೆಂದು ಆರೋಪಿಸಿ ಪೋಷಕರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣದ ತನಿಖೆ ಆರಂಭಿಸಿದ ಪೊಲೀಸರು, ಉದ್ಯಾನದ ಹತ್ತಿರದ ಸಿ.ಸಿ.ಟಿ.ವಿ ದೃಶ್ಯಗಳನ್ನು ಪರಿಶೀಲಿಸಿದಾಗ, ಶ್ರೀಜಿತ್ ರವಿ ಕಾರಿನಲ್ಲಿ ಬಂದಿರುವುದು ಪತ್ತೆಯಾಗಿದೆ.

ದೂರುದಾರರ ಮಕ್ಕಳು ಆರೋಪಿಯನ್ನು ಗುರುತಿಸಿದ್ದಾರೆ. ಆರೋಪಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಶ್ರೀಜಿತ್ ರವಿ 2016ರಲ್ಲೂ ಪೋಕ್ಸೊ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದರು.

ತಿರುಚಿದ ವಿಡಿಯೊ: ಟಿ.ವಿ ನಿರೂಪಕ ಮತ್ತೆ 'ಸುಪ್ರೀಂ' ಮೊರೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುರಿತು ತಿರುಚಿದ ವಿಡಿಯೊ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಹಲವು ರಾಜ್ಯಗಳಲ್ಲಿ ಎಫ್‌ಐಆರ್ ದಾಖಲಾಗಿರುವುದರಿಂದ ತುರ್ತು ವಿಚಾರಣೆ ನಡೆಸಿ, ರಕ್ಷಣೆ ನೀಡುವಂತೆ ಕೋರಿ ಝೀ ಸುದ್ದಿ ವಾಹಿನಿ ನಿರೂಪಕ ರೋಹಿತ್ ರಂಜನ್ ಗುರುವಾರ ಮತ್ತೆ ಸುಪ್ರೀಂ ಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸಿದ್ದಾರೆ.

ಗುರುವಾರ ವಿಚಾರಣೆಗೆ ಅರ್ಜಿ ಪಟ್ಟಿ ಮಾಡಲು ಬುಧವಾರ ಆದೇಶಿಸಿದ್ದ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ನೇತೃತ್ವದ ರಜಾಕಾಲದ ಪೀಠ, 'ಮುಖ್ಯ ನ್ಯಾಯಮೂರ್ತಿಗಳಿಂದ ಪ್ರಕರಣ ಹಂಚಿಕೆಗಾಗಿ ಕಾಯುತ್ತಿದ್ದೇವೆ' ಎಂದು ಹೇಳಿದೆ.

ರೋಹಿತ್ ರಂಜನ್ ಪರ ಹಾಜರಾದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, 'ಅರ್ಜಿಯನ್ನು ಬುಧವಾರ ವಿಚಾರಣೆಗೆ ಪಟ್ಟಿ ಮಾಡಲು ಸೂಚಿಸಲಾಗಿತ್ತು. ಆದರೆ ಪಟ್ಟಿಯಲ್ಲಿ ಇಲ್ಲ. ಶುಕ್ರವಾರದ ವಿಚಾರಣೆಗೆ ಹಂಚಿಕೆ ಮಾಡುವಂತೆ ಒತ್ತಾಯಿಸಿದರು.

'ಪ್ರಕರಣದ ದಾಖಲೆಗಳು ಮುಖ್ಯ ನ್ಯಾಯಮೂರ್ತಿಗಳ ಬಳಿ ಇವೆ. ಮುಖ್ಯ ನ್ಯಾಯಮೂರ್ತಿಗಳ ಅನುಮೋದನೆಗೆ ಒಳಪಟ್ಟು ಶುಕ್ರವಾರಕ್ಕೆ ವಿಚಾರಣೆಗೆ ಪಟ್ಟಿಮಾಡಿ' ಎಂದು ಪೀಠ ಹೇಳಿದೆ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಕೆಳಗೆ ಸೂಚಿಸಿರುವ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 06.07.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(http://eproc.karnataka.gov.in)** ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 8.91 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 847.51 ಲಕ್ಷಗಳಾಗಿರುತ್ತದೆ. ಕನಿಷ್ಠ ಇ.ಎಂ.ಡಿ ರೂ.0.223 ಲಕ್ಷ ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 12.71 ಲಕ್ಷಗಳಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಮೀಸಲಾತಿ ವಿವರ	ಕೊನೆಯ ದಿನಾಂಕ
1	09/2021-22	01	ಕರೆ–3	4ನೇ ದರ್ಜೆ & ಮೇಲ್ಪಟ್ಟು	-	14.07.2022
2	25/2021-22	01	ಕರೆ–2	3ನೇ ದರ್ಜೆ & ಮೇಲ್ಪಟ್ಟು	-	14.07.2022
3	27/2021-22	01	ಕರೆ–3	1ನೇ ದರ್ಜೆ	-	06.08.2022
4	03/2022-23	01 ರಿಂದ 04	ಕರೆ–1	ಕ್ರ.ಸಂ 1–3 3ನೇ ದರ್ಜೆ & ಮೇಲ್ಪಟ್ಟು ಹಾಗೂ ಕ್ರ.ಸಂ–4 4ನೇ ದರ್ಜೆ & ಮೇಲ್ಪಟ್ಟು	ಕ್ರ.ಸಂ–2 ಪರಿಶಿಷ್ಟ ಪಂಗಡ ಹಾಗೂ ಕ್ರ.ಸಂ–3 ಮತ್ತು 4 ಪರಿಶಿಷ್ಟ ಜಾತಿ	14.07.2022
5	50/2017-18	01	ಕರೆ–4	3ನೇ ದರ್ಜೆ & ಮೇಲ್ಪಟ್ಟು	-	21.07.2022

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)

ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.

ದೂರವಾಣಿ: 91-80-26560722 / 26560723 / 66697999 E-mail: kidwai@nic.in

No.KMIO/SME(1)/Tender/Out Source/336/2022-23 **Date: 07.07.2022**

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1.	No. KMIO/SME(I)/Tender/Out Source/336/2022-23 dated: 07.07.2022	Providing Man Power Services of Group B, C & D Staff at KMIO.,
2.	No. KMIO/SME(I)/Tender/CW/337/2022-23 dated: 07.07.2022	Construction of Pre-Operation Waiting Ward Block Adjacent to Main Block (at Old HVAC Plant Site).
3.	No. KMIO/SME(I)/Tender/CW/338/2022-23 dated: 07.07.2022	Extension of Radiology Block Adjacent to CT Scan Wing on Open Terrace at 1st Floor, MDOPD Block.
4.	No. KMIO/SME(I)/Tender/CW/339/2022-23 dated: 07.07.2022	Renovation & Upgradation of Front Wing of Major OT.
5.	No. KMIO/SME(I)/Tender/Stationery/340/2022-23 dated: 07.07.2022	Procurement of Stationery Items on Rate Contract Basis.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **11.07.2022** ರಿಂದ **07.08.2022** ರವರೆಗೆ. ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **07.08.2022** ರಂದು ಮಧ್ಯಾಹ್ನ **3:00 p.m.** ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/CP/RO.1260/AAPL/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಪಿ.ಆರ್/28/2022–23 ದಿನಾಂಕ: 04.07.2022

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999 – 2000ರ ನಿಯಮದಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ/ ವಿದ್ಯುತ್ ಪರಿವೀಕ್ಷಕರ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಮತ್ತು ಸಾಮಾಗ್ರಿಗಳ ಪೂರೈಕೆಗೆ ಅರ್ಹ ಪೂರೈಕೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಮತ್ತು ಸಾಮಾಗ್ರಿಗಳ ಪೂರೈಕೆಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ (ಹೆಚ್ಚಿನ ಮಾಹಿತಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2022-23/IND14138	1.50	18.07.2022	20.07.2022
2	DMA/2022-23/IND14094	20.00	18.07.2022	20.07.2022
3	DMA/2022-23/OW/WORK_INDENT132062/CALL-2	10.00	18.07.2022	20.07.2022
4	DMA/2022-23/OW/WORK_INDENT131848/CALL-2	57.80	18.07.2022	20.07.2022
5	DMA/2021-22/OW/WORK_INDENT128492/CALL-5	2.00	18.07.2022	20.07.2022
6	DMA/2021-22/IND12860/CALL-3	1.40	18.07.2022	20.07.2022
7	DMA/2021-22/IND12805/CALL-3	4.15	18.07.2022	20.07.2022
8	DMA/2021-22/OW/WORK_INDENT128499/CALL-5	1.66	18.07.2022	20.07.2022
9	DMA/2022-23/OW/WORK_INDENT133373	1.50	18.07.2022	20.07.2022
10	DMA/2022-23/OW/WORK_INDENT133370	2.00	18.07.2022	20.07.2022
11	DMA/2022-23/IND 14168	5.00	18.07.2022	20.07.2022
12	DMA/2022-23/OW/WORK_INDENT133421	17.80	18.07.2022	20.07.2022
13	DMA/2022-23/OW/WORK_INDENT133405	16.00	18.07.2022	20.07.2022
14	CMC/TPR/ENG/STP	48.00	18.07.2022	20.07.2022
15	ಐ.ಬಿ ಸರ್ಕಲ್‌ನಿಂದ ಅರಳೀಕಟ್ಟೆವರೆಗೆ ಎರಡೂ ಬದಿ ಬೀದಿ ದೀಪ ಅಳವಡಿಸುವ ಕಾಮಗಾರಿ	40.00	22.07.2022	26.07.2022

ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಅರ್ಹ ದುರಸ್ತಿದಾರರಿಂದ/ಸರಬರಾಜುದಾರರಿಂದ ಕೋಟೇಷನ್ ಆಹ್ವಾನಿಸಲಾಗಿದೆ ಕೋಟೇಷನ್ ದಿನಪತ್ರಿಕೆಯಲ್ಲಿ ಪ್ರಕಟಣೆ ದಿನಾಂಕದಿಂದ 7 ದಿನಗಳ ಒಳಗಾಗಿ ತಮ್ಮ ಕಡಿಮೆ ಧರಗಳ ಕೋಟೇಷನ್ ಸಲ್ಲಿಸುವುದು ಕೋಟೇಷನ್ ಫಾರಂಗಳನ್ನು ನಗರಸಭೆ ಕಛೇರಿಯಿಂದ ನೀಡಲಾಗುತ್ತದೆ.

1	ನಗರದಲ್ಲಿರುವ ಕೆಂಪಮ್ಮ ದೇವಿ ದೇವಸ್ಥಾನ ಮುಂದೆ ಇರುವ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಹೈಮಾಸ್ಟ್‌ನ್ನು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
2	ಹಾಸನ ವೃತ್ತದ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಹೈಮಾಸ್ಟ್‌ನ್ನು ಪರಿಶೀಲನೆ ಮಾಡಿ ದುರಸ್ಥಿ ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
3	ಹಳೇಪಾಳ್ಯ ವೃತ್ತದ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
4	ಅಂಬೇಡ್ಕರ್ ವೃತ್ತದ (ಐ.ಬಿ. ಸರ್ಕಲ್) ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
5	ಪೈ ಹೋಟಲ್ ವೃತ್ತದ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
6	ಗಾಂಧಿನಗರ ರೈಲ್ವೆ ಗೇಟ್ ಹತ್ತಿರವಿರುವ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಹಾಗೂ ಅರಸುನಗರಕ್ಕೆ ಸ್ಥಳಾಂತರಿಸಲು ಹೈಮಾಸ್ಟ್‌ನ್ನು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
7	ಗಾಂಧಿನಗರ ಮಸೀದಿ ಮುಂಭಾಗದ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
8	ಕೋಡಿ ಸರ್ಕಲ್ ಮುಂಭಾಗದ ಹೈಮಾಸ್ಟ್‌ನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
9	ತಿಪಟೂರು ನಗರದಲ್ಲಿ ಇರುವ ಸೋಲರ್ ಬೀದಿ ದೀಪಗಳನ್ನು ದುರಸ್ಥಿ ಪಡಿಸಲು ಸ್ಥಳ ಪರಿಶೀಲನೆ ಮಾಡಿ ಕೋಟೇಷನ್ ಧರಗಳನ್ನು ಸಲ್ಲಿಸತಕ್ಕದ್ದು
10	ವೈ.ಟಿ ರಸ್ತೆಯಲ್ಲಿ ಇರುವ ನಗರಸಭೆಯ 26 ಅಂಗಡಿ ಮಳಿಗೆಗಳಿಗೆ ವಿದ್ಯುತ್ ಮಾಪಕಗಳನ್ನು ಖರೀದಿಸಿ ಅಳವಡಿಸಲು ಕೋಟೇಷನ್ ಸಲ್ಲಿಸುವುದು (BESCOM ಕಛೇರಿ ಕೆಲಸಗಳ ಸರ್ವಿಸ್ ಚಾರ್ಜ್ ಒಳಗೊಂಡಂತೆ)
11	ತಿಪಟೂರು ನಗರದ ಎಸ್.ಟಿ.ಪಿ ಘಟಕದ ಪ್ರಯೋಗಾಲಯಕ್ಕೆ ರಾಸಾಯಿನಿಕಗಳ ಸರಬರಾಜು ಕೋಟೇಷನ್ ಸಲ್ಲಿಸುವುದು
12	ತಿಪಟೂರು ನಗರದ ಎಸ್.ಟಿ.ಪಿ ಹಾಗೂ ವೆಟ್‌ವೆಲ್‌ಗಳ ಯಂತ್ರಗಳಿಗೆ ಅಗತ್ಯವಿರುವ ಬಿಡಿಭಾಗಗಳ ಸರಬರಾಜು ಕೋಟೇಷನ್ ಸಲ್ಲಿಸುವುದು
13	ಎಸ್.ಟಿ.ಪಿ ಘಟಕ್ಕದಲ್ಲಿರುವ ಕ್ಲೋರಿನ್ ಗ್ಯಾಸ್ ಸಿಲಿಂಡರ್ ಅನ್ನು ವರ್ಷಕ್ಕೆ ಎರಡೂ ಬಾರಿ ಭರ್ತಿ ಮಾಡಿಕೊಡುವುದು ಸಿಲಿಂಡರ್ (ಸಾಮಾರ್ಥ್ಯ (600 ಕೆ.ಜಿ ಕ್ಲೋರಿನ್) ಸಾಗಾಣಿ, ರೀಫಿಲ್, ಜೋಡಣೆ, ಒಳಗೊಂಡಂತೆ) ಕೋಟೇಷನ್ ಸಲ್ಲಿಸುವುದು

ಸಹಿ/–ರಾಮಮೋಹನ್.ಪಿ.ಜೆ, (ರಾಮಿ) ಅಧ್ಯಕ್ಷರು ನಗರಸಭೆ, ತಿಪಟೂರು.
ಸಹಿ/–ಗಣೇಶ್(ಸೊಪ್ಪು), ಉಪಾಧ್ಯಕ್ಷರು ನಗರಸಭೆ, ತಿಪಟೂರು.
ಸಹಿ/–ಶಶಿಕಿರಣ್, ಸ್ಥಾಯಿಸಮಿತಿ ಅಧ್ಯಕ್ಷರು ನಗರಸಭೆ, ತಿಪಟೂರು.
ಸಹಿ/–ಉಮಾಕಾಂತ್ ಪೌರಾಯುಕ್ತರು, ನಗರಸಭೆ, ತಿಪಟೂರು.

DIPR/TUM/267/MCA/2022-23

ಸೆಂಟ್ರಲ್ ವಿಸ್ತಾ ಕಾಮಗಾರಿ 18ರೊಳಗೆ ಪೂರ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಂಟ್ರಲ್ ವಿಸ್ತಾ ಅವೆನ್ಯೂ ಪುನರ್ ಅಭಿವೃದ್ಧಿ ಯೋಜನೆಯಡಿ ವಿಜಯ ಚೌಕ್‌ನಿಂದ ಇಂಡಿಯಾ ಗೇಟ್ ವರೆಗಿನ ಕಾಮಗಾರಿಯನ್ನು ಇದೇ 18ರ ಒಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಹೇಳಿದ್ದಾರೆ.



ಹರ್ದೀಪ್ ಸಿಂಗ್ ಪುರಿ

‘ಒಂದೆರಡು ಅಂಡರ್‌ಪಾಸ್‌ಗಳಲ್ಲಿ ಕೆಲ ಸಣ್ಣ ಕಾಮಗಾರಿಗಳು ನಡೆಯುತ್ತಿವೆ. ಹೀಗಾಗಿ, ಪುನರ್ ಅಭಿವೃದ್ಧಿ ಕಾಮಗಾರಿಯನ್ನು ಜುಲೈ 15 ಅಥವಾ 18ರ ಒಳಗಾಗಿ ಪೂರ್ಣಗೊಳಿಸಲಾಗುವುದು’ ಎಂದರು.

ಸೆಂಟ್ರಲ್ ವಿಸ್ತಾ ಪುನರ್‌ಅಭಿವೃದ್ಧಿ ಯೋಜನೆಯು ತ್ರಿಕೋನಾಕಾರದ ನೂತನ ಸಂಸತ್ ಭವನ, ವಿಜಯ ಚೌಕ್‌ನಿಂದ ಇಂಡಿಯಾ ಗೇಟ್ ವರೆಗಿನ 3 ಕಿ.ಮೀ. ಉದ್ದದ ರಾಜಪಥದ ಅಭಿವೃದ್ಧಿ, ಪ್ರಧಾನಿಯ ನೂತನ ನಿವಾಸ, ಕಚೇರಿ ಹಾಗೂ ಉಪರಾಷ್ಟ್ರಪತಿಗಳ ನೂತನ ಕಚೇರಿ ಸಂಕೀರ್ಣದ ನಿರ್ಮಾಣವನ್ನು ಒಳಗೊಂಡಿದೆ ಎಂದು ಹೇಳಿದ್ದಾರೆ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್: 080–25536625/25536789

IFTNO. ಕಹಾಮ/ಅಭಿ/ಸೋಲಾರ್ ಗ್ರೂಪ್ ಕ್ಯಾಪ್ಟಿವ್/2022–23 ದಿನಾಂಕ: 07.07.2022

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳವು ಗ್ರೂಪ್ ಕ್ಯಾಪ್ಟಿವ್ ಅಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಟೆಂಡರನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರು ವೆಬ್ ಸೈಟ್ http://eproc.karantaka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ help desk ಇ–ಮೇಲ್; hphelpdesk.blr@intarvo.com ಮತ್ತು ಸಹಾಯವಾಣಿ ಸಂಖ್ಯೆ: 080–25501227/ 25501216 ಸಂಪರ್ಕಿಸಬಹುದಾಗಿದೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ ಸಂಖ್ಯೆ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಕರ್ನಾಟಕ ಹಾಲು ಮಹಾಮಂಡಳವು ಗ್ರೂಪ್ ಕ್ಯಾಪ್ಟಿವ್ ಅಡಿಯಲ್ಲಿ 90–100 ಮೆಗಾ ವ್ಯಾಟ್ ಸೋಲಾರ್ ವಿದ್ಯುತ್ ಸ್ಥಾವರದ ವಿನ್ಯಾಸ, ಹಣಕಾಸು, ಅಳವಡಿಕೆ ಮತ್ತು 25 ವರ್ಷಗಳ ನಿರ್ವಹಣೆ ಕೆಲಸಗಳ ಸಂಬಂಧ.	1 ಜಾಬ್	3,92,44,725/–	18 ತಿಂಗಳು (ಅನುಷ್ಠಾನ) 25 ವರ್ಷ (ನಿರ್ವಹಣೆ)

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: ದಿ. 11.07.2022 ರಿಂದ 12.08.2022 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.08.2022 ರ ಸಾಯಂಕಾಲ 4:00 ಗಂಟೆಯವರೆಗೆ.
3. ಪ್ರಿ–ಬಿಡ್ ಸಭೆ ದಿನಾಂಕ 20.07.2022 ರ ಬೆಳಿಗ್ಗೆ 11.30 ಗಂಟೆಗೆ.
4. ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 18.08.2022 ರಂದು ಬೆಳಿಗ್ಗೆ 11:30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ/ಬದಲಾವಣೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ನಿರ್ದೇಶಕರು (ಅಭಿಯಂತರ–2)

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–29753354/56, ಇ–ಮೇಲ್: karbuildworkerswelfare@gmail.com

No.: KBOCWWB/Notifications/2022-23 **Dated: 06.07.2022**

ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಟೆಂಡರ್‌ಗಳನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸರಕುಗಳು ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಟೆಂಡರ್‌ನ ಸಂಖ್ಯೆ	ಟೆಂಡರ್‌ನ ಹೆಸರು	ಟೆಂಡರ್ ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಮ್.ಡಿ ಠೇವಣಿ ಮೊತ್ತ
1	KBOCWWB/SCHOOLKITS/CR-04/2022-23	ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ತರಗತಿ 06 ರಿಂದ 08) ಸ್ಕೂಲ್ ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	940.30	ರೂ. 14,10,000/–
2	KBOCWWB/SCHOOLKITS/CR-03/2022-23	ಕಲಬುರ್ಗಿ ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ತರಗತಿ 06 ರಿಂದ 08) ಸ್ಕೂಲ್ ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	940.30	ರೂ. 14,10,000/–
3	KBOCWWB/SCHOOLKITS/CR-06/2022-23	ಹಾಸನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ತರಗತಿ 06 ರಿಂದ 08) ಸ್ಕೂಲ್ ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	940.30	ರೂ. 14,10,000/–
4	KBOCWWB/SCHOOLKITS/CR-07/2022-23	ಬೆಂಗಳೂರು–1 ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ತರಗತಿ 06 ರಿಂದ 08) ಸ್ಕೂಲ್ ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	940.30	ರೂ. 14,10,000/–
5	KBOCWWB/SCHOOLKITS/CR-08/2022-23	ಬೆಂಗಳೂರು–2 ಪ್ರಾದೇಶಿಕ ವ್ಯಾಪ್ತಿಯಲ್ಲಿ ಮಂಡಳಿಯ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ತರಗತಿ 06 ರಿಂದ 08) ಸ್ಕೂಲ್ ಕಿಟ್‌ಗಳನ್ನು ಸರಬರಾಜು ಮಾಡುವುದು ಮತ್ತು ವಿತರಿಸುವುದು.	940.30	ರೂ. 14,10,000/–

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **05.08.2022**ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ.&ಇ.ನಿ.ಕಾ.ಕ.ಮಂ.

ವಾಸಾಸಂಇ/ವಾಪ್ರ/ಎಲ್‌ಸಿ/1254/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

म.प्र. गृह निर्माण एवं अधोसंरचना विकास मण्डल

रेडी फॉर पजेशन

भोपाल शहर के बीच अयोध्या नगर फेस 5 पार्ट-1 भोपाल में एच.आई.जी. डुप्लेक्स एवं जी-सेक्टर प्रकोष्ठ एल.आई.जी. भवन को युक्तियुक्तकरण में 25% राशि कम करने के उपरांत न्यूनतम मूल्य पर ऑफर के माध्यम से क्रय करने का सुनहरा अवसर
(जहां है, जैसी है स्थिति में एकमुश्त आधार पर विक्रय)
'रेरा अधिनियम लागू होने के पूर्व निर्मित संपत्ति'

ई-ऑफर 06.08.2022 (रात्रि 23:59 बजे तक) आमंत्रित

क्र.	योजना का नाम	उपलब्ध भवनों की संख्या	भवन क्रमांक	भूखण्ड का क्षेत्रफल (वर्गमीटर में)	निर्मित क्षेत्रफल (वर्गमीटर में)	युक्तियुक्तकरण उपरांत अपसेट मूल्य (रु. लाख में)	धरोहर राशि (रु. लाख में)	आवेदन फॉर्म का शुल्क जी.एस.टी. सहित (रुपयो में)
1.	13/27 एच.आई.जी. सुपर डीलक्स 'बी'	01	47	173.25	179.24	55.27	8.30	2360/-
2.	216 एल.आई.जी. प्रकोष्ठ ('जी' सेक्टर) अयोध्या नगर	04	7, 77, 78, प्रथम तल		26.20	3.06	0.62	590/-
			120 द्वितीय तल		26.20	2.99	0.60	590/-
3.	304 एल.आई.जी. प्रकोष्ठ, एकतापुरी	01	जूनि. एल.आई.जी. 5/119		27.10	3.81	0.76	590/-

भवन हेतु वर्ष 2022-23 में प्रथम ऑफर

क्र.	योजना का नाम	उपलब्ध भवनों की संख्या	भवन क्रमांक	भूखण्ड का क्षेत्रफल (वर्गमीटर में)	निर्मित क्षेत्रफल (वर्गमीटर में)	युक्तियुक्तकरण उपरांत अपसेट मूल्य (रु. लाख में)	धरोहर राशि (रु. लाख में)	आवेदन फॉर्म का शुल्क जी.एस.टी. सहित (रुपयों में)
1.	18 एच.आई.जी. सीनियर 'ए' फेस-5 अयोध्या, भोपाल	1	95	142.50	149.65	62.45	9.37	2360/-

नोट :- (1) ऑफर स्वीकृत होने पर रु. 50.00 लाख या उससे अधिक की अपसेट मूल्य की संपत्ति की शेष राशि 3 आसान किश्तों में भुगतान करने की विशेष सुविधा। ऑफर स्वीकृति उपरांत ऑफरकर्ता द्वारा ऑफर निरस्त कराने पर धरोहर राशि की 50 प्रतिशत राशि जब्त कर ली जावेगी। ऑफर प्रस्तुत करने के पूर्व स्थल/संपत्ति का अवलोकन कर लें। शासन/मण्डल द्वारा निर्धारित लीजरेन्ट एवं संपत्ति के मूल्य का 2% कार्पस फण्ड अन्य कर/शुल्क पृथक से देय होंगे। (2) आवेदन फॉर्म का मूल्य एवं धरोहर राशि ONLINE/RTGS से जमा होगी। (3) रजिस्टर्ड मोबाइल पर BID-ID जमा होगी। (4) मण्डल/शासन के नियम/शर्तें लागू। (5) योजना की विस्तृत जानकारी वेबसाइट **www.mphousing.in** पर उपलब्ध। (6) आवेदन धरोहर राशि जमा करने की **अंतिम तिथि 06.08.2022 रात्रि 11.59 बजे तक।** (7) ऑफर डालने की अंतिम तिथि 08.08.2022 सायं 5.00 तक। (8) ऑफर दिनांक 09.08.2022 को सायं 3.00 बजे खोले जावेंगे।

सम्पर्क सूत्र : एम.पी. खरे (सहायक यंत्री) मो. 9827290842, श्रीमती राजकुमारी मालयान (संपदा प्रबंधक) मो. 9826853657, आर.एस. यादव (सहायक संपदा प्रबंधक) मो. 9993829251, प्रदीप कुमार हेडाऊ (संपदा अधिकारी, प्रक्षेत्र-2, भोपाल) मो. 9406912100, MP Online Help Line 0755-6720200

/mphidb /mphidb

Visit us: https://www.mphousing.in

सरल एवं पारदर्शी ऑनलाइन भुगतान की सुविधा उपलब्ध

भुगतान की कोई असुविधा होने पर Whatsapp Help Desk Number 7974264023

म.प्र. माध्यम/105381/2022

ಮುಂಬೈ: ಸತತ ಮಳೆ, ರೈಲು ಸಂಚಾರ ವಿಳಂಬ

ಮುಂಬೈ (ಪಿಟಿಐ): ಸತತ ನಾಲ್ಕನೇ ದಿನವೂ ಮುಂಬೈನಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಗೋಡೆಯೊಂದು ಹಳಿಯ ಮೇಲೆ ಕುಸಿದಿರುವುದರಿಂದ ಸ್ಥಳೀಯ ರೈಲು ಸೇವೆಗಳಲ್ಲಿ ವಿಳಂಬವಾಗಿದೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ.

‘ದಕ್ಷಿಣ ಮುಂಬೈನ ಮಸೀದಿ ಮತ್ತು ಸ್ಯಾಂಡ್‌ಹರ್ಸ್ಟ್ ರಸ್ತೆ ನಿಲ್ದಾಣಗಳ ನಡುವೆ ಹಾರ್ಬರ್ ಲೈನ್‌ನ ಕೆಳಗೆ ಇರುವ (ಉತ್ತರ-ಬೌಂಡ್) ಮಾರ್ಗದಲ್ಲಿನ ಗೋಡೆಯ ಒಂದು ಸಣ್ಣ ಭಾಗವು ಕುಸಿದಿದ್ದು, ರೈಲು ಸಂಚಾರದ ಮೇಲೆ ಪರಿಣಾಮ ಬೀರಿದೆ. ಮುಂಬೈ ಮತ್ತು ನೆರೆಯ ಠಾಣೆ ಜಿಲ್ಲೆಯಲ್ಲಿ ಮಳೆಯಿಂದಾಗಿ ಉಪನಗರ ಸೇವೆಗಳು ಕೆಲವು ನಿಮಿಷಗಳ ಕಾಲ ವಿಳಂಬವಾಗಿವೆ’ ಎಂದು ಕೇಂದ್ರ ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಮುಂಬೈ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಸೂಚನೆ ನೀಡಿದೆ. ಅಲ್ಲದೇ, ಗಾಳಿಯೂ ಸಹ 40-50 ಕಿ.ಮೀ ವೇಗದಲ್ಲಿ ಪ್ರಾರಂಭವಾಗಿ 60 ಕಿ.ಮೀ ವರೆಗೂ ತಲುಪುವ ಸಾಧ್ಯತೆಯನ್ನು ಹವಾಮಾನ ಇಲಾಖೆ ತಿಳಿಸಿದೆ ಎಂದು ಪೌರಾಡಳಿತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ದಕ್ಷಿಣ ಗುಜರಾತ್, ಸೌರಾಷ್ಟ್ರದಲ್ಲೂ ಮಳೆ: ದಕ್ಷಿಣ ಗುಜರಾತ್ ಮತ್ತು ಸೌರಾಷ್ಟ್ರ ಪ್ರದೇಶದ ಕೆಲವು ಭಾಗಗಳಲ್ಲಿ ಗುರುವಾರ ಭಾರಿ ಮಳೆ ಸುರಿದಿದ್ದು, ಮುಂದಿನ ನಾಲ್ಕು ದಿನಗಳ ಕಾಲ ರಾಜ್ಯದಲ್ಲಿ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇದೆ.

ದಕ್ಷಿಣ ಪಾಕಿಸ್ತಾನದಲ್ಲಿನ ಕಡಿಮೆ ಒತ್ತಡ ಹಾಗೂ ಚಂಡಮಾರುತದ ಪರಿಚಲನೆಯಿಂದಾಗಿ ನೈರುತ್ಯ ಮಾನ್ಸೂನ್ ಈಗ ರಾಜ್ಯದಾದ್ಯಂತ ಸಕ್ರಿಯವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂದಿನ ನಾಲ್ಕು ದಿನಗಳಲ್ಲಿ ರಾಜ್ಯದ ಬಹುತೇಕ ಸ್ಥಳಗಳಲ್ಲಿ ಹಗುರ, ಸಾಧಾರಣ ಮಳೆ ಹಾಗೂ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ. ಜುಲೈ 11 ರಂದು ಕಚ್ ಪ್ರದೇಶದ ವಿವಿಧ ಸ್ಥಳಗಳಲ್ಲಿ ಅತ್ಯಂತ ಹೆಚ್ಚು ಮಳೆಯಾಗಲಿದೆ ಎಂದು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗುಜರಾತ್ ಕರಾವಳಿಯ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಎಚ್ಚರಿಕೆ ವಹಿಸುವಂತೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಲ್ಲದೇ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಸರ್ಕಾರವು ಮೀನುಗಾರರಿಗೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ : ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 11/2022–23 ದಿನಾಂಕ : 06/07/2022

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ **ಗದಗ** ಉಪವಿಭಾಗದ ಈ ಕೆಳಗಿನ ಕಾಮಗಾರಿಗಳಿಗಾಗಿ **ಕೆ.ಡಬ್ಲ್ಯೂ–2,3&4** (ಏಕ ಲಕೋಟೆ & ದ್ವಿ ಲಕೋಟೆ) ಪದ್ಧತಿಯಲ್ಲಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. **ಲೆಕ್ಕ ಶೀರ್ಷಿಕೆ: 4702–ಆಣೆಕಟ್ಟು ಪಿಕಪ್–ಪ್ರಧಾನ ಕಾಮಗಾರಿಗಳು (ಒಟ್ಟು 7 ಕಾಮಗಾರಿಗಳು); 4702–ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿ (ಒಟ್ಟು ಕಾಮಗಾರಿ),** ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. **500.00** ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. **8,929** ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ. **43.29** ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ. **7,75** ಲಕ್ಷಗಳು ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ : http://eproc.karnataka.gov.in ನಲ್ಲಿ ದಿನಾಂಕ : **08.07.2022** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ : **19.07.2022** ರೊಳಗಾಗಿ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ : **22.07.2022** ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ/ಆರ್ಥಿಕ ಬಿಡ್‌ನ್ನು ದಿನಾಂಕ : **25.07.2022** ಸಂಜೆ 17.45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನತರೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– (ಶಂಭುಲಿಂಗ ಜಿ ಹೆರೂರ)
ಕಾರ್ಯನಿರ್ವಾಹಕ ಇಂಜಿನೀಯರ್ (ಪ್ರ),
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.

ವಾಸಾಸಂಇ/ಗದಗ/ಎಂ.ಸಿ.ಎ/154/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054–3054–8443/2022–23/1339 ದಿನಾಂಕ:06.07.2022

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 & 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 7 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 650.00 ಲಕ್ಷಗಳು ಹಾಗೂ ರೂ. 100.00 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 9,75,000/– ರೂ.ಗಳು ಹಾಗೂ 2,00,000/– ರೂಗಳು. ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ: 16.07.2022 ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–21.07.2022 ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 22.07.2022 ರ ಸಂಜೆ 4.31 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 25.07.2022 ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/245/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಯೋಜನೆಗಳು ವಿಭಾಗ,
ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು–560 092

ನಂ.: ಬಿಬಿಎಂಪಿ/ಯಲಹಂಕ/ಕಾಪಾಅ(ಯೋಜನೆ)/ಟೆಂಡರ್/07/2022–23 ದಿನಾಂಕ: 06.07.2022

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ

ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ), ಯಲಹಂಕ ವಲಯ, ಬಿಬಿಎಂಪಿ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ
1	ವಾರ್ಡ್ ಸಂಖ್ಯೆ 01, 03 ಮತ್ತು 04 ರಲ್ಲಿ ಉದ್ಯಾನವನಗಳು ಮತ್ತು ಪಾದಚಾರಿ ಮಾರ್ಗಗಳಿಗೆ ಕಂಬಗಳಿರುವ ಅಲಂಕಾರಿಕ/ಆರ್ನಮೆಂಟಲ್/ಪಾದಚಾರಿ ದೀಪಗಳು ಮತ್ತು ಇಂಧನ ಉಳಿತಾ ಬೀದಿ ದೀಪಗಳು, ನೈಜ ಸಮಯದ ಬೀದಿ ದೀಪ ಕಂಟ್ರೋಲ್ ಸ್ವಿಚ್‌ಗಳು, ಕಂಟ್ರೋಲ್ ವಯರ್‌ಗಳು, ಕಂಬಗಳು ಎಬಿಸಿ ಕೇಬಲ್ ಮತ್ತು ಇತರ ಪರಿಕರಗಳನ್ನು ಒದಗಿಸುವುದು.	ರೂ. 464.30	ರೂ. 7.00 ಲಕ್ಷಗಳು

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **18.07.2022**ರ **ಮಧ್ಯಾಹ್ನ 3:00 ಗಂಟೆ**ವರೆಗೆ. **(3)** ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **19.07.2022**ರ **ಸಂಜೆ 4:00 ಗಂಟೆಗೆ.** **(4)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **20.07.2022**ರ **ಸಂಜೆ 4:00 ಗಂಟೆ**ಯ ವರೆಗೆ. **(5)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.07.2022**ರ **ಸಂಜೆ 4:30 ಗಂಟೆಗೆ.** **(6)** ಆರ್ಥಿಕ ಬಿಡ್ ತೆರೆಯುವ ದಿನಾಂಕ:**25.07.2022**ರ **ಸಂಜೆ 4:00 ಗಂಟೆ**ಗೆ ಸಾಧ್ಯವಾದಲ್ಲಿ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಯಲಹಂಕ ವಲಯ, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಉತ್ತರ’ ಹುಡುಕುತ್ತಾ ವಿಕ್ರಾಂತ್ ರೋಣ!

ಅಭಿಲಾಷ್ ಪಿ.ಎಸ್.

> ‘ವಿಕ್ರಾಂತ್ ರೋಣ’ ಸಿನಿಮಾ ಬಿಡುಗಡೆ ಹೊಸ್ತಿಲಲ್ಲಿ ಅಭಿನಯ ಚಕ್ರವರ್ತಿ ಸುದೀಪ್ ‘ಉತ್ತರ’ದತ್ತಲೂ ಚಿತ್ತ ಹರಿಸಿದ್ದಾರೆ. ಕಿಚ್ಚನಿಗೆ ಮತ್ತೆ ಗ್ರೇ ಶೇಡ್ ಪಾತ್ರಗಳ ನೆನಪು ಕಾಡಿದೆ. ಸಿನಿಮಾ ಪುರವಣಿಯೊಂದಿಗೆ ಮಾತಿಗಿಳಿಯುತ್ತಾ ಕಾಲ್ಪನಿಕ ಲೋಕದಲ್ಲಿ ನಡೆದು ವಿಕ್ರಾಂತ್ ರೋಣನ ಲೋಕವನ್ನು ಪರಿಚಯಿಸಿದ್ದಾರೆ.

● ‘ವಿಕ್ರಾಂತ್ ರೋಣ’ ಸುದೀಪ್ ಸಿನಿಜೀವನದ ಹೊಸ ಅಧ್ಯಾಯವೇ?

ಹಾಗೇನಿಲ್ಲ. ‘ವಿಕ್ರಾಂತ್ ರೋಣ’ ಸಿನಿಮಾವನ್ನು ನಾನು ಒತ್ತಡವಾಗಿ ತೆಗೆದುಕೊಳ್ಳುವುದಿಲ್ಲ. ಬಜೆಟ್ ಇಷ್ಟಾಗಿದೆ, ಹೇಗೆ ಇದನ್ನು ಕ್ಯಾರಿ ಮಾಡಲಿ ಎಂದು ಯೋಚಿಸುವುದಿಲ್ಲ. ನಾಳೆ ನಾನು ಇದಕ್ಕಿಂತ ಕಡಿಮೆ ಬಜೆಟ್ ಇರುವ ಸಿನಿಮಾ ಮಾಡಬಹುದು. ಚಿತ್ರಕಥೆ ಏನನ್ನು ಬಯಸುತ್ತದೆಯೋ ಅಂಥ ಪಾತ್ರವನ್ನು ಮಾಡಲು ನಾನು ಸಿದ್ಧನಿದ್ದೇನೆ. ಮುಂದೆ ವಿಕ್ರಾಂತ್ ರೋಣದ ಬಜೆಟ್‌ಗಿಂತ ಮತ್ತಷ್ಟು ಹೆಚ್ಚು ಬಜೆಟ್‌ನ ಸಿನಿಮಾಗಳನ್ನೇ ಮಾಡಬೇಕು ಎನ್ನುವ ಬಾಲಿಶ ಯೋಚನೆಗಳು ನನ್ನ ತಲೆಯಲ್ಲಿಲ್ಲ. ಬಜೆಟ್‌ಗಿಂತ ದೊಡ್ಡದು ಹೊಸ ಹೊಸ ಕಲ್ಪನೆಗಳು, ಕಥೆಗಳು. ಮುಂದಿನ ಐಡಿಯಾ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದೇನೇ ಹೊರತು ಬಜೆಟ್ ಬಗ್ಗೆ ಅಲ್ಲ.

● ಈ ಸಿನಿಮಾದ ಕಾಲ್ಪನಿಕ ಲೋಕ ಸೃಷ್ಟಿಯಾದ ಕುರಿತು...

‘ವಿಕ್ರಾಂತ್ ರೋಣ’ ಎನ್ನುವುದು ಒಂದು ಪುಟ್ಟ ಕಥೆ. ಅನೂಪ್ ಜೊತೆ ಕುಳಿತು ‘ಬಿಲ್ಲಾ ರಂಗ ಬಾಷಾ’ ಕಥೆ ಸಿದ್ಧಪಡಿಸುತ್ತಿರುವಾಗ, ಒಂದು ಹಂತದಲ್ಲಿ ಸ್ಕ್ರೀನ್‌ಪ್ಲೇ ಮುಂದೆ ಹೋಗುತ್ತನೇ ಇರಲಿಲ್ಲ. ಈ ನಡುವೆ ‘ವಿಕ್ರಾಂತ್ ರೋಣ’ದ ಕಥೆಯ ಎಳೆಯನ್ನು ಅನೂಪ್ ಹೇಳಿದ್ದರು. ಮೊದಲು ನಾನು ಈ ಸಿನಿಮಾವನ್ನು ಕೇವಲ ನಿರ್ಮಾಣ ಮಾಡಲು ಒಪ್ಪಿಕೊಂಡಿದ್ದೆ. ಆದರೆ ನಂತರದಲ್ಲಿ ನಾವೇ ಇದನ್ನು ಮಾಡಿದರೆ ಹೇಗೆ? ಎಂದು ಕೇಳಿದ್ದೆ. ಮೊದಲು ಒಂದು ನಿರ್ದಿಷ್ಟ ಬಜೆಟ್‌ನಲ್ಲಿ (₹9 ಕೋಟಿ) ಆಗಬೇಕಿದ್ದ ಸಿನಿಮಾ ಇದು. ನಾನು ‘ಇಂಡಿಯಾನ ಜೋನ್ಸ್’, ‘ಜುಮಾಂಜಿ’ಯಂಥ ಸಿನಿಮಾಗಳ ಫ್ಯಾನ್. ಆ ಕಾಲದ ಸಿನಿಮಾ ಮಾಡಬೇಕು ಎನ್ನುವುದು ನನ್ನ ಆಸೆ.

ಕಥೆ ಕೇಳಿದ ಬಳಿಕ ಇದನ್ನು ಬೃಹತ್ ಗಾತ್ರದಲ್ಲೇ ತೆರೆ ಮೇಲೆ ತರುವ ನಿರ್ಧಾರವನ್ನು ನಾನೇ ಮಾಡಿದೆ. ಅನೂಪ್ ಒಬ್ಬ ಉತ್ತಮ ವಿದ್ಯಾರ್ಥಿ. ಅವರು ಕಲಿಯುತ್ತಾರೆ. ಇಂಥ ಬಜೆಟ್ ಸಿನಿಮಾ ಮಾಡಿ ಅವರಿಗೆ ಅನುಭವವಿರಲಿಲ್ಲ. ಹಾಗೆಂದು ದುಡ್ಡಿದೆ ಎಂದು ವ್ಯರ್ಥ ಮಾಡಲಿಲ್ಲ. ಒಂದು ಉತ್ತಮವಾದ ತಂಡ ಕಟ್ಟಿದರು. ಜಾಕ್ ಮಂಜು ಬೆನ್ನುಲುಬಾಗಿ ನಿಂತಾಗ ಇಂಥ ತಂಡ ಈ ವಿಕ್ರಾಂತ್ ರೋಣ ಪ್ರಪಂಚ ಸೃಷ್ಟಿಸಿತು. ಹೀಗೆ ಆರಂಭವಾದ ಪಯಣ, ನನ್ನ ಸಿನಿ ಜೀವನದ ಅತಿ ದೊಡ್ಡ ಬಜೆಟ್ ಸಿನಿಮಾವಾಗಿ ಮುಂದಿದೆ.

● ಚಿತ್ರದಲ್ಲಿ ಸುದೀಪ್ ದ್ವಿಪಾತ್ರದಲ್ಲಿದ್ದಾರೆಯೇ?

ಪೂರ್ಣ ಚಿತ್ರಕಥೆ ಬಿಟ್ಟುಕೊಡಲು ಸಾಧ್ಯವಿಲ್ಲ, ಆದರೆ ಒಂದಂತೂ ಹೇಳಬಲ್ಲೆ, ಚಿತ್ರದಲ್ಲಿ ದ್ವಿಪಾತ್ರವಂತೂ ಇಲ್ಲ. ವಿಕ್ರಾಂತ್ ರೋಣ ಎನ್ನುವುದು ಪಾತ್ರವೊಂದರ ಹೆಸರು. ಚಿತ್ರದಲ್ಲಿ ಪಾತ್ರದ ಮೇಲೆ ಕಥೆ ನಿಂತಿಲ್ಲ. ಪಾತ್ರದಿಂದಾಗಿ ಕಥೆ ಮುಂದುವರಿಯುತ್ತದೆ ಅಷ್ಟೇ. ಮೇಕಿಂಗ್, ತಾಂತ್ರಿಕತೆ, ಪ್ರಸ್ತುತಿ, ನಿರೂಪಣೆಯ ಶೈಲಿಯಿಂದ ಚಿತ್ರ ಭಿನ್ನವಾಗಿ ಮೂಡಿಬಂದಿದೆ. ಅನೂಪ್ ಅದ್ಭುತವಾಗಿ ಇದನ್ನು ಹೆಣೆದಿದ್ದಾರೆ. ಈ ರೀತಿ ಪ್ರಪಂಚನ್ನು ಸೃಷ್ಟಿಸಿ, ವಿಕ್ರಾಂತ್ ರೋಣನನ್ನು ಅಲ್ಲಿ ಕುಳ್ಳಿರಿಸಿದಾಗ ವಿಭಿನ್ನವಾದ ಒಂದು ಲೋಕವೇ ಸೃಷ್ಟಿಯಾಗುತ್ತದೆ.

● ಅನೂಪ್ ಇಷ್ಟು ದೊಡ್ಡ ಬಜೆಟ್‌ಗೆ ಒಪ್ಪಿದರೇ?

ದುಡ್ಡಿದೆ ಎಂದು ನಾವು ಖರ್ಚು ಮಾಡಿಲ್ಲ. ಸಿನಿಮಾದ ಐಡಿಯಾಗೆ ನಾವು ಹಣ ಹೂಡಿದ್ದೇವೆ. ಅನೂಪ್ ಐಡಿಯಾ ಮೇಲೆ ಸಿನಿಮಾ ಬಜೆಟ್ ನೂರು ಕೋಟಿ ದಾಟಿತು. ನಾವು ನೂರು ಕೋಟಿ ರೂಪಾಯಿ ನೀಡಿ ಖರ್ಚು ಮಾಡಿ ಎಂದಿಲ್ಲ.

● ತಾಂತ್ರಿಕವಾಗಿ ‘ವಿಕ್ರಾಂತ್ ರೋಣ’...

‘ಟಾರ್ಜನ್’, ‘ಜುಮಾಂಜಿ’ ಸಿನಿಮಾಗಳ ರೀತಿಯೇ ನಮ್ಮ ಈ ಸಿನಿಮಾದ ಬ್ಯಾಕ್‌ಗ್ರೌಂಡ್ ಕಾಣಿಸಬೇಕು ಎಂದು 4–5 ಹಂತದ ಕಟ್ಟಡದಷ್ಟು ಎತ್ತರದ ಕಾಡಿನ ಸೆಟ್, 60 ಅಡಿ ಉದ್ದದ ಫೆರಿ ಸೆಟ್ ಹಾಕಿದ್ದೇವೆ. ಚಿತ್ರೀಕರಣದ ಶೇ 70–80 ಸೆಟ್‌ನಲ್ಲೇ ಆಗಿದೆ. ಗ್ರಾಫಿಕ್ಸ್ ಇಲ್ಲಿನ ಪ್ರಮುಖ ಅಂಶ. ಇಷ್ಟೆಲ್ಲಾ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ ಮೊದಲು ನಮ್ಮಲ್ಲಿತ್ತು. ಇದು ಯಶಸ್ವಿಯಾದ ಬಳಿಕ ನಾವೇ ಸಂಭ್ರಮಿಸಿದ್ದೂ ಇದೆ. ನನ್ನ ಸಿನಿಮಾ ಬರಬೇಕೆಂದರೆ ಜನಗಳ ನಿರೀಕ್ಷೆ ಇದ್ದೇ ಇರುತ್ತದೆ. ನನ್ನ ಸಿನಿಮಾಗಳು ಫ್ಲಾಪ್ ಕೂಡಾ ಆಗಿವೆ. ಇದರ ಬಗ್ಗೆ ನಾನು ತಲೆಕೆಡಿಸಿಕೊಂಡಿಲ್ಲ. ಸಿನಿಮಾ ಹಿಟ್ ಆದ ತಕ್ಷಣ ಇವತ್ತಿಂದ ನಾನೇ ಎಲ್ಲ ಎನ್ನುವುದು ತಪ್ಪಾಗುತ್ತದೆ. ನಾನು ಪ್ರತಿಯೊಂದು ಸಿನಿಮಾವನ್ನು ಆನಂದಿಸಿದ್ದೇನೆ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ | ಪ್ರಜಾವಾಣಿ ನೋಡಿಯೊ

● ಜಾಕ್ವೆಲಿನ್‌ಗೆ ಕನ್ನಡ ಕಲಿಸಿ, ಮೊದಲ ರೀಲ್ಸ್ ಮಾಡಿದ ಅನುಭವ?

ನಾನು ಅಹಂನಿಂದ ಜಾಕ್ವೆಲಿನ್‌ಗೆ ಕನ್ನಡ ಹೇಳಿಕೊಟ್ಟಿಲ್ಲ. ಪ್ರೀತಿಯಿಂದ ಹೇಳಿಕೊಟ್ಟಿದ್ದೇನೆ. ಭಾಷೆ ಕಲಿಯುವ ಹಾಗೂ ಕಲಿಯದೇ ಇರುವ ವಿಚಾರದಲ್ಲಿ ಎಲ್ಲರಿಗೂ ಅವರದೇ ಆದ ಅಧಿಕಾರವಿದೆ. ನಾನು ಎಲ್ಲ ಭಾಷೆಗಳನ್ನು ಗೌರವಿಸುತ್ತೇನೆ. ನಾವು ಕನ್ನಡಿಗರಾಗಿ ಕನ್ನಡವನ್ನು ಮೊದಲು ಚೆನ್ನಾಗಿ ಬಳಸಿಕೊಳ್ಳೋಣ. ನಾನು ಸಿನಿಮಾ ಮಾಡಿ ಪ್ರೇಕ್ಷಕರನ್ನು ಮನರಂಜಿಸಲು ಹುಟ್ಟಿದವನೇ ಹೊರತಾಗಿ ರೀಲ್ಸ್ ಮಾಡಿ ಮನರಂಜನೆ ನೀಡುವುದಕ್ಕಲ್ಲ. ಹೀಗೆಂದು ರೀಲ್ಸ್ ಮಾಡುವುದು ಕೆಟ್ಟದೆಂದು ಹೇಳುವುದಿಲ್ಲ. ರೀಲ್ಸ್ ಮಾಡಿ ಜನರು ಖುಷಿಪಡುವುದನ್ನು ನೋಡಿದ್ದೇನೆ. ಆದರೆ ನನಗೆ ರೀಲ್ಸ್ ಮಾಡುವುದು ಕಂಫರ್ಟ್ ಆಗಿರಲಿಲ್ಲ. ರೀಲ್ಸ್ ಮಾಡಲು ನಾನು ಜಾನಿ ಮಾಸ್ಟರ್ ಅವರನ್ನೇ ಕರೆಸಿಕೊಂಡಿದ್ದೆ.

● ಅಮಿತಾಬ್ ಬಚ್ಚನ್ ಅವರು ನಿಮಗೆ ಶುಭಹಾರೈಸಿದ ಕ್ಷಣ ಹೇಗಿತ್ತು?

ಅದೊಂದು ಸಂಭ್ರಮದ ಹಾಗೂ ಹೆಮ್ಮೆಯ ಕ್ಷಣ. ಅವರು ಕನ್ನಡ ಚಿತ್ರವೊಂದನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ಖುಷಿ ಇದೆ. ಎಲ್ಲರೂ ಚಿತ್ರಕ್ಕೆ ಸ್ಪಂದಿಸುತ್ತಿದ್ದಾರೆ. ಇದೇ ನನ್ನ 26 ವರ್ಷದ ಸಿನಿಪಯಣದ ಸಂಪಾದನೆ. ಎಲ್ಲೇ ಹೋದರೂ ಗೌರವವಿದೆ. ನಾನೂ ಇದೇ ಅಭ್ಯಾಸವಿಟ್ಟುಕೊಂಡಿದ್ದೇನೆ. ಪ್ರತಿ ಸಿನಿಮಾಗೂ ಹಾರೈಸುತ್ತೇನೆ. ಬೆಳೆಯಬೇಕು, ಬಿಡಬೇಕು ಎನ್ನುವುದು ಅವರ ಕೈಯಲ್ಲಿರುವುದು. ನಾವು ಸ್ಪಂದಿಸೋಣ ಅಷ್ಟೇ. ಅವರ ಮನಸ್ಸನ್ನು ಸ್ಪರ್ಶಿಸೋಣ. ನಾವೂ ಶುಭಕೋರುತ್ತಿದ್ದೇವೆ ಎನ್ನುವುದು ಅವರಿಗೂ ತಿಳಿಯಲಿ. ನಾವು ಪ್ರತಿಯೊಬ್ಬರನ್ನೂ ಪರಸ್ಪರ ಗೌರವಿಸಿ, ಅವರ ಸಂಭ್ರಮದಲ್ಲಿ ಭಾಗಿಯಾಗಬೇಕು.

● ಬಾಲಿವುಡ್ ಇತ್ತೀಚೆಗೆ ದಕ್ಷಿಣದತ್ತ ದಾಪುಗಾಲು ಇಡುತ್ತಿದೆ ಅಲ್ಲವೇ...

ಮೊದಲಿನಿಂದಲೂ ಬಾಲಿವುಡ್ ಕಲಾವಿದರೂ ದಕ್ಷಿಣ ಭಾರತದ ಸಿನಿಮಾಗಳಲ್ಲಿ ನಟಿಸುತ್ತಿದ್ದರು. ಇತ್ತೀಚೆಗೆ ಈ ಪ್ರಮಾಣ ಹೆಚ್ಚಾಗಿದೆ ಅಷ್ಟೇ. ನಾನು ಇದನ್ನು ಉತ್ತಮ ಬೆಳವಣಿಗೆಯಾಗಿ ನೋಡುತ್ತೇನೆ. ಉತ್ತಮವಾದ ಸಹಯೋಗವಿದು. ಪರಸ್ಪರ ಗೌರವಿಸುವ ಗುಣ ಹೆಚ್ಚಾಗಿದೆ. ಒಬ್ಬರ ಸಿನಿಮಾವನ್ನು ಇನ್ನೊಬ್ಬರು ಶ್ಲಾಘಿಸುವುದು, ಸಿನಿಮಾ ಬಗ್ಗೆ ಹೆಮ್ಮೆ ವ್ಯಕ್ತಪಡಿಸುವುದೂ ಹೆಚ್ಚಾಗಿದೆ.

● ಸಲ್ಮಾನ್ ಖಾನ್‌ಗೆ ಆ್ಯಕ್ಷನ್ ಕಟ್ ಹೇಳುವ ಯೋಚನೆ ಯಾವ ಹಂತದಲ್ಲಿದೆ? ಆ ಕಡೆ ಮತ್ತೆ ಯಾವಾಗ ಹೆಜ್ಜೆ?

ಸಲ್ಮಾನ್ ಖಾನ್ ಅವರು ನನಗೇನೂ ಹೊಸಬರಲ್ಲ. ನಮ್ಮ ಸ್ನೇಹ ಮೊದಲಿನಿಂದಲೂ ಇದೆ. ಸಿನಿಮಾ ಕುರಿತು ಚರ್ಚೆಗಳು ನಡೆದಿವೆ. ಸದ್ಯ ಅವರೂ ಅವರ ಪ್ರೊಜೆಕ್ಟ್ಸ್‌ನಲ್ಲಿ ತಲ್ಲೀನರಾಗಿದ್ದಾರೆ. ನಾನೂ ಕೂಡಾ. ಸಮಯ ಕೂಡಿಬಂದಾಗ ಎಲ್ಲವೂ ಆಗುತ್ತದೆ. ಸದ್ಯಕ್ಕೆ ಪ್ರಾಥಮಿಕ ಹಂತದ ಚರ್ಚೆ ನಡೆದಿದೆಯಷ್ಟೆ. ಹೆಚ್ಚಿನ ಬೆಳವಣಿಗೆ ಈ ವಿಚಾರದಲ್ಲಿ ಆಗಿಲ್ಲ.

‘ರಣ್’, ‘ರಕ್ತಚರಿತ್ರ’ದಂಥ ಗ್ರೇ ಶೇಡ್ ಹೊಂದಿರುವ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ನಾನೂ ಇಷ್ಟಪಡುತ್ತೇನೆ. ಐ ಲವ್ ಮೈಸೆಲ್ಫ್ ಇನ್ ದಾಟ್ ರೋಲ್ಸ್. ಆಯಾ ನಿರ್ದೇಶಕರು ನನ್ನನ್ನು ಹೇಗೆ ನೋಡಿದ್ದಾರೋ ಆ ರೀತಿಯ ಪಾತ್ರಗಳನ್ನು ನೀಡಿದ್ದಾರೆ. ಬೇರೆ ಬೇರೆ ಕಥೆಗಳನ್ನು ನನಗಾಗಿ ಬರೆಯುತ್ತಿದ್ದಾರೆ. ಜನರು ಹಾಗೂ ನಾನೂ ಬಯಸುತ್ತಿರುವುದು ಆದಷ್ಟು ಬೇಗ ಆಗುತ್ತದೆ. ಉತ್ತರದ ಕಡೆಗೊಂದು ಪಯಣ ಇದೆ...ಹೆಚ್ಚಿನ ಮಾಹಿತಿ ಮುಂದೆ ನೀಡುತ್ತೇನೆ.

● ಮುಂದಿನ ಸಿನಿಮಾಗಳು?


‘ಬಿಲ್ಲ ರಂಗ ಬಾಷಾ’ ಮುಂದಿನ ಪ್ರೊಜೆಕ್ಟ್. ಕಥೆಯೆಲ್ಲ ಸಿದ್ಧವಿದೆ. ಸೆಟ್ ನಿರ್ಮಾಣ, ಬಜೆಟ್, ಚಿತ್ರತಂಡ ಹೀಗೆ ಸಿದ್ಧತೆಗೇ ಹಲವು ತಿಂಗಳು ಬೇಕು. ಇದೊಂದು ಬಿಗ್‌ಬಜೆಟ್ ಸಿನಿಮಾ. ಇದರ ನಡುವೆ ಬೇರೆಯ ಸಿನಿಮಾಗಳನ್ನೂ ಮಾಡುತ್ತೇನೆ. ❖



ವಿಕ್ರಾಂತ್ ರೋಣ
ಸುದೀಪ್

ಸಂದರ್ಶನದ ವಿಡಿಯೊ ನೋಡಲು ಸ್ಕ್ಯಾನ್ ಮಾಡಿ | ಪ್ರಜಾವಾಣಿ ನೋಡಿಯೊ

ಡ್ರೈವರ್ ಗೆಟಪ್‌ನಲ್ಲಿ ಐಶ್ವರ್ಯಾ



ಐಶ್ವರ್ಯಾ ರಾಜೇಶ್

ವಿಶಿಷ್ಟ ಪಾತ್ರಗಳ ಮೂಲಕ ತಮಿಳು ಚಿತ್ರರಂಗದಲ್ಲಿ ಮನೆ ಮಾತಾಗಿರುವ ನಟಿ ಐಶ್ವರ್ಯಾ ರಾಜೇಶ್ ನಟನೆಯ ಬಹುನಿರೀಕ್ಷಿತ ಸಿನಿಮಾ ಡ್ರೈವರ್ ಜಮುನಾ ಚಿತ್ರದ ಟ್ರೈಲರ್ ರಿಲೀಸ್ ಆಗಿದ್ದು, ಮಹಿಳೆ ಡ್ರೈವರ್ ವೃತ್ತಿಗೆ ಇಳಿದಾಗ ಆಕೆ ಎದುರಿಸುವ ಸವಾಲುಗಳನ್ನು ಇಡೀ ಟ್ರೇಲರ್‌ನಲ್ಲಿ ಕಟ್ಟಿಕೊಡಲಾಗಿದೆ. ಕನ್ನಡದಲ್ಲಿ ಈ ಟ್ರೇಲರನ್ನು ಬಹುಭಾಷಾ ನಟ ಕಿಶೋರ್ ಬಿಡುಗಡೆ ಮಾಡಿದರು.

'ವತ್ತಿಕುಚ್ಚಿ’ ಸಿನಿಮಾ ಖ್ಯಾತಿಯ ಪಾ.ಕನ್ನಿನ್ ನಿರ್ದೇಶನಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಐಶ್ವರ್ಯಾ ರಾಜೇಶ್ ಕ್ಯಾಬ್ ಡ್ರೈವರ್ ಆಗಿ ಬಣ್ಣ ಹಚ್ಚಿದ್ದಾರೆ. ತಾರಾಬಳಗದಲ್ಲಿ ಆಡುಕಳಂ ನರೇನ್, ಶ್ರೀ ರಂಜನಿ, ‘ಸ್ಟ್ಯಾಂಡ್ ಅಪ್ ಕಾಮಿಡಿಯನ್’ ಅಭಿಷೇಕ್, ‘ರಾಜಾ ರಾಣಿ’ ಸಿನಿಮಾ ಖ್ಯಾತಿಯ ಪಾಂಡಿಯನ್, ಕವಿತಾ ಭಾರತಿ, ಮಣಿಕಂದನ್, ರಾಜೇಶ್ ಸೇರಿದಂತೆ ಹಲವರು ನಟಿಸಿದ್ದಾರೆ. ಗೋಕುಲ್ ಬೆನೊಯ್ ಛಾಯಾಗ್ರಹಣ, ಗಿಬ್ರಾನ್ ಸಂಗೀತ ಜವಾಬ್ದಾರಿ ಹೊತ್ತುಕೊಂಡಿದ್ದು, ಎಸ್.ಪಿ.ಚೌದರಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಡ್ರೈವರ್ ಜಮುನಾ’ ಪಾತ್ರಕ್ಕಾಗಿ ಐಶ್ವರ್ಯಾ ಕ್ಯಾಬ್ ಡ್ರೈವರ್ ಮಹಿಳೆಯರನ್ನು ಭೇಟಿ ಮಾಡಿ ಅವರ ಹಾವ-ಭಾವವನ್ನು ಅಳವಡಿಸಿಕೊಂಡಿದ್ದಾರೆ. ತಮಿಳು, ತೆಲುಗು, ಕನ್ನಡ ಹಾಗೂ ಮಲಯಾಳಂನಲ್ಲಿ ಈ ಚಿತ್ರ ಬಿಡುಗಡೆಯಾಗಲಿದೆ. ❖



ಸುಭಾಷಿತ

ಸಂಸ್ಕೃತಿ ಎಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು– ಸ್ವಗುಣ, ಪರಗುಣಗಳ ಸಮ್ಮಿಶ್ರಿತ ಕಾಂತಿ.

– ಡಿ.ವಿ.ಜಿ.

ಭ್ರಷ್ಟಾಚಾರದ ಬ್ರಹ್ಮಾಂಡ ರೂಪ ತನಿಖೆಗೆ ಬೇಕು ತಾರ್ಕಿಕ ಅಂತ್ಯ

ಹಗರಣಗಳಲ್ಲಿ ಭಾಗಿಯಾದ ಆರೋಪದ ಮೇಲೆ ಸರ್ಕಾರದ ಇಬ್ಬರು ಹಿರಿಯ ಅಧಿಕಾರಿಗಳು– ಒಬ್ಬರು ಐಎಎಸ್, ಮತ್ತೊಬ್ಬರು ಐಪಿಎಸ್ ಅಧಿಕಾರಿ– ಒಂದೇ ದಿನ ಬಂಧನಕ್ಕೆ ಒಳಗಾಗಿರುವುದು ರಾಜ್ಯದಲ್ಲಿ ಭ್ರಷ್ಟಾಚಾರದ ಬೇರುಗಳು ಎಷ್ಟೊಂದು ಆಳಕ್ಕಿಳಿದಿವೆ ಎನ್ನುವುದಕ್ಕೆ ಜ್ವಲಂತ ನಿದರ್ಶನ. ತನಿಖಾ ತಂಡಗಳ ಮೂಗನ್ನು ಹೈಕೋರ್ಟ್ ಒಂದುವೇಳೆ ಅಷ್ಟು ಗಟ್ಟಿಯಾಗಿ ಹಿಡಿಯದೇ ಹೋಗಿದ್ದರೆ ಈ ಬಂಧನಗಳು ಇಷ್ಟು ಬೇಗ ಆಗುತ್ತಿದ್ದವೇ ಎಂಬ ಪ್ರಶ್ನೆ ಇದೆ. ಭ್ರಷ್ಟಾಚಾರ ನಿಗ್ರಹ ವ್ಯವಸ್ಥೆಯನ್ನು ಚುರುಕುಗೊಳಿಸಲು ಎಂತಹ ನೂಕುಬಲ ಬೇಕಿದೆ ಎಂಬುದನ್ನೂ ಈ ಪ್ರಕರಣಗಳು ಎತ್ತಿತೋರಿಸಿವೆ. ಪಿಎಸ್ಐ ನೇಮಕಾತಿ ಹಗರಣದಲ್ಲಿ ಭಾಗಿಯಾಗಿ ನಿರ್ದಿಷ್ಟ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ ಅನುಕೂಲ ಮಾಡಿಕೊಟ್ಟ ಆರೋಪದ ಮೇಲೆ ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರೂ ಆಗಿದ್ದ ಎಡಿಜಿಪಿ ಅಮೃತ್ ಪೌಲ್ ಅವರನ್ನು ಸಿಐಡಿ ಬಂಧಿಸಿದೆ. ಪರೀಕ್ಷೆಯಲ್ಲಿ ಅಗತ್ಯ ಅಂಕಗಳೊಂದಿಗೆ ತೇರ್ಗಡೆ ಹೊಂದಲು ಹಲವು ಅಭ್ಯರ್ಥಿಗಳು ತಲಾ ₹ 80 ಲಕ್ಷದವರೆಗೆ ಲಂಚ ನೀಡಿದ್ದಾರೆ ಎಂದು ಹೇಳಲಾಗಿದೆ.



ಭ್ರಷ್ಟಾಚಾರ ನಿಗ್ರಹ ವ್ಯವಸ್ಥೆಯನ್ನು ಚುರುಕುಗೊಳಿಸಲು ಎಂತಹ ನೂಕುಬಲ ಬೇಕಿದೆ ಎಂಬುದನ್ನು ರಾಜ್ಯದ ಇಬ್ಬರು ಹಿರಿಯ ಅಧಿಕಾರಿಗಳ ಬಂಧನ ಪ್ರಕರಣಗಳು ಎತ್ತಿತೋರುತ್ತಿವೆ

‘ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಆರಂಭದಲ್ಲಿ ಗಟ್ಟಿಯಾಗಿ ಪ್ರತಿಪಾದಿಸಿದ್ದನ್ನು ರಾಜ್ಯದ ಜನ ಇನ್ನೂ ಮರೆತಿಲ್ಲ. ಆದರೆ, ಪರೀಕ್ಷೆಯಲ್ಲಿ ನಡೆದ ಅಕ್ರಮಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಗಳು ಬಯಲುಗೊಳ್ಳುತ್ತಾ ಹೋದಂತೆ ತನಿಖೆಗೆ ಆದೇಶಿಸದೆ ರಾಜ್ಯ ಸರ್ಕಾರದ ಮುಂದೆ ಬೇರೆ ಆಯ್ಕೆಯೇ ಇರಲಿಲ್ಲ. ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಅಧಿಕಾರಿಯ ಸುತ್ತಲೇ ಈಗ ಹಗರಣ ಸುತ್ತಿಕೊಂಡಿದೆ. ಪಿಎಸ್ಐ ನೇಮಕಾತಿ ಹಗರಣದಲ್ಲಿ ₹100 ಕೋಟಿಗೂ ಅಧಿಕ ಮೊತ್ತ ಕೈಯಿಂದ ಕೈಗೆ ಬದಲಾಗಿದೆ ಎಂದು ಹೇಳಲಾಗುತ್ತಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಇನ್ನೂ ಉನ್ನತ ಹುದ್ದೆಯಲ್ಲಿರುವವರು ಈ ಹಗರಣದಲ್ಲಿ ಭಾಗಿಯಾಗಿದ್ದಾರೆಯೇ ಅಥವಾ ಪೌಲ್ ಅವರ ಹಂತಕ್ಕೆ ಅದು ಕೊನೆಗೊಂಡಿದೆಯೇ ಎನ್ನುವುದು. ಹಿರಿಯ ರಾಜಕಾರಣಿಗಳ ಸಂಬಂಧಿಕರೂ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ವಿರೋಧ ಪಕ್ಷಗಳು ಆಪಾದನೆ ಮಾಡುತ್ತಿವೆ. ಅದೊಂದು ವೇಳೆ ನಿಜವೇ ಆಗಿದ್ದರೆ ಕಾನೂನಿನ ಕೈಗಳು ಅವರತನಕ ತಲುಪುವುದು ಸಂಶಯಾಸ್ಪದ. ಹಿಂದೆ ಬೆಂಗಳೂರಿನ ಪೊಲೀಸ್ ಕಮಿಷನರ್ ಆಗಿದ್ದ ಎಎಪಿ ಮುಖಂಡ ಭಾಸ್ಕರ್ ರಾವ್, ‘ಅಮ್ರಿತ್ ಪೌಲ್ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಎಲ್ಲವನ್ನೂ ಬಹಿರಂಗಗೊಳಿಸಬಹುದು, ಇಲ್ಲದಿದ್ದರೆ ಅವರ ಸೂತ್ರಧಾರರೇ ಅವರನ್ನು ರಕ್ಷಿಸುತ್ತಾರೆ’ ಎಂದು ಟ್ವೀಟ್ ಮಾಡಿರುವುದು ಬಲು ಅರ್ಥಗರ್ಭಿತ.

ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಜೆ. ಮಂಜುನಾಥ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮತ್ತೊಂದು ಪ್ರಕರಣದಲ್ಲಿ ಬಂಧಿಸಿದೆ. ಲಂಚ ಪ್ರಕರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಈ ಅಧಿಕಾರಿಗೆ ‘ರಕ್ಷಣೆ’ ನೀಡಲಾಗುತ್ತಿದೆ ಎಂದು ಎಸಿಬಿಗೆ ಹೈಕೋರ್ಟ್ ಛೀಮಾರಿ ಹಾಕಿದ ಮೇಲೆಯೇ ಈ ಬಂಧನವಾಗಿದೆ. ಲಂಚ ಪಡೆಯುವಾಗಲೇ ಸಿಕ್ಕಿಬಿದ್ದಿದ್ದ ಉಪ ತಹಶೀಲ್ದಾರ್ ಹಾಗೂ ಗುತ್ತಿಗೆ ನೌಕರ ಇಬ್ಬರೂ ತಪ್ಪೊಪ್ಪಿಕೊಂಡು, ಭೂವ್ಯಾಜ್ಯದಲ್ಲಿ ಅನುಕೂಲಕರ ತೀರ್ಪು ನೀಡಲು ಜಿಲ್ಲಾಧಿಕಾರಿ ಪರವಾಗಿ ಆ ಲಂಚವನ್ನು ಪಡೆದಿದ್ದಾಗಿ ಹೇಳಿಕೆ ಕೊಟ್ಟಿದ್ದರು. ‘ಭ್ರಷ್ಟಾಚಾರದ ನೆಲೆ’ ಎಂದು ಕುಖ್ಯಾತಿ ಗಳಿಸಿದ ಜಿಲ್ಲಾಧಿಕಾರಿ ಕಚೇರಿ ಬೇಡದ ಕಾರಣಕ್ಕಾಗಿ ಸುದ್ದಿಯಲ್ಲಿರುವುದು ಇದೇ ಮೊದಲ ಸಲವೇನೂ ಅಲ್ಲ. ಜಿಲ್ಲಾಧಿಕಾರಿ ಹುದ್ದೆಯನ್ನು ದುರುಪಯೋಗ ಮಾಡಿಕೊಂಡು ಐಎಂಎ ಹಗರಣದಲ್ಲಿ ಭಾಗಿಯಾದ ಆರೋಪ ಹೊತ್ತಿದ್ದ ಬಿ.ಎಂ. ವಿಜಯಶಂಕರ್ ಕೂಡ ಬಂಧನಕ್ಕೆ ಒಳಗಾಗಿದ್ದರು. ಬಳಿಕ ಅವರು ಆತ್ಮಹತ್ಯೆ ಮಾಡಿಕೊಂಡರು. ನಕಲಿ ಭೂದಾಖಲೆ ಸೃಷ್ಟಿಸಿದ ಆರೋಪದ ಮೇಲೆ, ಜಿಲ್ಲಾಧಿಕಾರಿಯಾಗಿದ್ದ ಎಂ.ಕೆ. ಅಯ್ಯಪ್ಪ ಕೂಡ ಬಂಧನಕ್ಕೆ ಒಳಗಾಗಿದ್ದರು.

ಭ್ರಷ್ಟಾಚಾರದ ಬ್ರಹ್ಮಾಂಡವನ್ನು ನೋಡಿಯೇ ನ್ಯಾಯಮೂರ್ತಿ ಎಚ್.ಬಿ. ಸಂದೇಶ್ ಅವರು, ‘ಎಸಿಬಿಯೇ ಭ್ರಷ್ಟರ ಅತಿದೊಡ್ಡ ಕೂಪವಾಗಿದೆ. ಎಸಿಬಿ ಕಚೇರಿಗಳೆಲ್ಲ ‘ಕಲೆಕ್ಷನ್ ಸೆಂಟರ್’ಗಳಾಗಿವೆ. ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಹಿಡಿಯೋದು ಬಿಟ್ಟು ಬಾಲಂಗೋಚಿಗಳನ್ನು ಹಿಡಿದುಕೊಂಡು ಕೋರ್ಟ್‌ಗೆ ಬರುತ್ತೀರಿ’ ಎಂದು ಎಸಿಬಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಇಚ್ಛಾಶಕ್ತಿ ರಾಜಕಾರಣಿಗಳಲ್ಲಿ ಇಲ್ಲ. ಏಕೆಂದರೆ, ಭ್ರಷ್ಟವ್ಯವಸ್ಥೆಯ ಬಹುದೊಡ್ಡ ಫಲಾನುಭವಿಗಳು ಅವರೇ ಆಗಿದ್ದಾರೆ. ಎಸಿಬಿಯು ಎಲ್ಲಿಯವರೆಗೆ ಅವರ ನಿಯಂತ್ರಣದಲ್ಲಿರುವುದೋ ಅಲ್ಲಿಯವರೆಗೆ ಅದು ಕೂಡ ಭ್ರಷ್ಟಾಚಾರವನ್ನು ನಿಯಂತ್ರಿಸುವ ಕೆಲಸ ಮಾಡುತ್ತದೆ ಎಂಬುದನ್ನು ನಂಬುವುದು ಕಷ್ಟ. ಇಂತಹ ಸನ್ನಿವೇಶದಲ್ಲಿ ಕೋರ್ಟ್‌ವೊಂದೇ ಆಶಾಕಿರಣ. ಅದು ತನ್ನ ಹೊಣೆಯನ್ನು ನಿಭಾಯಿಸಿದ್ದರಿಂದಲೇ ಮೇಲಿನ ಎರಡೂ ಪ್ರಕರಣಗಳಲ್ಲಿ ಆರೋಪಿಗಳ ಬಂಧನವಾಗಿದೆ. ಆದರೆ, ತನ್ನಲ್ಲಿ ದಾಖಲಾದ ಪ್ರಕರಣಗಳಿಗೆ ಸೀಮಿತವಾಗಿ ಕ್ರಮ ಜರುಗಿಸುವಂತೆ ಕೋರ್ಟ್ ನೋಡಿಕೊಳ್ಳಬಹುದೇ ವಿನಾ ಇಡೀ ಭ್ರಷ್ಟ ವ್ಯವಸ್ಥೆಯನ್ನು ಅದೇ ಮೂಲೋತ್ಪಾಟನೆ ಮಾಡುವುದು ಪ್ರಾಯೋಗಿಕವಾಗಿ ಅಸಾಧ್ಯ. ಮೇಲಿನ ಎರಡೂ ಬಂಧನಗಳು ಆಯಾ ಪ್ರಕರಣವನ್ನು ತಾರ್ಕಿಕ ಅಂತ್ಯ ಮುಟ್ಟಿಸಲು ನೆರವಾಗಬಹುದೇ ಎಂಬುದು ಸದ್ಯದ ಮಟ್ಟಿಗೆ ಯಕ್ಷಪ್ರಶ್ನೆ.

ದಿನದ ಟ್ವೀಟ್

ರಾಜಕೀಯದ ದುಃಸ್ಥಿತಿ



ವಿವಿಧ ಸ್ಥಳಗಳಲ್ಲಿ ದಾಖಲಾಗುತ್ತಿರುವ ಎಫ್‌ಐಆರ್‌ಗಳ ಸಂಖ್ಯೆ ಗಮನಿಸಿ ಹೇಳುವುದಾದರೆ, ಎಲ್ಲ ರಾಜಕೀಯ ಪಕ್ಷಗಳೂ ಈಗ ಪ್ರತ್ಯೇಕ ಎಫ್‌ಐಆರ್ ದಾಖಲಾತಿ ವಿಭಾಗವನ್ನೇ ಹೊಂದಬೇಕಾದ ಅಗತ್ಯವಿದೆ. ಎಫ್‌ಐಆರ್ ದಾಖಲಿಸುವುದೇ ಒಂದು ಗುರಿ ಎಂಬಂತಾಗಿದೆ. ಈ ದೇಶದ ರಾಜಕೀಯವು ಈ ಮಟ್ಟಕ್ಕೆ ಇಳಿಯುತ್ತದೆ ಎಂದು ಯಾವತ್ತೂ ಭಾವಿಸಿರಲಿಲ್ಲ.

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ



ಅತ್ಯಂತ ಸಂವೇದನಾರಹಿತ ಹೇಳಿಕೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕುಸಿಯುವುದನ್ನು ತಡೆಯಲು ಬಿಸಿಯೂಟ, ಸೈಕಲ್, ಶೂ, ಸಾಕ್ಸ್, ಪಠ್ಯಪುಸ್ತಕ ಪೂರೈಕೆ ಹೀಗೆ ಹತ್ತಾರು ಯೋಜನೆಗಳನ್ನು ಹಿಂದಿನ ಎಲ್ಲ ಸರ್ಕಾರಗಳೂ ಬದ್ಧತೆಯಿಂದ ನಡೆಸಿಕೊಂಡು ಬಂದಿವೆ. ಇವೆಲ್ಲದರ ಕಾರಣದಿಂದಾಗಿಯೇ ಇಂದಿಗೂ ಶೇ 50ಕ್ಕೂ ಹೆಚ್ಚು ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾರೆ.

(ಮಕ್ಕಳು ಶಾಲೆಗೆ ಬರೋದು ಶೂ, ಸಾಕ್ಸ್‌ಗಳಿಗಲ್ಲ ಎಂಬ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 8-7-1997

● ಲಾಲೂ ಬಂಧಿಸಲು ಸಿಬಿಐ ಸಿದ್ಧ, ಆದರೆ...

ಪಟ್ನಾ, ಜುಲೈ 7 (ಪಿಟಿಐ)– ರಾಜ್ಯ ಸರ್ಕಾರವು ಕೇಂದ್ರ ತನಿಖಾ ದಳ (ಸಿಬಿಐ) ಸಿಬ್ಬಂದಿಗೆ ರಕ್ಷಣೆ ಒದಗಿಸಿದರೆ ಹಾಗೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ಕೈಗೊಂಡರೆ, ಮೇವು ಹಗರಣದಲ್ಲಿ ಆರೋಪಿಗಳಾಗಿರುವ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಸೇರಿದಂತೆ ಹಿರಿಯ ರಾಜಕಾರಣಿಗಳನ್ನು ಬಂಧಿಸಲು ಒಂದು ನಿಮಿಷವೂ ತಡ ಮಾಡುವುದಿಲ್ಲ ಎಂದು ಪಟ್ನಾ ಹೈಕೋರ್ಟ್‌ಗೆ ಸಿಬಿಐ ಇಂದು ತಿಳಿಸಿತು.

ಮೇವು ಹಗರಣದ ಸಂಬಂಧದಲ್ಲಿ ರಾಜ್ಯದ ಹಿರಿಯ ರಾಜಕೀಯ ಧುರೀಣರನ್ನು ಬಂಧಿಸಿದಲ್ಲಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ವ್ಯಾಪಕ ಸಮಸ್ಯೆ ಉದ್ಭವಿಸುವುದೇ ಎಂಬ ಬಗ್ಗೆ ಹಾಗೂ ಸಿಬಿಐನ ಇತರ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಸರ್ಕಾರಕ್ಕೆ ಹೈಕೋರ್ಟ್ ಸೂಚನೆ ನೀಡಿತು.

● ಕೃಷ್ಣಾದಲ್ಲಿ ಅನಿರೀಕ್ಷಿತ ಮಹಾಪೂರ

ವಿಜಾಪುರ, ಜುಲೈ 7 – ಕಳೆದ ಒಂದು ವಾರದಿಂದ ಕೃಷ್ಣಾ ನದಿಯಲ್ಲಿ ಅನಿರೀಕ್ಷಿತ ಮಹಾಪೂರದಿಂದಾಗಿ ಆಲಮಟ್ಟಿ ಜಲಾಶಯ ಭರ್ತಿಯಾಗಿದ್ದು, ಸುತ್ತಮುತ್ತಲಿನ ಸುಮಾರು 50 ಗ್ರಾಮಗಳು ಹಿನ್ನೀರಿನ ಸೆಳೆತಕ್ಕೆ ಸಿಲುಕಿವೆ.

50 ವರ್ಷಗಳ ಹಿಂದೆ

ಶನಿವಾರ, 8-7-1972

● ಶರಾವತಿ ಹಗರಣ – ಸತ್ಯ ಹೊರತರಲು ಸಕಾಲದಲ್ಲಿ ಸೂಕ್ತ ಕ್ರಮ: ಎಚ್‌ಎಂಸಿ

ಬೆಂಗಳೂರು, ಜುಲೈ 7 – ಶರಾವತಿ ಪ್ರಕರಣದಲ್ಲಿ ತಮ್ಮನ್ನು ತಪ್ಪಿತಸ್ಥರೆಂದು ಆಪಾದಿಸಿ ನ್ಯಾಯಾಂಗ ತನಿಖೆಗೆ ಆಗ್ರಹಪಡಿಸುತ್ತಿರುವವರಿಗೆ ವಿಧಾನಸಭೆಯಲ್ಲಿ ಇಂದು ಬಿರುಸಾಗಿ ವಾಪಸು ಕೊಟ್ಟ ಲೋಕೋಪಯೋಗಿ ಮಂತ್ರಿ ಶ್ರೀ ಎಚ್.ಎಂ. ಚನ್ನಬಸಪ್ಪ ಅವರು, ‘ಸತ್ಯ ಹೊರತರುವುದಕ್ಕೆ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದೇ ಸರ್ಕಾರದ ನಿಲುವಾಗಿದೆ’ ಎಂದು ಸ್ಪಷ್ಟಪಡಿಸಿದರು.

ತನಿಖೆಗೆ ಆಗ್ರಹವೆಬ್ಬಿಸಿರುವ ಸಂಸ್ಥಾ ಕಾಂಗ್ರೆಸ್ಸಿಗರನ್ನು ಪ್ರತ್ಯೇಕವಾಗಿ ಒಂದು ಘಟ್ಟದಲ್ಲಿ ಬೊಟ್ಟು ಮಾಡಿ, ‘ಲೋಕದಲ್ಲಿ ಜನ ನಿಮ್ಮನ್ನು ನಂಬುತ್ತಾರಾ?’ ಎಂದು ಕೇಳಿದ ಎಚ್.ಎಂ.ಸಿ., ‘1962 ಮತ್ತು 67ರಲ್ಲಿ ನಾನೇ ನನ್ನ ವಿರುದ್ಧವೇ ವಿಚಾರಣೆ ಏರ್ಪಡಿಸಿ ಅಂದೆ, ಆಗ ನೀವು ಯಾಕೆ ಮಾಡಲಿಲ್ಲ? ನೀವೇ ಅಧಿಕಾರದಲ್ಲಿದ್ದಿರಿ’ ಎಂದು ಕಾಂಗ್ರೆಸ್ ಸದಸ್ಯರ ಕರತಾಡನಗಳ ಮಧ್ಯೆ ಹೇಳಿದರು.

ಎಂಟು ತಿಂಗಳಲ್ಲಿ ಆರು ನಾಯಕರ ಆಟಕ್ಕೆ ವೇದಿಕೆಯಾದ ಭಾರತ ಕ್ರಿಕೆಟ್ ತಂಡ

ಟೆಸ್ಟ್ ಸೋಲು ಕಲಿಸಿದ ಪಾಠಗಳು



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್ ಅಂಗಳದಲ್ಲಿ ಈಚೆಗೆ ನಡೆದ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ಜೋ ರೂಟ್ ಮತ್ತು ಭಾರತದ ವಿರಾಟ್ ಕೊಹ್ಲಿ ಅವರ ಮೇಲೆ ಎಲ್ಲರ ದೃಷ್ಟಿ ನೆಟ್ಟಿತ್ತು. ಏಕೆಂದರೆ, ನಾಯಕತ್ವದ ಒತ್ತಡ ಕಳಚಿಕೊಂಡಿರುವ ಇಬ್ಬರೂ ತಮ್ಮ ಬ್ಯಾಟಿಂಗ್ ವೈಭವ ಮೆರೆಯುವ ನಿರೀಕ್ಷೆ ಮೂಡಿಸಿದ್ದರು. ಆದರೆ ಅದರಲ್ಲಿ ರೂಟ್ ಮಾತ್ರ ಕ್ರಿಕೆಟ್‌ಪ್ರೇಮಿಗಳ ಮನಗೆದ್ದರು.

ಆ್ಯಷಸ್ ಸರಣಿಯಲ್ಲಿ ಅನುಭವಿಸಿದ ವೈಫಲ್ಯವು ರೂಟ್ ನಾಯಕತ್ವಕ್ಕೆ ಕುತ್ತು ತಂದಿತ್ತು. ಕೊಹ್ಲಿ ಅವರು ಬಿಸಿಸಿಐಗೆ ‘ಬುದ್ಧಿ’ ಕಲಿಸಲು ಟೆಸ್ಟ್ ತಂಡದ ನಾಯಕತ್ವ ತೊರೆದರು. ನಾಯಕತ್ವ ಬಿಟ್ಟುಕೊಟ್ಟ ಬಳಿಕ ರೂಟ್ ಶತಕಗಳ ಮೂಲಕ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದಾರೆ. ಇದರಿಂದಾಗಿ, ನ್ಯೂಜಿಲೆಂಡ್ ಮತ್ತು ಭಾರತದ ಎದುರಿಗಿನ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಜಯಿಸಿತು. ಬೆನ್ ಸ್ಟೋಕ್ಸ್ ನಾಯಕತ್ವಕ್ಕೆ ರೂಟ್ ಬಲ ತುಂಬಿದರು. ಇಂಗ್ಲೆಂಡ್ ಕೋಚ್ ಆಗಿ ಬ್ರೆಂಡನ್ ಮೆಕ್ಲಮ್ ಗಮನ ಸೆಳೆಯಲು ಇದು ನೆರವಾಯಿತು. ಆದರೆ, ಭಾರತದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಮತ್ತೆ ನಿರಾಶೆಯೇ ಉಳಿಯಿತು.

ಆದರೆ ಈ ಸೋಲು ಭಾರತಕ್ಕೆ ದುಬಾರಿಯಾಗುವ ಸಾಧ್ಯತೆ ಇದೆ. ಏಕೆಂದರೆ, ಪ್ರತೀ ಪಂದ್ಯವೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಭಾಗವಾಗಿದೆ. ಒಂದೊಂದು ಗೆಲುವೂ ಮಹತ್ವದ್ದು. ಈ ಸೋಲಿನಿಂದಾಗಿ ಭಾರತವು ಡಬ್ಲ್ಯುಟಿಸಿ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕಿಳಿಯಿತು. ಇದನ್ನು ಸರಿದೂಗಿಸಬೇಕಾದರೆ ಮುಂದಿನ ಸರಣಿಗಳಲ್ಲಿ ಗೆಲುವಿನ ಒತ್ತಡ ಹೆಚ್ಚಲಿದೆ. ಆದ್ದರಿಂದಲೇ ಇಲ್ಲಿ ಆಟಗಾರರ ವೈಫಲ್ಯಗಳ ಜೊತೆಗೆ ರಾಷ್ಟ್ರೀಯ ಆಯ್ಕೆ ಸಮಿತಿ ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೆಲವು ನೀತಿಗಳ ಕುರಿತ ಮಂಥನವೂ ಅವಶ್ಯಕ.

ಮೊದಲನೆಯದಾಗಿ, ವಿರಾಟ್ ನಂತರ ತಂಡಕ್ಕೆ ಗಟ್ಟಿ ನಾಯಕತ್ವ ಸಿಗಲಿಲ್ಲ ಎಂಬುದು ಮೇಲ್ನೋಟಕ್ಕೇ ಕಾಣುತ್ತಿದೆ. ಈ ಎಂಟು ತಿಂಗಳಲ್ಲಿ ಆರು ನಾಯಕರನ್ನು ತಂಡ ಕಂಡಿದೆ. ಬಲಾಢ್ಯ ಇಂಗ್ಲೆಂಡ್ ತಂಡದ ಎದುರು ಆಡುವಾಗ ಸಮರ್ಥ ಮತ್ತು ಅನುಭವಿ ನಾಯಕತ್ವದ ಅವಶ್ಯಕತೆ ತಂಡಕ್ಕೆ ಇತ್ತು. ಕೋವಿಡ್ ದೃಢಪಟ್ಟಿದ್ದರಿಂದ ರೋಹಿತ್ ಶರ್ಮಾ ಬದಲಿಗೆ ನಾಯಕತ್ವದ ಅನುಭವವೇ ಇಲ್ಲದ ಜಸ್‌ಪ್ರೀತ್ ಬೂಮ್ರಾ ಅವರಿಗೆ ಹೊಣೆ ನೀಡಲಾಯಿತು. ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯ ಮೊದಲ ನಾಲ್ಕು ಪಂದ್ಯಗಳಲ್ಲಿ 2–1ರ ಮುನ್ನಡೆ ಸಾಧಿಸಿದ್ದಾಗ ನಾಯಕರಾಗಿದ್ದ ಕೊಹ್ಲಿಗೇ ಈ ಪಂದ್ಯದಲ್ಲಿ ಹೊಣೆ ನೀಡಬಹುದಿತ್ತಲ್ಲವೇ? ಇಲ್ಲದಿದ್ದರೆ ಭವಿಷ್ಯದ ನಾಯಕನೆಂದೇ ಹೇಳಲಾಗುತ್ತಿರುವ ರಿಷಭ್ ಪಂತ್ ಅವರಿಗೆ ಅವಕಾಶ ಕೊಡಬಹುದಿತ್ತಲ್ಲವೇ? ಐಪಿಎಲ್ ಮತ್ತು ಕೆಲವು ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ಒಂದಿಷ್ಟು ಅನುಭವ ಪಂತ್‌ಗೆ ಇತ್ತು. ಕಪಿಲ್ ದೇವ್ ನಂತರ ತಂಡದ ನಾಯಕತ್ವ ವಹಿಸಿದ ವೇಗದ ಬೌಲರ್ ಎಂಬ ಹೆಗ್ಗಳಿಕೆ ಬೂಮ್ರಾಗೆ ದಕ್ಕಿತು. ಆದರೆ ಈ ಪಂದ್ಯದ ಸೋಲು ಅವರ ನಾಯಕತ್ವದ ಸಾಮರ್ಥ್ಯಕ್ಕೆ ಅಳತೆಗೋಲಾಗಬಾರದಲ್ಲವೇ?

ಎರಡನೆಯದಾಗಿ, ಆರಂಭಿಕ ಬ್ಯಾಟರ್‌ಗಳ ಸಂಯೋಜನೆಯಲ್ಲಿ ತಂಡವು ಕೈಸುಟ್ಟುಕೊಂಡಿತು. ರೋಹಿತ್ ಮತ್ತು ರಾಹುಲ್ ಅಲಭ್ಯರಾಗಿದ್ದ ಕಾರಣ ಮಯಂಕ್ ಅವರನ್ನು ಕೊನೆಕ್ಷಣದಲ್ಲಿ ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು. ಆದರೆ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗಲಿಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ರೂಢಿ ಇರುವ ಚೇತೇಶ್ವರ್ ಪೂಜಾರ ಅವರು ಶುಭಮನ್ ಗಿಲ್ ಜೊತೆಗೆ ಇನಿಂಗ್ಸ್ ಆರಂಭಿಸಿದರು. ಪೂಜಾರ ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದಷ್ಟೇ ಸಾಧನೆ. ಈ ಹಿಂದೆ ಗಿಲ್ ಮತ್ತು ಮಯಂಕ್ ಅವರು ಉತ್ತಮ ಅಡಿಪಾಯ ಹಾಕಿದ್ದ ಉದಾಹರಣೆಗಳು ಇವೆ. ಅನುಭವಿಗಳಾದ ಹನುಮವಿಹಾರಿ, ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ನಿರೀಕ್ಷೆ ಹುಸಿಗೊಳಿಸಿದರು. ಗಾಯದಿಂದ ಚೇತರಿಸಿಕೊಂಡು ಬಂದ ಜಡೇಜ ಮತ್ತು ಎಂದಿನಂತೆ ವಿದೇಶಿ ನೆಲದಲ್ಲಿ ಮಿಂಚಿದ ಪಂತ್ ಅವರ ಆಟ ಮಾತ್ರ ಬಹುಕಾಲ ನೆನಪಿನಲ್ಲಿ ಉಳಿಯುವಂತಹದ್ದು.

ಮೂರನೆಯದಾಗಿ, ಬಿಸಿಸಿಐನ ಕಾರ್ಯಭಾರ ನಿರ್ವಹಣೆ ನೀತಿ (ವರ್ಕ್‌ಲೋಡ್ ಮ್ಯಾನೇಜ್‌ಮೆಂಟ್) ಕೂಡ ಎಲ್ಲ ಮಾದರಿಗಳಲ್ಲಿಯೂ ಆಟಗಾರರ ಲಯದ ಮೇಲೆ ಪರಿಣಾಮ ಬೀರುತ್ತಿರುವುದು ಕಾಣುತ್ತಿದೆ. ಈಚೆಗೆ ಬೆಂಗಳೂರಿನಲ್ಲಿ ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರಪ್ರದೇಶದ ಎದುರು ಕರ್ನಾಟಕ ತಂಡದಲ್ಲಿ ಪ್ರಸಿದ್ಧ ಕೃಷ್ಣಗೆ ಆಡಲು ಅವಕಾಶ ನೀಡಿರಲಿಲ್ಲ. ಇಂಗ್ಲೆಂಡ್ ಟೆಸ್ಟ್‌ಗೆ ಅವರನ್ನು ಫಿಟ್ ಆಗಿ ಉಳಿಸಿಕೊಳ್ಳಲು ಬಿಸಿಸಿಐ ಸೂಚಿಸಿತ್ತು. ಆದರೆ, ಪ್ರಸಿದ್ಧಗೆ ಟೆಸ್ಟ್‌ನಲ್ಲಿ ಕಣಕ್ಕಿಳಿಯುವ ಅವಕಾಶ ನೀಡಲಿಲ್ಲ.

ಇನ್ನು ಮೂರು ತಿಂಗಳು ಕಳೆದರೆ ಭಾರತ ತಂಡವು ಆಸ್ಟ್ರೇಲಿಯಾದಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಬೇಕು. ಅದಕ್ಕೂ ಮುನ್ನ ಆಟಗಾರರಿಗೆ ಕೇವಲ ಹದಿನೈದು ಟಿ20 ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಲಿದೆ. ಅನುಭವಿಗಳಿಗೆ ಹೆಚ್ಚು ವಿಶ್ರಾಂತಿ ನೀಡಿದರೆ, ವಿದೇಶಿ ನೆಲದಲ್ಲಿ ಆಡುವ ಅಭ್ಯಾಸ ದೊರೆಯುವುದು ಹೇಗೆ? ಅವರ ಸಾಮರ್ಥ್ಯವನ್ನು ನೆಟ್ಸ್‌ನಲ್ಲಿ ಮಾತ್ರ ಒರೆಗೆ ಹಚ್ಚಲು ಸಾಧ್ಯವೇ? ಪಂದ್ಯಗಳಲ್ಲಿ ಆಡಿದಷ್ಟೂ ಆಟ ಮಾಗುತ್ತದೆ. ವಿಶ್ರಾಂತಿ ಪಡೆದರೆ ಅನುಭವ ಸಿಗುವುದೆಲ್ಲಿಂದ? ಆದರೆ ಇದೇ ತಿಂಗಳು ವೆಸ್ಟ್ ಇಂಡೀಸ್ ಪ್ರವಾಸದಲ್ಲಿಯೂ ರೋಹಿತ್ ಸೇರಿದಂತೆ ಹಲವು ಅನುಭವಿಗಳಿಗೆ ವಿಶ್ರಾಂತಿ ನೀಡಲಾಗಿದೆ. ಶಿಖರ್ ಧವನ್ ನಾಯಕತ್ವ ವಹಿಸಲಿದ್ದಾರೆ. ಈಗ ಪ್ರಯೋಗಕ್ಕೆ ವಿರಾಮವಿಟ್ಟು, ವಿಶ್ವಕಪ್ ತಂಡವನ್ನು ಸಿದ್ಧಗೊಳಿಸಿ ಕಣಕ್ಕಿಳಿಸಲು ಸೂಕ್ತ ಕಾಲ. ಬೇರೆ ದೇಶಗಳ ತಂಡಗಳು ಈಗಾಗಲೇ ಸಿದ್ಧವಾಗಿವೆ.

ಇನ್ನೊಂದೆಡೆ ರೋಹಿತ್‌ಗೆ ನಾಯಕತ್ವದ ಅನುಭವವೂ ಪೂರ್ಣವಾಗಿ ಸಿಗುತ್ತಿಲ್ಲ. ನಾಯಕರಾದ ನಂತರ ಅವರು ವಿಶ್ರಾಂತಿ ಪಡೆದದ್ದೇ ಹೆಚ್ಚು. ಇದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೂ ಗ್ರಾಸವಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಎರಡು ತಿಂಗಳು ದಣಿವಿಲ್ಲದೇ ಎಲ್ಲ ಪಂದ್ಯಗಳಲ್ಲಿಯೂ ಆಡುವ ಆಟಗಾರರಿಗೆ ರಾಷ್ಟ್ರೀಯ ತಂಡಕ್ಕೆ ಬಂದ ಕೂಡಲೇ ಗಾಯ, ನೋವು ಕಾಡುವುದು ಏಕೆ ಎಂಬ ವಿಷಯವೂ ಚರ್ಚೆಯಾಗುತ್ತಿದೆ. ರೋಹಿತ್‌ಗೆ ಈ ಹೊಣೆ ನೀಡಿರುವ ಮಂಡಳಿಯೂ ಗೊಂದಲದಲ್ಲಿದೆ. ಅದರ ಫಲವಾಗಿಯೇ ಹೊಸ ನಾಯಕನ ಶೋಧಕ್ಕಾಗಿ ಪ್ರಯೋಗ ಮಾಡುತ್ತಿದೆ. ಇದರಿಂದ ತಂಡದಲ್ಲಿ ಅಸ್ಥಿರತೆ ತಲೆದೋರುತ್ತಿರುವುದು ಮೇಲ್ನೋಟಕ್ಕೇ ಕಾಣುತ್ತಿದೆ. ಭಾರತ ತಂಡಕ್ಕೆ ಯಾರು ಬೇಕಾದರೂ ನಾಯಕರಾಗಬಹುದೆಂಬ ಮೀಮ್‌ಗಳು ಹರಿದಾಡುತ್ತಿವೆ. ಇದು ಬಿಸಿಸಿಐ ಘನತೆಗೆ ತಕ್ಕುದಲ್ಲ.

ಕೊನೆಯದಾಗಿ, ಭಾರತದ ಕ್ರಿಕೆಟ್ ಬೆಳೆಯಲು ಕಾರಣವಾಗಿರುವ ದೇಶಿ ಟೂರ್ನಿಗಳಿಗೆ ಮಹತ್ವ ನೀಡುವತ್ತ ಗಮನಹರಿಸಲು ಇದು ಸಕಾಲ. ರಾಷ್ಟ್ರೀಯ ತಂಡಗಳ ಆಯ್ಕೆಯಲ್ಲಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಗಳ ಸಾಧನೆಗಳೇ ಮಾನದಂಡವಾಗಬೇಕು. ಆಗಷ್ಟೇ, ಎಳೆಯ ಕ್ರಿಕೆಟಿಗರಿಗೆ ತಮ್ಮ ರಾಜ್ಯ ಹಾಗೂ ದೇಶದ ತಂಡಗಳಲ್ಲಿ ಆಡುವ ತುಡಿತ ಬೆಳೆಯುತ್ತದೆ. ಈ ಹಿಂದೆ ಅನಿಲ್ ಕುಂಬ್ಳೆ ಭಾರತ ತಂಡದ ಕೋಚ್ ಆಗಿದ್ದಾಗ, ಗಾಯಗೊಂಡು ಚೇತರಿಸಿಕೊಂಡ ಆಟಗಾರರು ಯಾವುದಾದರೂ ದೇಶಿ ಟೂರ್ನಿಯಲ್ಲಿ ಆಡಿಯೇ ರಾಷ್ಟ್ರೀಯ ಬಳಗಕ್ಕೆ ಮರಳಬೇಕು ಎಂಬ ನಿಯಮ ಮಾಡಿದ್ದರು. ಇದರಿಂದಾಗಿ ಆಟಗಾರರು ತಮ್ಮ ಫಿಟ್‌ನೆಸ್ ಮತ್ತು ಗಾಯದ ನಿರ್ವಹಣೆಯ ಕುರಿತು ಗಂಭೀರವಾಗಿದ್ದರು. ಆದರೆ ಈಗ ಆ ನಿಯಮವಿಲ್ಲ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಹಸಿರು ನಿಶಾನೆ ತೋರಿದರೆ ಸಾಕು. ಯಾವುದೇ ಹಂತದಲ್ಲಿಯೂ ಆಟಗಾರ ತಂಡಕ್ಕೆ ಮರಳಬಹುದು. ಇದು ಪೂರ್ಣಪ್ರಮಾಣದಲ್ಲಿ ಯಶಸ್ವಿಯಾಗುತ್ತಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸೂಕ್ತ ನಿಯಮ ರೂಪಿಸುವುದು ದೇಶದ ಕ್ರಿಕೆಟ್ ಭವಿಷ್ಯಕ್ಕೆ ಒಳ್ಳೆಯದಲ್ಲವೇ?



ಚುರುಮುರಿ



ಲಕ್ಕಿಡಿಪ್ ಸಿಎಂ!

• ಬಿ.ಎನ್.ಮಲ್ಲೇಶ್

‘ಏನ್ರಲೆ, ಎಲ್ಲ ಪಾಡದೀರಾ? ಏನಿವತ್ತು ಹೊಸ ಸುದ್ದಿ?’ ದುಬ್ಬೀರ ‘ಸೊರಕ’ ಅಂತ ಚಾ ಹೀರುತ್ತ ಹರಟೆಕಟ್ಟೆ ಗೆಳೆಯರನ್ನ ಕೇಳಿದ.

‘ಹೊಸ ಸುದ್ದಿನಾ? ಸನ್ಸೆಕ್ಸು ಇಳೀತಾ ಐತಿ, ಕ್ರೂಸೆಕ್ಸು ಏರ್ತಾ ಐತಿ. ಅಂದ್ರೇ ಷೇರು ದಬಾಕ್ಕಂತಾ ಐತಿ, ಡ್ಯಾಂಗಳಲ್ಲಿ ನೀರು ಏರ್ತಾ ಐತಿ ಅಂತ ಅರ್ಥ...’ ಗುಡ್ಡೆ ತಾನೇ ಅರ್ಥ ಬಿಡಿಸಿ ಹೇಳಿದ.

‘ಲೇಯ್ ಅದು ಸನ್ಸೆಕ್ಸ್ ಅಲ್ಲ, ಸೆನ್ಸೆಕ್ಸ್... ಇದು ಕ್ರೂಸೆಕ್ಸಲ್ಲ, ಕ್ರೂಸೆಕ್ ಅಂತ... ಅರ್ಧಂಬರ್ಧ ಸ್ಕೂಲ್ ದಬಾಕಿ ಬಂದುಬಿಡ್ತಾವೆ’ ತೆಪರೇಸಿ ವ್ಯಂಗ್ಯವಾಗಿ ನಕ್ಕ.

‘ಆತುಬಿಡಪ... ನೀನು ಆಕ್ಸ್‌ಫರ್ಡು, ನಾವೆಲ್ಲ ಹುಚಪ್ಯಾಲಿಗಳು. ಈಗ ‘ಡಿಪ್’ ಅಂದ್ರೆ ಏನು ಹೇಳಲೆ ನೋಡಾಣ’ ಗುಡ್ಡೆ ಸವಾಲು ಹಾಕಿದ.

‘ಡಿಪ್ ಅಂದ್ರೆ ಮುಳುಗಿಸೋದು. ಡಿಪ್ ಟೀ ನೋಡಿಲ್ಲೇನು?’

‘ಮತ್ತ, ಲಕ್ಕಿಡಿಪ್ ಅಂದ್ರೆ...?’

‘ಅದ್ರಲ್ಲಿ ಮುಳುಗಿಸೋದು, ಇದ್ರಲ್ಲಿ ಎತ್ತೋದು ಆಯ್ತಾ?’ ದುಬ್ಬೀರ ಹಾವೇರಿ ಪಂಚಾಯಿತಿ ಮಾಡಿದ.

‘ಅದೆಂಗೆ? ಈಗ ಲಕ್ಕಿಡಿಪ್ ಸಿಎಂ ಅಂತ ಬಿಜೆಪಿಯೋರು ಕುಮಾರಣ್ಣಂಗೆ, ಕುಮಾರಣ್ಣ ಬೊಮ್ಮಾಯಣ್ಣಂಗೆ ಹೇಳ್ತಿದಾರೆ. ಈ ಲಕ್ಕಿಡಿಪ್ ಸಿಎಂ ಅಂದ್ರೆ ಏನು?’ ಕೊಟ್ರೇಶಿ ಕೊಕ್ಕೆ.

‘ಹಂಗಂದ್ರೆ ಚುನಾವಣೇಲಿ ಜನರು ಮತ ಅನ್ನೋ ಚೀಟಿನ ಗುರುತು ಮಾಡಿ ಹಾಕಿರ್ತಾರೆ. ಸರ್ಕಾರ ಮಾಡಾಕೆ ಯಾರಿಗೂ ಬಹುಮತ ಬರದೇ ಇದ್ದಾಗ ಲಕ್ಕಿಡಿಪ್ ತರ ಚೀಟಿ ಎತ್ತಿ ಅದೃಷ್ಟ ಇರೋ ಯಾರಾದ್ರು ಒಬ್ರುನ್ನ ಸಿಎಂ ಮಾಡೋದು ಅಂತ...’

‘ಅಲ್ಲ, ಇದ್ರಲ್ಲಿ ಬರೀ ಎತ್ತೋದಾತು, ಮುಳುಗಿಸೋದಿಲ್ವಾ?’

‘ಯಾಕಿಲ್ಲ, ಸಿಎಂಗಳನ್ನ ಎತ್ತೋದು, ಜನರನ್ನ ಮುಳುಗಿಸೋದು!’

ದುಬ್ಬೀರನ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಬೇಕು ದಕ್ಷತೆ ಹೆಚ್ಚಿಸುವ ಕಲೆ

ನಾಯಕನಿಗೆ ಸಿಬ್ಬಂದಿಯಿಂದ ಗುಣಾತ್ಮಕ ಕೆಲಸ ಮಾಡಿಸುವ ಜಾಣ್ಮೆ ಸಿದ್ಧಿಸಿರಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ತಮ್ಮ ಆತ್ಮಕಥೆ ‘ಆನ್ ಮೈ ಟರ್ಮ್ಸ್’ ಕೃತಿಯಲ್ಲಿ ತಮ್ಮ ಕಾರು ಚಾಲಕನ ಬಗ್ಗೆ ತುಂಬ ಸೊಗಸಾಗಿ ಬರೆದಿದ್ದಾರೆ. ‘ಈತ ದಕ್ಷತೆಯಿಂದ ಕಾರು ಓಡಿಸುತ್ತಾನೆ. ಮಾತ್ರವಲ್ಲ, ನಮ್ಮ ವಾಹನ ಎಲ್ಲಿ ನಿಲ್ಲಿಸಬೇಕು, ಎಲ್ಲಿ ನಿಲ್ಲಿಸಬಾರದು ಎಂಬುದು ಅವನಿಗೆ ಚೆನ್ನಾಗಿ ಗೊತ್ತು. ಆತ ಜೊತೆಗಿದ್ದರೆ ಆತಂಕ ಇರುವುದಿಲ್ಲ’ ಎಂದು ಆತನ ಬಗ್ಗೆ ತಮಗಿರುವ ವಿಶ್ವಾಸವನ್ನು ದಾಖಲಿಸಿದ್ದಾರೆ.

ಈ ಬರಹವನ್ನು ಆ ಚಾಲಕ ಕಟ್ಟು ಹಾಕಿಸಿ ತಮ್ಮ ಮನೆಯ ಜಗುಲಿಯ ಮೇಲೆ ಇಟ್ಟಿದ್ದಾರೆ. ‘ಈ ಬರಹ ಓದಿಯೇ ಕೆಲಸಕ್ಕೆ ಹೋಗುತ್ತೇನೆ. ಹೀಗಾಗಿ ನನಗೆ ಮುಪ್ಪು ಆವರಿಸಿಲ್ಲ’ ಎಂದು 72 ವರ್ಷ ವಯಸ್ಸಿನ ಚಾಲಕ ಹೆಮ್ಮೆಯಿಂದ ಹೇಳುತ್ತಾರೆ. ಮಾಲೀಕ-ನೌಕರ ಸಂಬಂಧವು ಸಂಬಳದ ಆಚೆಗೂ ಇರುತ್ತದೆ ಎಂಬುದಕ್ಕೆ ಇವರಿಬ್ಬರ ನಡುವಿನ ಬಾಂಧವ್ಯವು ಒಂದು ನಿದರ್ಶನ.

ತಮ್ಮ ಬಳಿ ಕೆಲಸ ಮಾಡುವ ಸಿಬ್ಬಂದಿ, ಕೂಲಿಕಾರರಿಂದ ಗುಣಾತ್ಮಕ ಕೆಲಸ ಮಾಡಿಸಿಕೊಳ್ಳುವುದು ಒಂದು ಕಲೆ. ಒಂದು ಸಂಸ್ಥೆ ಚೆನ್ನಾಗಿ ನಡೆಯುವುದಕ್ಕೆ ಕೆಲಸಗಾರರ ಉತ್ತಮ ತಂಡ ಕಟ್ಟುವುದು ಬಹಳ ಮುಖ್ಯ. ಇದು, ಹಿಂದೆಯೂ ಈಗಲೂ ಮತ್ತು ಮುಂದೆಯೂ ಪ್ರಸ್ತುತವಾಗಿಯೇ ಇರುವ ವಿಚಾರ. ಕೆಲಸದ ಗುಣಮಟ್ಟ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯ.

ಕಚೇರಿ, ಸಂಘ-ಸಂಸ್ಥೆಗಳು, ಶಾಲೆ-ಕಾಲೇಜು, ಕೃಷಿ ಕೆಲಸಗಳಿಗೆ ಕೆಲಸಗಾರರ ಅವಶ್ಯಕತೆ ಇರುತ್ತದೆ. ಯಾರೂ ಪೂರ್ಣ ಸ್ವತಂತ್ರರಲ್ಲ. ಇನ್ನೊಬ್ಬರ ನೆರವು ಬೇಕೇ ಬೇಕು. ಸಿಬ್ಬಂದಿಗೆ ಹತ್ತಿರವೂ ಆಗಿ, ಅವರಿಂದ ಅಂತರವನ್ನೂ ಕಾಯ್ದುಕೊಂಡು ಕೆಲಸ ಮಾಡಿಸುವ ಕಲೆಯನ್ನು ನಾಯಕನಾದವನು ಕರಗತ ಮಾಡಿಕೊಂಡಿರಬೇಕು.

ಕೆಲಸಗಾರರು ಸಂಬಳಕ್ಕಾಗಿ ದುಡಿಯುತ್ತಾರೆ ಎನ್ನುವುದು ನಿಜ, ಅದಕ್ಕಿಂತಲೂ ಹೆಚ್ಚಾಗಿ ತಮ್ಮ ಕೆಲಸದ ಮೌಲ್ಯ ಗುರುತಿಸಬೇಕು, ಮೆಚ್ಚುಗೆ ಸೂಚಿಸಬೇಕು ಎಂದು ಅವರು ಬಯಸುತ್ತಾರೆ. ಮಾಲೀಕ ಅಥವಾ ಮೇಲಧಿಕಾರಿ ತಮ್ಮ ಬಳಿ ಕೆಲಸ ಮಾಡುವವರ ಶ್ರಮ ಹಾಗೂ ಶ್ರದ್ಧೆಯನ್ನು ಗುರುತಿಸಿ ಬೆನ್ನು ತಟ್ಟುವುದರಿಂದ ಕೆಲಸದ ಸ್ಥಳದಲ್ಲಿ ಪವಾಡಗಳೇ ಆಗಬಹುದು. ನೌಕರರನ್ನು ಅವರ ಸಹೋದ್ಯೋಗಿಗಳ ಮುಂದೆ ಟೀಕಿಸುವುದು, ಅವಮಾನಿಸುವುದು ಅವರ ಕೆಲಸದ ಕ್ಷಮತೆಯನ್ನು ಕುಗ್ಗಿಸುತ್ತದೆ. ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

ಸಂಸ್ಥೆಯು ಬೆಳೆಯಲು, ಅನವಶ್ಯಕ ಖರ್ಚು ಕಡಿಮೆ ಮಾಡಲು, ಉತ್ಪಾದಕತೆ ಹೆಚ್ಚಿಸಲು ಒಳ್ಳೆಯ ಸಲಹೆಗಳನ್ನು ನೀಡಲು ಅವಕಾಶ ಕೊಡಬೇಕು. ‘ನಮ್ಮ ಮಾತಿಗೂ ಮನ್ನಣೆ ದೊರೆಯುತ್ತದೆ’ ಎಂಬ ಭಾವನೆ ಮೂಡಿಸುವುದು ಬಹಳ ಅವಶ್ಯ. ನೌಕರರ ಸಲಹೆಗಳು ಸೂಕ್ತವಾಗಿದ್ದಾಗ ಅವುಗಳನ್ನು ಅನುಷ್ಠಾನಕ್ಕೆ ತರಬೇಕು.

ಬಾಗಲಕೋಟೆಯ ಸಿಮೆಂಟ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಲು ಸಮೀಪದ ಹಳ್ಳಿಗಳಿಂದ ನೂರಾರು ಕಾರ್ಮಿಕರು ಬರುತ್ತಾರೆ. ಅವರು ಮಧ್ಯಾಹ್ನ ಊಟಕ್ಕೆ ಬುತ್ತಿ ತರುತ್ತಾರೆ. ಅವರ ಊಟಕ್ಕೆ ಅನುಕೂಲ ಆಗುವಂತೆ ಬಿಸಿಯಾದ ಸಾರು ಪೂರೈಸಲು ಆಡಳಿತ ಮಂಡಳಿಗೆ ಒಬ್ಬ ನೌಕರ ಸಲಹೆ ಮಾಡಿದ. ಆಡಳಿತ ಮಂಡಳಿ ತಕ್ಷಣ ಸ್ಪಂದಿಸಿ, ಉತ್ತಮ ಬೇಳೆಸಾರು ಪೂರೈಸತೊಡಗಿತು. ಈ ಸಣ್ಣ ಸಲಹೆಯು ಕಾರ್ಮಿಕರ ಕ್ರಿಯಾಶೀಲತೆಯಲ್ಲಿ ಗಣನೀಯ ಬದಲಾವಣೆ ತಂದಿದೆ.

ಕೆಲಸಗಾರರಲ್ಲಿ ಕೆಲವರು ಕವಿಗಳು, ನಾಟಕಕಾರರು, ಕಲಾವಿದರು ಇರುತ್ತಾರೆ. ಕೆಲಸದ ಸ್ಥಳದಲ್ಲಿ ಇವರು ಸಂತಸದ ವಾತಾವರಣ ಸೃಷ್ಟಿಸಬಲ್ಲರು. ಕಲಾವಿದ ಗುರುರಾಜ್ ಹೊಸಕೋಟೆ ತಮ್ಮ ಓದು ಮುಗಿದ ಮೇಲೆ ಗೋದಾವರಿ ಸಕ್ಕರೆ ಕಾರ್ಖಾನೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡಿದ್ದರು. ಅವರು ತಮ್ಮ ಬಿಡುವಿನ ವೇಳೆಯಲ್ಲಿ ಕಾರ್ಮಿಕರಿಗೆ ಅಭಿನಯ, ಸಂಗೀತ ಕಲಿಸುತ್ತಿದ್ದರು. ಇದರಿಂದಾಗಿ ಕಾರ್ಮಿಕರು ಯಂತ್ರಗಳೊಂದಿಗೆ ಮಾತನಾಡುವುದರೊಂದಿಗೆ ಕಲೆ, ಸಂಸ್ಕೃತಿ, ಕಾವ್ಯದ ಬಗ್ಗೆಯೂ ಮಾತನಾಡುವ ಸಾಂಸ್ಕೃತಿಕ ವಾತಾವರಣ ರೂಪುಗೊಂಡಿತು.



ಅಮೆರಿಕದ ಗ್ಯಾರಿ ಚ್ಯಾಪ್‌ಮನ್ ಮತ್ತು ಪೌಲ್ ವೈಟ್ ಅವರು ‘ದಿ 5 ಲ್ಯಾಂಗ್ವೇಜಸ್ ಆಫ್ ಅಪ್ರಿಸಿಯೇಶನ್ ಇನ್ ದ ವರ್ಕ್‌ಪ್ಲೇಸ್’ ಎಂಬ ಮಹತ್ವದ ಗ್ರಂಥ ರಚಿಸಿದ್ದಾರೆ. ಅಮೆರಿಕದ ಕೈಗಾರಿಕೆಗಳು ತಮ್ಮ ಕೆಲಸಗಾರರ ಸಾಧನೆ ಹಾಗೂ ಅವರಲ್ಲಿನ ಕಲಾ ಪ್ರತಿಭೆಗೆ ಮನ್ನಣೆ ನೀಡುವ ಕಾರ್ಯಕ್ರಮ ಸಂಘಟಿಸುತ್ತವೆ. ಇದು ಕೆಲಸದ ಸ್ಥಳದಲ್ಲಿ ಆರೋಗ್ಯಕರ ವಾತಾವರಣ ಸೃಷ್ಟಿಸಲು ನೆರವಾಗಿದೆ ಎಂದು ಅವರು ಕೃತಿಯಲ್ಲಿ ದಾಖಲಿಸಿದ್ದಾರೆ.

ಸುಧಾಮೂರ್ತಿ ಅವರು ಬಿ.ಇ. ಪದವಿ ಪೂರೈಸಿದ ನಂತರ ಪುಣೆಯ ಟೆಲ್ಕೊ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದರು. ಒಂದು ದಿನ ಅವರು ರಾತ್ರಿ 8 ಗಂಟೆ ಸಮಯದಲ್ಲಿ ಮನೆಗೆ ತೆರಳಲು ಸಿಟಿ ಬಸ್‌ಗಾಗಿ ಕಾಯುತ್ತಿದ್ದರು. ಅದೇ ರಸ್ತೆಯಲ್ಲಿ ತೆರಳುತ್ತಿದ್ದ ಸಂಸ್ಥೆಯ ಮಾಲೀಕ ರತನ್ ಟಾಟಾ ಅವರು ಸುಧಾ ಅವರನ್ನು ಗಮನಿಸಿ ಕರೆದು ಮನೆಗೆ ತಲುಪಿಸಿದರು. ಇದೊಂದು ತಾವು ಬದುಕಿನುದ್ದಕ್ಕೂ ಮರೆಯಲಾಗದ ಅನುಭವ ಎಂದು ಸುಧಾಮೂರ್ತಿ ಒಂದೆಡೆ ಬರೆದಿದ್ದಾರೆ.

ಉದ್ದಿಮೆ, ಸಂಸ್ಥೆ, ಕಚೇರಿಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಕೆಲಸಗಾರರಿಗೆ ಮಾರ್ಗದರ್ಶಕರು, ಹಿತೈಷಿಗಳಾಗುವ ಮೂಲಕ ಸಂತಸದ ವಾತಾವರಣ ಮೂಡಿಸಬಹುದು. ಪ್ರಗತಿಯ ಸೌಧ ಕಟ್ಟಬಹುದು.

ವಾಚಕರ ವಾಣಿ

ಯೋಜನೆಯಿಂದ ಹಿಂದೆ ಸರಿಯದಿರಿ

ನಮ್ಮ ಹಳ್ಳಿಗಳಲ್ಲಿ ಎಷ್ಟೋ ಮಕ್ಕಳು ಚಪ್ಪಲಿಯೂ ಇಲ್ಲದೆ ಬರಿಗಾಲಿನಲ್ಲಿ ಶಾಲೆಗೆ ನಡೆದುಕೊಂಡು ಹೋಗುವ ದೃಶ್ಯ ಶಿಕ್ಷಣ ಸಚಿವರ ಗಮನಕ್ಕೆ ಬಂದಿದ್ದರೆ, ‘ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೆ ವಿನಾ ಶೂ, ಸಾಕ್ಸ್ ಹಾಕಿಕೊಳ್ಳಲು ಅಲ್ಲ’ ಎಂಬ ಹೇಳಿಕೆಯನ್ನು (ಪ್ರ.ವಾ., ಜುಲೈ 7) ಖಂಡಿತವಾಗಿಯೂ ಅವರು ನೀಡುತ್ತಿರಲಿಲ್ಲ.

ಪಾಲಕರು ತಮ್ಮ ಮಕ್ಕಳಿಗೆ ಶೂ ಖರೀದಿಸುವಷ್ಟು ಸಾಮರ್ಥ್ಯ ಹೊಂದಿಲ್ಲವೇ ಎನ್ನುವುದು ಮೂರ್ಖತನದ ಪ್ರಶ್ನೆ ಎನಿಸುತ್ತದೆ. ಗ್ರಾಮೀಣ ಪ್ರದೇಶದ ಎಷ್ಟೋ ಮಕ್ಕಳು ಚಪ್ಪಲಿ, ಶೂ ಹಾಕಿಕೊಳ್ಳದೆ ಶಾಲೆಗಳಿಗೆ ಹೋಗುವುದನ್ನು ಈಗಲೂ ಕಾಣಬಹುದು. ಮಗುವಿನ ಪಾದಗಳನ್ನು ಸೋಂಕು ಮತ್ತು ಗಾಯಗಳಿಂದ ಶೂ ರಕ್ಷಿಸುತ್ತದೆ. ಪೂರ್ಣ ಪ್ರಮಾಣದಲ್ಲಿ ಸಮವಸ್ತ್ರ ಧರಿಸಿ ಶಾಲೆಗೆ ಹೋಗುವ ಮಗುವನ್ನು ನೋಡುವುದೇ ಆನಂದ! ಶೂ, ಸಾಕ್ಸ್ ವಿತರಣೆಯಲ್ಲಿ ವಿಳಂಬವಾದರೂ ಸರಿ, ಅವನ್ನು ಕೊಡುವುದರಿಂದ ಹಿಂದೆ ಸರಿಯುವ ನಿರ್ಧಾರವನ್ನಂತೂ ಸರ್ಕಾರ ಮಾಡದಿರಲಿ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ರಾಜ್ಯಸಭೆ: ದಕ್ಷಿಣ ಭಾರತಕ್ಕೆ ಮಣೆ

ರಾಜ್ಯಸಭೆಗೆ ನಾಮನಿರ್ದೇಶನ ಮಾಡುವಾಗ ಈ ಬಾರಿ ದಕ್ಷಿಣ ಭಾರತಕ್ಕೆ ಮಣೆ ಹಾಕಿರುವುದು ಅಚ್ಚರಿ ಮೂಡಿಸಿದೆ. ದಕ್ಷಿಣದ ನಾಲ್ಕು ರಾಜ್ಯಗಳಿಗೆ ಈ ಸಲ ಪ್ರಾತಿನಿಧ್ಯ ಲಭಿಸಿರುವುದು ವಿಶೇಷ. ಇದರೊಂದಿಗೆ ಬಿಜೆಪಿಯು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯಲು ಮುಂದಾಗಿದೆ. ಅದು, ತನಗಂಟಿರುವ ದಕ್ಷಿಣ ವಿರೋಧಿ ಕಳಂಕದಿಂದ ಹೊರಬರುವುದರೊಂದಿಗೆ, ಮುಂಬರುವ ಚುನಾವಣೆಯಲ್ಲಿ ದಕ್ಷಿಣದ ಸೀಮೋಲ್ಲಂಘನವನ್ನು ದೊಡ್ಡ ಪ್ರಮಾಣದಲ್ಲಿ ಮಾಡಲು ಅಡಿ ಇಟ್ಟಂತೆ ಕಾಣುತ್ತದೆ. ಈ ನಾಮನಿರ್ದೇಶನದ ಹಿಂದಿನ ರಾಜಕೀಯ ಲೆಕ್ಕಾಚಾರ ಏನೇ ಇರಲಿ, ಈ ಬಾರಿಯ ಆಯ್ಕೆಯು ಟೀಕೆಗೆ ಆಸ್ಪದ ಕೊಟ್ಟಿಲ್ಲ ಎಂಬುದಂತೂ ಸ್ಪಷ್ಟ.

ರಮಾನಂದ ಶರ್ಮಾ, ಬೆಂಗಳೂರು

ಶಿಕ್ಷಣ: ಎಚ್ಚೆತ್ತುಕೊಳ್ಳಬೇಕಾದ ಜರೂರಿದೆ

ರಾಜ್ಯದಲ್ಲಿ 14 ವರ್ಷದೊಳಗಿನ ಹತ್ತು ಲಕ್ಷ ಮಕ್ಕಳು ಶಾಲೆ ಮತ್ತು ಅಂಗನವಾಡಿಯಿಂದ ಹೊರಗೆ ಉಳಿದಿರುವುದು (ಪ್ರ.ವಾ., ಜುಲೈ 7) ಆಘಾತಕಾರಿ ಸಂಗತಿ. ಯಾವುದೇ ದೇಶದ, ಜನರ ಸ್ಥಿತಿ ಅರಿಯಲು ಮೊದಲ ಮಾನದಂಡ ಶಿಕ್ಷಣ. ಆದರೆ ನಮ್ಮಲ್ಲಿ ಶಿಕ್ಷಣದ ಬಗ್ಗೆ ಇತ್ತೀಚೆಗೆ ಮತ್ತು ಕೊರೊನಾ ನಂತರದ ದಿನಮಾನಗಳಲ್ಲಿ ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಚಿಂತೆಗೆ ಹಚ್ಚುತ್ತಿವೆ. ಶಿಕ್ಷಣವು ವರಮಾನ ತರುವಂಥದ್ದಲ್ಲ, ಕೇವಲ ವೆಚ್ಚದ ಬಾಬತ್ತು ಎಂದೇ ನಮ್ಮ ರಾಜಕಾರಣಿಗಳು ಭಾವಿಸಿದ್ದಾರೆ. ನಾವು ಎಚ್ಚೆತ್ತುಕೊಳ್ಳಬೇಕಾದ ಜರೂರು ಇರುವುದು ಈ ವರದಿಯಿಂದ ತಿಳಿಯುತ್ತದೆ.

ಸದ್ಯ ಓದುತ್ತಿರುವ ಮಕ್ಕಳು ಸಹ ಕೊರೊನಾ ಕಾರಣದಿಂದ ಎರಡು ವರ್ಷ ಕಲಿಕೆಯಿಂದ ವಂಚಿತರಾಗಿದ್ದರು. ಅವರ ಕಲಿಕೆಯ ಮಟ್ಟವನ್ನು ಉತ್ತಮಗೊಳಿಸುವುದರ ಜೊತೆಗೆ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗಳಲ್ಲಿ ಇಂದಿಗೂ ಪ್ರವೇಶ ಪಡೆಯದ ಮಕ್ಕಳನ್ನು ಶಾಲೆಗಳಿಗೆ ಕರೆತರಬೇಕಾಗಿದೆ.

ಈ ದಿಸೆಯಲ್ಲಿ ತುರ್ತು ಕಾರ್ಯಯೋಜನೆ ರೂಪಿಸಿ ಜಾರಿಗೆ ತರಬೇಕಿದೆ. ಬೇರೆಲ್ಲಕ್ಕಿಂತ ಶಿಕ್ಷಕರನ್ನು ಸೈನಿಕರಂತೆ ಸಿದ್ಧಪಡಿಸಿದರೆ ನಿಶ್ಚಿತ ಗುರಿ ತಲುಪಲು ಸಾಧ್ಯ. ಯಾವ ಮಗುವೂ ಶಾಲೆಯಿಂದ ಹೊರಗೆ ಉಳಿಯಬಾರದು ಎಂಬ ಮನೋಭಾವ ಸಮಾಜ, ಸರ್ಕಾರ, ಶಿಕ್ಷಕರು ಎಲ್ಲರದ್ದೂ ಆಗಬೇಕು. ಅಂದಾಗ ಮಾತ್ರ ಶಿಕ್ಷಣವು ತನ್ನ ಪಾತ್ರವನ್ನು ಸರಿಯಾಗಿ ನಿಭಾಯಿಸಲು ಸಾಧ್ಯ.

ಬಿ.ಆರ್.ಅಣ್ಣಾಸಾಗರ, ಸೇಡಂ

ಗನ್‌ಮ್ಯಾನ್ ಇರಲಿಲ್ಲವೇಕೆ?

ಸರಳ ವಾಸ್ತು ತಜ್ಞ ಚಂದ್ರಶೇಖರ ಗುರೂಜಿ ಅವರು ಹುಬ್ಬಳ್ಳಿಯ ಹೋಟೆಲೊಂದರಲ್ಲಿ ಭೀಕರವಾಗಿ ಹತ್ಯೆಗೊಳಗಾಗಿದ್ದು ದುರದೃಷ್ಟಕರ. ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಹತ್ಯೆಯ ದೃಶ್ಯವನ್ನು ನೋಡಿದಾಗ, ಹೋಟೆಲ್ ರಿಸೆಪ್ಷನ್ ಲಾಬಿಯಲ್ಲಿದ್ದ ಕೆಲವರು ರಕ್ಷಿಸಲು ಮುಂದಾಗುತ್ತಾರಾದರೂ ಅಧೀರರಾಗಿಬಿಡುವುದು ತಿಳಿಯುತ್ತದೆ. ಆದರೆ ಇಂತಹ ಐಷಾರಾಮಿ ಹೋಟೆಲ್‌ನಲ್ಲಿ ಗನ್‌ಮ್ಯಾನ್ ಇರಲಿಲ್ಲ ಏಕೆ ಎಂಬ ಪ್ರಶ್ನೆ ಮೂಡುತ್ತದೆ. ಗಣ್ಯರು ಐಷಾರಾಮಿ ಹೋಟೆಲ್‌ನಲ್ಲಿ ಉಳಿಯುವುದಕ್ಕೆ ಭದ್ರತೆಯೂ ಒಂದು ಕಾರಣವಾಗಿರುತ್ತದೆ. ಘಟನಾ ಸ್ಥಳದಲ್ಲಿ ಗನ್‌ಮ್ಯಾನ್ ಇದ್ದಿದ್ದರೆ ಕಿಡಿಗೇಡಿಗಳಿಗೆ ಗುಂಡಿಕ್ಕಿ ಗುರೂಜಿಯನ್ನು ರಕ್ಷಿಸಬಹುದಿತ್ತು.

ಆರ್.ವೆಂಕಟರಾಜು, ಬೆಂಗಳೂರು

ಅರಿಯಬೇಕಿದೆ ಭಾಷೆಯ ಲಯ

ಶಾಲಾ ಶಿಕ್ಷಣದಲ್ಲಿ ಭಾಷಾ ಕಲಿಕೆಯ ಮಹತ್ವದ ಬಗ್ಗೆ ಅರವಿಂದ ಚೊಕ್ಕಾಡಿ ಅವರು ಬರೆದಿರುವ ಲೇಖನ (ಪ್ರ.ವಾ., ಜುಲೈ 7) ಸಮಯೋಚಿತವಾಗಿದೆ. ಸುಳ್ಯದಲ್ಲಿ ಶಾಲಾ ಶಿಕ್ಷಣವನ್ನು ಪಡೆದ ನಾನು ವಿದ್ಯಾರ್ಥಿಯಾಗಿದ್ದಾಗ ಹಿಂದಿ ಮತ್ತು ಇಂಗ್ಲಿಷ್ ಕಲಿಕೆಯ ಸಂದರ್ಭದಲ್ಲಿ ಈ ತಳಮಳಗಳನ್ನು ಅನುಭವಿಸಿದ್ದೇನೆ. ಭಾಷೆಯನ್ನು ಚೆನ್ನಾಗಿ ಕಲಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕನ್ನಡ ಕಲಿಸುವ ವಿಧಾನದಲ್ಲಿ ಇಂಗ್ಲಿಷ್ ಕಲಿಸದಿರುವುದು. ಈ ಭಾಷೆಯ ಲಯ ಮತ್ತು ಚೌಕಟ್ಟು ವಿಭಿನ್ನ.

ಇಂಗ್ಲಿಷನ್ನು ಕನ್ನಡದ ಶೈಲಿಯಲ್ಲಿ ಕಲಿತ ಕನ್ನಡದ ಉತ್ತಮ ವಾಗ್ಮಿಗಳು ಕೂಡ ಇಂಗ್ಲಿಷಿನಲ್ಲಿ ಭಾಷಣ ಮಾಡುವಾಗ ಕನ್ನಡದಲ್ಲಿ ಯೋಚಿಸಿ ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು ಗಮನಿಸಿದ್ದೇನೆ. ಅದಕ್ಕೆ ಮುಖ್ಯ ಕಾರಣ, ಶಾಲೆಯಲ್ಲಿ ಇಂಗ್ಲಿಷನ್ನು ಕನ್ನಡ ಕಲಿಸುವ ಮಾದರಿಯಲ್ಲಿ ಕಲಿಸಿದ್ದು. ನಮ್ಮ ಮಕ್ಕಳು ಹಿಂದಿ ಮತ್ತು ಇಂಗ್ಲಿಷ್ ಅನ್ನು ಸರಿಯಾದ ವಿಧಾನದಲ್ಲಿ ಕಲಿಯುವುದು ಮುಖ್ಯ. ಹೆಚ್ಚಿನ ಮಕ್ಕಳು ಮತ್ತು ಹೆತ್ತವರು ತಾಂತ್ರಿಕ ಶಿಕ್ಷಣದ ಹಿಂದೆ ಓಡುವ ಅಬ್ಬರದಲ್ಲಿ ವಿಜ್ಞಾನ ಹಾಗೂ ಗಣಿತ ಕಲಿಯುವುದರ– ಕಲಿಸುವುದರ ಕಡೆ ಹೆಚ್ಚು ಗಮನಹರಿಸುತ್ತಾರೆ. ಮಗುವಿಗೆ ಬೇಕಾದ ಭಾಷಾ ಸಾಮರ್ಥ್ಯದ ಅಗತ್ಯವನ್ನು ಲಘುವಾಗಿ ತೆಗೆದುಕೊಳ್ಳುತ್ತಾರೆ. ಇದರ ಫಲವಾಗಿ ಮಕ್ಕಳು ತೊಂದರೆಯನ್ನು ಅನುಭವಿಸುತ್ತಾರೆ.

ಡಾ. ಕುಶ್ವಂತ್ ಕೋಳಿಬೈಲು, ಮಡಿಕೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮೂರು ವರ್ಷಗಳ ಹಿಂದೆ ಭಾರಿ ಬಹುಮತದಿಂದ ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾದ ಬೋರಿಸ್ ಜಾನ್ಸನ್ ಅವರ ಪತನಕ್ಕೆ ಹಲವು ಪ್ರಮುಖ ಕಾರಣಗಳನ್ನು ರಾಜಕೀಯ ತಜ್ಞರು ಗುರುತಿಸಿದ್ದಾರೆ. ಜಾನ್ಸನ್ ವಿರುದ್ಧ ಇರುವ ಆರೋಪಗಳೆಲ್ಲವೂ ಸಾಮಾಜಿಕ ನಡವಳಿಕೆಗಳನ್ನು ಉಲ್ಲಂಘಿಸಿದ್ದಕ್ಕೆ ಸಂಬಂಧಿಸಿದ್ದಾಗಿವೆ. ಲಾಕ್‌ಡೌನ್ ನಿಯಮಗಳ ಉಲ್ಲಂಘನೆ, ಲಾಬಿ ಕಾನೂನು ದುರುಪಯೋಗ ಪಡಿಸಿಕೊಂಡವರಿಗೆ ಬೆಂಬಲ, ತೆರಿಗೆ ಏರಿಕೆ, ಕೆಲಸದಲ್ಲಿ ಸ್ಪಷ್ಟ ಗುರಿ ಇಲ್ಲದಿರುವುದು ಮತ್ತು ಪಾರ್ಟಿಯಲ್ಲಿ ಅಸಭ್ಯವಾಗಿ ವರ್ತಿಸಿದವರಿಗೆ ಉಪಸಚೇತಕ ಹುದ್ದೆ ನೀಡಿದ್ದು ಜಾನ್ಸನ್ ಅವರ ಪತನಕ್ಕೆ ಪ್ರಮುಖ ಕಾರಣಗಳು ಎಂದು ಗುರುತಿಸಲಾಗಿದೆ. ಈ ಸಂಬಂಧ ಆರೋಪ ಮತ್ತು ಜನಪ್ರತಿನಿಧಿ ಸಭೆಯಲ್ಲಿ ತನಿಖೆ ಎದುರಿಸುತ್ತಿರುವುದರಿಂದಲೇ ಪಕ್ಷದ ನಾಯಕರು ಜಾನ್ಸನ್ ಅವರಿಂದ ದೂರ ಸರಿದಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. ಜಾನ್ಸನ್ ಅವರ ಪತನದ ಸುತ್ತಲಿನ ವಿದ್ಯಮಾನಗಳ ವಿವರ ಇಲ್ಲಿದೆ

ಸಾಲು ಸಾಲು ಹಗರಣ
ಜಾನ್ಸನ್ ಜನಪ್ರಿಯತೆಗೆ ಗ್ರಹಣ



ಬೋರಿಸ್ ಜಾನ್ಸನ್

ಪಿಂಚರ್ ಹಗರಣ

ಸಂಸದ ಕ್ರಿಸ್ಟೋಫರ್ ಪಿಂಚರ್ ಅವರನ್ನು ಕನ್ಸರ್ವೇಟಿವ್ ಪಕ್ಷದ ಉಪ ಮುಖ್ಯ ಸಚೇತಕರನ್ನಾಗಿ ಇದೇ ಫೆಬ್ರುವರಿಯಲ್ಲಿ ನೇಮಕ ಮಾಡಲಾಗಿತ್ತು. ವರ್ಷಗಳ ಹಿಂದೆ ಕ್ಲಬ್ ಒಂದರಲ್ಲಿ ಪಾರ್ಟಿ ನಡೆಯುತ್ತಿದ್ದ ವೇಳೆ ಪಿಂಚರ್ ಅಸಭ್ಯವಾಗಿ ವರ್ತಿಸಿದ್ದರು ಎಂಬ ಆರೋಪದಡಿ ದೂರು ದಾಖಲಾಗಿತ್ತು. ಜತೆಗೆ ಇಬ್ಬರು ಪುರುಷರ ಜತೆ ಲೈಂಗಿಕವಾಗಿ ಅಸಭ್ಯವಾಗಿ ವರ್ತಿಸಿದ್ದರು ಎಂಬ ದೂರೂ ಪಿಂಚರ್ ಮೇಲಿತ್ತು. ಈ ಆರೋಪಗಳನ್ನು ಮುಚ್ಚಿಟ್ಟು, ಅವರನ್ನು ಉಪ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂಬ ಆರೋಪ ಜಾನ್ಸನ್ ಮೇಲಿದೆ.

ಈ ಬಗ್ಗೆ ತಮಗೆ ಗೊತ್ತಿರಲಿಲ್ಲ ಎಂದು ಜಾನ್ಸನ್ ಹೇಳಿದ್ದರು. ಆದರೆ, 'ಪಿಂಚರ್ ವಿರುದ್ಧ ದೂರು ದಾಖಲಾಗಿರುವ ಬಗ್ಗೆ 2019ರಲ್ಲೇ ಜಾನ್ಸನ್ ಅವರಿಗೆ ಮಾಹಿತಿ ನೀಡಲಾಗಿತ್ತು' ಎಂದು ಜುಲೈ 4ರಂದು 'ಬಿಬಿಸಿ' ವರದಿ ಮಾಡಿತ್ತು. ಅದರ ಮರುದಿನವೇ ಪ್ರಧಾನಿಯ ಮಾಜಿ ಸಹಾಯಕ ಲಾರ್ಡ್ ಮೆಕ್‌ಡೊನಾಲ್ಡ್ ಅವರು, 'ಪಿಂಚರ್ ವಿರುದ್ಧ ದೂರು ದಾಖಲಾಗಿರುವ ಬಗ್ಗೆ ನಾನೇ ಖುದ್ದಾಗಿ ಜಾನ್ಸನ್ ಅವರಿಗೆ ವಿವರವಾಗಿ ಮಾಹಿತಿ ನೀಡಿದ್ದೆ' ಎಂದು ಹೇಳಿಕೆ ನೀಡಿದರು. ಈ ಬಗ್ಗೆ ತಮಗೆ ಮಾಹಿತಿ ಇತ್ತು ಎಂದು ಜಾನ್ಸನ್ ಒಪ್ಪಿಕೊಂಡರು. ಜತೆಗೆ ಕ್ಷಮೆಯಾಚಿಸಿದರು. ಆದರೆ, ಅಷ್ಟರಲ್ಲಾಗಲೇ ಹಾನಿಯಾಗಿತ್ತು. ಜಾನ್ಸನ್ ಅವರು ಪಕ್ಷದ ಸಂಸದರ ವಿಶ್ವಾಸ ಕಳೆದುಕೊಂಡಿದ್ದರು. ಇದು ಜಾನ್ಸನ್ ಅವರ ಪದತ್ಯಾಗಕ್ಕೆ ತಕ್ಷಣದ ಕಾರಣವಾಗಿದ್ದರೂ, ಇದೇ ಸ್ವರೂಪದ ಹಲವು ಆರೋಪಗಳು ಮತ್ತು ಪ್ರಕರಣಗಳು ಅವರ ಜನಪ್ರಿಯತೆ ಮತ್ತು ಬೆಂಬಲ ಕುಸಿಯಲು ಕಾರಣವಾಗಿವೆ.

ಕಂಟಕವಾದ ಪಾರ್ಟಿಗಳು

ಕೋವಿಡ್ ಲಾಕ್‌ಡೌನ್ ಮಧ್ಯೆ ಹಲವು ಪಾರ್ಟಿಗಳನ್ನು ಆಯೋಜಿಸಿದ ಮತ್ತು ಭಾಗಿಯಾದ ಆರೋಪ ಜಾನ್ಸನ್ ಮೇಲಿದೆ. 2020ರ ಜೂನ್‌ನಲ್ಲಿ ಬ್ರಿಟನ್‌ನಲ್ಲಿ ಕೋವಿಡ್‌ನ ಕಠಿಣ ಲಾಕ್‌ಡೌನ್ ಜಾರಿಯಲ್ಲಿತ್ತು. ತಮ್ಮ ಜನ್ಮದಿನ ಪ್ರಯುಕ್ತ ಡೌನಿಂಗ್ ಸ್ಟ್ರೀಟ್ ಗಾರ್ಡನ್‌ನಲ್ಲಿ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿ, ಪಾರ್ಟಿ ಆಯೋಜಿಸಿದ್ದರು. ಇದರಲ್ಲಿ ಹಲವು ಸಂಸದರು, ಉದ್ಯಮಿಗಳು ಭಾಗಿಯಾಗಿದ್ದರು.

ಕೋವಿಡ್ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ಜಾನ್ಸನ್ ಅವರಿಗೆ ದಂಡ ವಿಧಿಸಲಾಗಿತ್ತು ಮತ್ತು ಪ್ರಕರಣ ದಾಖಲಿಸಲಾಗಿತ್ತು. ತಾವು ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ ಎಂದು ಜಾನ್ಸನ್ ಹೇಳಿದ್ದರು. ಆದರೆ, ಪ್ರಕರಣವು ಜನಪ್ರತಿನಿಧಿ ಸಭೆಯವರೆಗೂ ಹೋಯಿತು. ಈಗಲೂ ಪ್ರಕರಣದ ತನಿಖೆ ನಡೆಯುತ್ತಿದೆ.

ಜಾನ್ಸನ್ ಅವರ ಕಚೇರಿಯ ಸಿಬ್ಬಂದಿಗಳೂ ಹಲವು ಪಾರ್ಟಿಗಳನ್ನು ಆಯೋಜಿಸಿದ್ದರು. ಪಾರ್ಟಿ ನಡೆಸಿದ್ದನ್ನು ಖಂಡಿಸಿ ಮಾಧ್ಯಮಗಳು ವರದಿ ಪ್ರಕಟಿಸಿದವು. ಜಾನ್ಸನ್ ಅವರ ಈ ನಡವಳಿಕೆಯನ್ನು ಬ್ರಿಟನ್ ಜನರು ಟೀಕಿಸಿದರು. ಇಲ್ಲಿಂದ ಅವರ ಪತನ ಆರಂಭವಾಯಿತು ಎಂದು ವಿಶ್ಲೇಷಿಸಲಾಗಿದೆ.

ನಾಯಕನ ಆಯ್ಕೆಗೆ ಹಲವು ಹಂತದ ಪ್ರಕ್ರಿಯೆ

ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನಕ್ಕೆ ಜಾನ್ಸನ್ ರಾಜೀನಾಮೆ ನೀಡಿದ್ದರಿಂದಾಗಿ ನೂತನ ನಾಯಕನ ಆಯ್ಕೆಗೆ ಚುನಾವಣೆ ನಡೆಯಲಿದೆ. ಇದಕ್ಕೆ ವಿವಿಧ ಹಂತಗಳ ಪ್ರಕ್ರಿಯೆ ಇದೆ. ಪಕ್ಷದ ನಾಯಕನಾಗುವ ಆಕಾಂಕ್ಷೆಯುಳ್ಳ ಅಭ್ಯರ್ಥಿಯನ್ನು ಪಕ್ಷದ ಎಂಟು ಸಂಸದರು ಅನುಮೋದಿಸಬೇಕು.

ಅಭ್ಯರ್ಥಿಯು ಮೊದಲ ಹಂತದಲ್ಲಿ ಶೇ 5ರಷ್ಟು ಅಥವಾ 18 ಸಂಸದರ ಮತಗಳನ್ನು ಪಡೆಯಬೇಕು. ಎರಡನೇ ಹಂತದಲ್ಲಿ ಶೇ 10ರಷ್ಟು ಅಥವಾ 36 ಸಂಸದರು ಮತ ಹಾಕಿರಬೇಕು. ಇದಕ್ಕಿಂತ ಕಡಿಮೆ ಮತಗಳನ್ನು ಪಡೆದವರು ಸ್ಪರ್ಧೆಯಿಂದ ಹೊರಬೀಳುತ್ತಾರೆ. ಕೊನೆಯಲ್ಲಿ ಉಳಿಯುವ ಇಬ್ಬರು ಸ್ಪರ್ಧಿಗಳಲ್ಲಿ ನಾಯಕ ಯಾರಾಗಬೇಕು ಎಂದು ಚುನಾವಣೆ ನಡೆಯುತ್ತದೆ. ಈ ಹಂತದಲ್ಲಿ ಕೇವಲ ಸಂಸದರು ಮಾತ್ರ ಮತ ಹಾಕುವುದಿಲ್ಲ. ಕನ್ಸರ್ವೇಟಿವ್ ಪಕ್ಷದ ಎಲ್ಲ ಸದಸ್ಯರು ಚುನಾವಣೆಯಲ್ಲಿ ಮತ ಚಲಾಯಿಸುತ್ತಾರೆ. ಇಲ್ಲಿ ವಿಜೇತರಾದ ಅಭ್ಯರ್ಥಿಯು ಪಕ್ಷವನ್ನು ಮುನ್ನಡೆಸುವ ನಾಯಕನಾಗಿ ಆಯ್ಕೆಯಾಗುತ್ತಾರೆ. ಸಂಸತ್ತಿನಲ್ಲಿಯೂ ಅವರು ನಾಯಕತ್ವ ವಹಿಸಿಕೊಳ್ಳುತ್ತಾರೆ. ಹೆಚ್ಚು ಸಂಸದರ ಬೆಂಬಲ ಪಡೆಯುವ ನಾಯಕನಿಗೆ ಸರ್ಕಾರ ರಚಿಸುವಂತೆ ರಾಣಿ ಸೂಚಿಸುತ್ತಾರೆ.

ಲೈಂಗಿಕ ಹಗರಣಗಳು

ಕನ್ಸರ್ವೇಟಿವ್ ಪಕ್ಷದ ಸಂಸದರಾಗಿದ್ದ ಅಹ್ಮದ್ ಖಾನ್ ಮತ್ತು ನೀಲ್ ಪರಿಷ್ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಿತ್ತು. 15 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಅಹ್ಮದ್ ಖಾನ್ ಮೇಲಿತ್ತು. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಜನಪ್ರತಿನಿಧಿಗಳ ಸಭೆಯಲ್ಲಿ ಕಲಾಪ ನಡೆಯುತ್ತಿದ್ದ ವೇಳೆ ನೀಲ್ ಅವರು, ಸ್ಮಾರ್ಟ್‌ಫೋನ್‌ನಲ್ಲಿ ನೀಲಿಚಿತ್ರ ವೀಕ್ಷಿಸಿದ್ದರು. ಇದಕ್ಕೆ ಭಾರಿ ಆಕ್ಷೇಪ ಮತ್ತು ಖಂಡನೆ ವ್ಯಕ್ತವಾಗಿತ್ತು. ಅದರ ಬೆನ್ನಲ್ಲೇ ನೀಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕನ್ಸರ್ವೇಟಿವ್ ಪಕ್ಷದ ಮತ್ತೊಬ್ಬ ಸಂಸದನನ್ನು ಅತ್ಯಾಚಾರ ಎಸಗಿದ ಆರೋಪದಲ್ಲಿ ಈ ವರ್ಷದ ಆರಂಭದಲ್ಲಿ ಬಂಧಿಸಲಾಗಿತ್ತು. ಇದೇ ಮೇನಲ್ಲಿ ಅವರಿಗೆ ಜಾಮೀನು ದೊರೆತಿತ್ತು. ಈ ಮೂರೂ ಪ್ರಕರಣಗಳು ಜಾನ್ಸನ್ ಅವರ ಸರ್ಕಾರದ ಜನಪ್ರಿಯತೆಯನ್ನು ತೀವ್ರವಾಗಿ ಬಾಧಿಸಿದ್ದವು.

ಪಾರ್ಟರ್‌ಸನ್ ಪ್ರಕರಣ

ಕನ್ಸರ್ವೇಟಿವ್ ಪಕ್ಷದ ಸಂಸದ ಮತ್ತು ಜಾನ್ಸನ್ ಅವರ ಆಪ್ತ ಒವೆನ್ ಪಾರ್ಟರ್‌ಸನ್ ಅವರು, ಲಾಬಿ ಕಾನೂನುಗಳನ್ನು ಉಲ್ಲಂಘಿಸಿದ ಆರೋಪ ಎದುರಿಸುತ್ತಿದ್ದರು. ಪಾರ್ಟರ್‌ಸನ್ ಅವರನ್ನು ಜನಪ್ರತಿನಿಧಿ ಸಭೆಯಿಂದ 30 ದಿನಗಳವರೆಗೆ ಅಮಾನತು ಮಾಡುವ ಶಿಫಾರಸನ್ನು ಜನಪ್ರತಿನಿಧಿ ಸಭೆಯ ಸಮಿತಿ 2021ರ ಅಕ್ಟೋಬರ್‌ನಲ್ಲಿ ಮಾಡಿತ್ತು.

ಈ ಶಿಫಾರಸಿಗೆ ಸಂಬಂಧಿಸಿದ ನಿರ್ಣಯವನ್ನು ಜನಪ್ರತಿನಿಧಿಗಳ ಸಭೆಯಲ್ಲಿ ಮತಕ್ಕೆ ಹಾಕಲಾಗಿತ್ತು. ಜಾನ್ಸನ್ ಅವರು ಆ ನಿರ್ಣಯಕ್ಕೆ ವಿರುದ್ಧವಾಗಿ ಮತ ಚಲಾಯಿಸಿದ್ದರು. ಇದರಿಂದ, ಜಾನ್ಸನ್ ಮತ್ತು ಅವರ ಸರ್ಕಾರವು ಭ್ರಷ್ಟರನ್ನು ಬೆಂಬಲಿಸುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಪಾರ್ಟರ್‌ಸನ್ ಅವರ ವಿರುದ್ಧ ನಡೆದ ತನಿಖೆಯನ್ನೇ ಪರಿಶೀಲಿಸಿಲು ಸಮಿತಿ ರಚಿಸಲಾಯಿತು. ನಂತರ ಪಾರ್ಟರ್‌ಸನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆದರೆ, ಅಷ್ಟರಲ್ಲಿ ಜಾನ್ಸನ್ ಅವರ ಜನಪ್ರಿಯತೆಗೆ ತೀವ್ರ ಹಾನಿಯಾಗಿತ್ತು.

ಆಧಾರ: ಬಿಬಿಸಿ, ರಾಯಿಟರ್ಸ್

ಉತ್ತರಾಧಿಕಾರಿ ಯಾರು?


ಬೋರಿಸ್ ಜಾನ್ಸನ್ ಅವರ ರಾಜೀನಾಮೆಯಿಂದ ಕನ್ಸರ್ವೇಟಿವ್ ಪಕ್ಷದ ನಾಯಕ ಹಾಗೂ ಬ್ರಿಟನ್‌ನ ಮುಂದಿನ ಪ್ರಧಾನಿ ಯಾರಾಗಲಿದ್ದಾರೆ ಎಂಬ ಬಗ್ಗೆ ಬಿರುಸಿನ ಚರ್ಚೆ ಶುರುವಾಗಿದೆ. ಜಾನ್ಸನ್ ಸಂಪುಟಕ್ಕೆ ಇತ್ತೀಚೆಗೆ ರಾಜೀನಾಮೆ ನೀಡಿದ್ದ, ಭಾರತ ಮೂಲದ ರಿಷಿ ಸುನಕ್ ಅವರು ಪ್ರಧಾನಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಅಟಾರ್ನಿ ಜನರಲ್ ಆಗಿರುವ ಭಾರತ ಮೂಲದ ಸುಯೆಲಾ ಬ್ರೇವರ್ಮನ್ ಅವರ ಹೆಸರೂ ಉನ್ನತ ಹುದ್ದೆಗೆ ಕೇಳಿಬರುತ್ತಿದೆ. ಜೊತೆಗೆ ಮೈಕೆಲ್ ಗೋವ್, ಪೆನಿ ಮೋರ್ಡಾಂಟ್, ಲಿಜ್ ಟ್ರಸ್, ಟಾಮ್ ಟೂಗೆನ್‌ಹ್ಯಾಟ್, ಬೆನ್ ವಾಲೆಸ್, ನದೀಮ್ ಜಹಾವಿ ಅವರೂ ಪ್ರಧಾನಿ ಹುದ್ದೆಯ ಆಕಾಂಕ್ಷಿಗಳಾಗಿದ್ದಾರೆ.

42 ವರ್ಷದ ರಿಷಿ ಸುನಕ್ ಅವರು ಬ್ರಿಟನ್‌ನ ಸೌತಾಂಪ್ಟನ್‌ನಲ್ಲಿ ಜನಿಸಿದವರು. ಅವರ ಪೋಷಕರು ಪಂಜಾಬ್‌ನಿಂದ ಬ್ರಿಟನ್‌ಗೆ ವಲಸೆ ಹೋದವರು. ರಿಷಿ ಅವರು ವಿನ್‌ಚೆಸ್ಟರ್ ಕಾಲೇಜ್, ಆಕ್ಸ್‌ಫರ್ಡ್ ಹಾಗೂ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ರಿಷಿ ಪತ್ನಿ ಅಕ್ಷತಾ ಮೂರ್ತಿ ಅವರು ಇನ್ಫೊಸಿಸ್ ಸ್ಥಾಪಕ ನಾರಾಯಣ ಮೂರ್ತಿ ಅವರ ಮಗಳು. ಈ ದಂಪತಿ ಸದ್ಯ ನಾರ್ತ್‌ಅಲರ್ಟನ್ ನಿವಾಸಿಗಳು. ಕ್ಯಾಲಿಫೋರ್ನಿಯಾದಲ್ಲಿ ಓದುತ್ತಿದ್ದಾಗ ಅಕ್ಷತಾ ಹಾಗೂ ರಿಷಿ ಪರಸ್ಪರ ಪರಿಚಿತರು. ಕೃಷ್ಣ ಹಾಗೂ ಅನೌಷ್ಕಾ ಎಂಬ ಇಬ್ಬರು ಮಕ್ಕಳಿದ್ದಾರೆ.

ರಿಚ್‌ಮಂಡ್‌ನ ನಾರ್ತ್ ಯಾರ್ಕ್‌ಶೈರ್ ಕ್ಷೇತ್ರದಿಂದ 2015ರಲ್ಲಿ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿ ರಿಷಿ ಆಯ್ಕೆಯಾದರು. 2017 ಮತ್ತು 2019ರಲ್ಲೂ ಅವರು ಮರು ಆಯ್ಕೆಯಾದರು. ಹಣಕಾಸು ಖಾತೆಯ ಸಹ ಸಚಿವರಾಗಿ 2019ರ ಜುಲೈನಲ್ಲಿ ನೇಮಕವಾದರು. ವೆಸ್ಟ್‌ಮಿನ್‌ಸ್ಟರ್ ಹೊರಗಿನ ಕೆಲವರಿಗೆ ಮಾತ್ರ ಪರಿಚಯವಿದ್ದ ರಿಷಿ ಅವರಿಗೆ ಪ್ರಧಾನಿ ಬೋರಿಸ್ ಜಾನ್ಸನ್ ಅವರು ತಮ್ಮ ಸಂಪುಟದ ಮಹತ್ವದ ಹಣಕಾಸು ಖಾತೆಯನ್ನು ವಹಿಸಿ ಅಚ್ಚರಿ ಮೂಡಿಸಿದ್ದರು. ಅವರು 2020ರ ಫೆಬ್ರುವರಿಯಲ್ಲಿ ಹಣಕಾಸು ಇಲಾಖೆಯ ಜವಾಬ್ದಾರಿ ವಹಿಸಿಕೊಂಡರು. ಕೋವಿಡ್ ಸಮಯದಲ್ಲಿ ಆರ್ಥಿಕತೆಯನ್ನು ಸರಿದಾರಿಗೆ ತರಲು ಹರಸಾಹಸ ಪಟ್ಟಿದ್ದರು. ವ್ಯಾಪಾರಿಗಳು ಹಾಗೂ ಉದ್ಯಮಗಳಿಗೆ ಸಾವಿರಾರು ಕೋಟಿಯ ಪ್ಯಾಕೇಜ್ ಪ್ರಕಟಿಸಿದ್ದರು.

ಕನ್ಸರ್ವೇಟಿವ್ ಪಕ್ಷದ ನಾಯಕರಾಗಿ ರಿಷಿ ಆಯ್ಕೆಯಾಗಲಿದ್ದಾರೆ ಎಂಬ ಸೂಚನೆಗಳಿದ್ದರೂ, ಅವರ ವರ್ಚಸ್ಸು ಕುಂದಿಸುವ ಕೆಲವು ವಿದ್ಯಮಾನಗಳು ಇತ್ತೀಚಿನ ದಿನಗಳಲ್ಲಿ ನಡೆದಿವೆ. ಪತ್ನಿ ಅಕ್ಷತಾ ಮೂರ್ತಿ ಅವರು ತೆರಿಗೆ ಪ್ರಕರಣದಲ್ಲಿ ವಿವಾದದ ಕೇಂದ್ರಬಿಂದುವಾಗಿದ್ದರು. ಕೋವಿಡ್ ತಡೆಗೆ ವಿಧಿಸಲಾದ ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ರಿಷಿ ಮೇಲೆ ದಂಡ ವಿಧಿಸಲಾಗಿತ್ತು. ಡೌನಿಂಗ್ ಸ್ಟ್ರೀಟ್‌ನ ಪ್ರಧಾನಿ ನಿವಾಸದಲ್ಲಿ ನಡೆದ ಔತಣಕೂಟದಲ್ಲಿ ಭಾಗಿಯಾಗಿ ನಿಯಮಾವಳಿಗಳನ್ನು ಉಲ್ಲಂಘಿಸಿದ್ದರು. ರಿಷಿ ಹಣಕಾಸು ಸಚಿವರಾಗಿದ್ದ ಅವಧಿಯಲ್ಲಿ ಜೀವನವೆಚ್ಚ ದುಬಾರಿಯಿತ್ತು ಎಂದು ಹೇಳಲಾಗುತ್ತಿದೆ.

ಯಾರಿಗೆ ಮಣೆ?: ರಿಷಿ ಸುನಕ್ ಹಾಗೂ ಸಾಜಿದ್ ಜಾವಿದ್ ಅವರು ಸಂಪುಟದಿಂದ ಹೊರಬಂದಾಗ, ಜಾನ್ಸನ್ ಅವರ ಬೆಂಬಲಕ್ಕೆ ನಿಂತಿದ್ದವರು ವಿದೇಶಾಂಗ ಸಚಿವೆ ಲಿಜ್ ಟ್ರಸ್. ಜಾನ್ಸನ್ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಟ್ರಸ್ ಪ್ರಧಾನಿ ಹುದ್ದೆಯ ನಿರೀಕ್ಷೆಯಲ್ಲಿದ್ದಾರೆ. ದೊಡ್ಡ ಮಟ್ಟದ ಜನಪ್ರಿಯತೆ ಹೊಂದಿಲ್ಲದ ಅವರು ರಾಜತಾಂತ್ರಿಕವಾಗಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದಾರೆ. ಜಾನ್ಸನ್ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಸಾಜಿದ್ ಜಾವಿದ್ ಅವರು ರಿಷಿ ಅವರ ಜೊತೆ ರಾಜೀನಾಮೆ ನೀಡಿದವರು. ಪಾಕಿಸ್ತಾನದ ನಿರಾಶ್ರಿತ ವಲಸೆ ಕುಟುಂಬಕ್ಕೆ ಸೇರಿದ ಜಾವಿದ್, ಏರುತ್ತಿರುವ ಹಣದುಬ್ಬರದ ಬಗ್ಗೆ ದನಿ ಎತ್ತಿ ಸುದ್ದಿಯಾಗಿದ್ದರು. ಪತ್ರಿಕಾ ಕಾರ್ಯದರ್ಶಿಯಾಗಿ, ಡೇವಿಡ್ ಕ್ಯಾಮರೂನ್ ಸರ್ಕಾರದಲ್ಲಿ ಸಶಸ್ತ್ರ ಪಡೆಗಳ ಸಚಿವೆಯಾಗಿ ಕೆಲಸ ಮಾಡಿದ್ದ ಪೆನಿ ಮೋರ್ಡಂಟ್ ಜತೆಗೆ ಮೈಕೆಲ್ ಗೋವ್, ಟಾಮ್ ಟೂಗೆನ್‌ಹ್ಯಾಟ್, ಬೆನ್ ವಾಲೆಸ್, ನದೀಮ್ ಜಹಾವಿ ಸಹ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ.



ರಿಷಿ ಸುನಕ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 167

ಶಿವಾನುಗ್ರಹದಿಂದ ರಾಮನಾದ ವಿಷ್ಣು

'ಓ ಸತೀದೇವಿ, ಆದಿಕಾಲದಲ್ಲಿ ಜಗತ್ಕರ್ತನಾದ ಪರಮಶಿವನು ದೇವಶಿಲ್ಪಿಯಾದ ವಿಶ್ವಕರ್ಮನಿಂದ ತನ್ನ ಗೋಶಾಲೆಯ ಸಮೀಪದಲ್ಲಿ ರಮ್ಯವಾದ ಭವನವೊಂದನ್ನು ನಿರ್ಮಿಸಿದ. ಆ ಭವನದಲ್ಲಿ ಉತ್ತಮವಾದೊಂದು ಸಿಂಹಾಸನವನ್ನು ಮಾಡಿಸಿದ. ಅದರ ಮೇಲ್ಭಾಗದಲ್ಲಿ ವಿಘ್ನ ನಿವಾರಣೆಗಾಗಿ ಮಹಾದ್ಭುತವಾದ ಮತ್ತು ದಿವ್ಯವಾದ ಒಂದು ಶ್ವೇತಚ್ಛತ್ರಿಯನ್ನು ಇರಿಸಿದ. ಆ ಭವನಕ್ಕೆ ಇಂದ್ರ ಮೊದಲಾದ ದೇವತೆಗಳನ್ನಲ್ಲದೆ, ಸಿದ್ಧರು, ಗಂಧರ್ವರು, ನಾಗಗಳನ್ನು ಕರೆಸಿದ. ಜೊತೆಗೆ ವೇದಪುರುಷರು, ಬ್ರಹ್ಮನ ಮಾನಸಪುತ್ರರು, ಮರೀಚಿ ಮೊದಲಾದ ಮುನಿಗಳು, ದೇವತಾಸ್ತ್ರೀಯರು, ಅಪ್ಸರೆಯರೆಲ್ಲರನ್ನೂ ಆಹ್ವಾನಿಸಿದ. ರಾಜಾಭಿಷೇಕಕ್ಕೆ ಯೋಗ್ಯವಾದಂತಹ ವಸ್ತುಗಳು, ಐದು ಕಲಶಗಳಲ್ಲಿ ತೀರ್ಥಜಲಗಳನ್ನು ತರಿಸಿ, ಪಂಡಿತರಿಂದ ವೇದಘೋಷ ಮಾಡಿಸಿದ. ಬಳಿಕ ಹರಿಯನ್ನು ಬರಮಾಡಿಕೊಂಡು, ಶುಭಮೂಹೂರ್ತದಲ್ಲಿ ಸಿಂಹಾಸನದಲ್ಲಿ ಕುಳ್ಳಿರಿಸಿದ. ತಾನೇ ಹರಿಗೆ ಮಂಗಳಸ್ನಾನವನ್ನು ಮಾಡಿಸಿದ. ಅವನ ಶಿರಸ್ಸಿನಲ್ಲಿ ಕಿರೀಟವನ್ನಿರಿಸಿ ತೀರ್ಥಜಲಗಳಿಂದ ಅಭಿಷೇಕವನ್ನು ಮಾಡಿದ. ತನ್ನ ಐಶ್ವರ್ಯವನ್ನೆಲ್ಲಾ ಹರಿಗೆ ಅನುಗ್ರಹಿಸಿ, ಶಿವನು ಹರಿಯನ್ನು ಸ್ತುತಿಸಿದ.

ನಂತರ ಶಿವ ತಾನು ಕೊಟ್ಟ ವರಕ್ಕೆ ಅಧೀನನೆಂಬುದನ್ನು ಜಗತ್ತಿಗೆ ಸಾರಲು, ಅಲ್ಲಿದ್ದ ಬ್ರಹ್ಮನಿಗೆ ಹೇಳಿದ 'ಎಲೈ ಬ್ರಹ್ಮನೇ, ಇಂದಿನಿಂದ ನನ್ನಿಂದಲೂ ವಿಷ್ಣುವಿಗೆ ನಮಸ್ಕಾರ ಸಲ್ಲುತ್ತದೆ. ಎಲ್ಲ ದೇವತೆಗಳಂತೆ ನೀನು ಸಹ ಹರಿಯನ್ನು ನಮಸ್ಕರಿಸು. ಎಲ್ಲ ವೇದಗಳು ನನ್ನನ್ನು ವರ್ಣಿಸುವಂತೆ ಈ ಹರಿಯನ್ನೂ ವರ್ಣಿಸುತ್ತವೆ' ಎಂದು ಹೇಳಿದ.

ಆಗ ಪರಮೇಶ್ವರನು 'ಎಲೈ ವಿಷ್ಣು, ನನ್ನ ಅಪ್ಪಣೆಯಂತೆ ಇನ್ನು ಮುಂದೆ ಸಕಲ ಲೋಕಗಳ ಸೃಷ್ಟಿ ಪ್ರಳಯಗಳನ್ನು ಮಾಡುವವನಾಗು. ಭಕ್ತರಿಗೆ ಧರ್ಮ, ಅರ್ಥ, ಕಾಮಗಳನ್ನು ಕರುಣಿಸುತ್ತಾ, ದುಷ್ಟರನ್ನು ಶಿಕ್ಷಿಸಿ ಸಜ್ಜನರಿಗೆ ಅನುಗ್ರಹವನ್ನು ಮಾಡು. ನಿನಗೆ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನು ಕೊಡುವೆ. ಇವುಗಳನ್ನು ಪರಿಗ್ರಹಿಸಿ, ಅದ್ಭುತವಾದ ಅನೇಕ ಲೀಲೆಗಳನ್ನು ಪ್ರದರ್ಶಿಸುತ್ತಾ ಸ್ವತಂತ್ರನಾಗಿ ಪ್ರವರ್ತಿಸುತ್ತಿರು. ನಿನ್ನನ್ನು ಯಾರು ದ್ವೇಷಿಸುವರೋ, ಅವರನ್ನು ನಾನು ಶಿಕ್ಷಿಸುವೆ. ನಿನ್ನ ಪ್ರೀತಿಸುವ ಭಕ್ತರಿಗೆ ಉತ್ತಮ ಸುಖವನ್ನು ಕಲ್ಪಿಸುವೆ. ನಾನು ಕೊಡುವ ಈ ಮಾಯೆಯನ್ನೂ ತೆಗೆದುಕೊ. ಇದನ್ನು ದೇವತೆಗಳೂ ಅತಿಕ್ರಮಿಸಲಾರರು. ಈ ಮಾಯೆಯಿಂದ ಜಗತ್ತೆಲ್ಲವೂ ಮೋಹಿಸಲ್ಪಟ್ಟು ಜಡರೂಪವಾಗುವುದು. ನೀನು ನನ್ನ ಎಡಬಾಹುವಾದರೆ, ಈ ಬ್ರಹ್ಮನು ನನ್ನ ಬಲಬಾಹು. ರುದ್ರ ನನ್ನ ಹೃದಯ ಮತ್ತು ನನ್ನ ಪೂರ್ಣಾಂಶನು. ನನಗೂ ರುದ್ರನಿಗೂ ಭೇದವಿಲ್ಲ. ಆದುದರಿಂದ ನೀನು ರುದ್ರನನ್ನು ಪೂಜಿಸಿಬೇಕು. ಬ್ರಹ್ಮಾದಿಗಳಿಗೂ ಅವನು ಪೂಜ್ಯನು. ಎಲೈ ಭಕ್ತಶ್ರೇಷ್ಠ ವಿಷ್ಣು, ಈ ಜಗತ್ತನ್ನು ಪಾಲಿಸು. ಆಯಾಯ ಕಾಲಕ್ಕೆ ಅವತಾರಗಳನ್ನು ಮಾಡಿ ದುಷ್ಟರನ್ನು ನಿಗ್ರಹಿಸು. ಭೂಪರಿಪಾಲನೆಗಾಗಿ ನೀನು ಮಾಡುವ ಅವತಾರಪುರುಷರೆಲ್ಲರೂ ನನ್ನ ಭಕ್ತರಾಗಿರುವರು. ಅವರೆಲ್ಲರನ್ನೂ ನನ್ನ ವರದಂತೆ ಪ್ರೀತಿಯಿಂದ ನೋಡುವೆ' ಎಂದ.

ಹೀಗೇ ಶಿವನು ಹರಿಗೆ ಅಖಂಡವಾದ ಐಶ್ವರ್ಯವನ್ನು ಅನುಗ್ರಹಿಸಿದ. ಮುಂದೆ ವಿಷ್ಣುವು ಭವನದ ಗೋಶಾಲೆ ನೋಡಿಕೊಳ್ಳುತ್ತಾ ಗೋಪವೇಷವುಳ್ಳವನಾದ. ಮುಂದೆ ದ್ವಾಪರದಲ್ಲಿ ಅವನು ಗೋಕುಲದಲ್ಲಿ ಅವತರಿಸಿ ಗೋಪರು, ಗೋಪಿಯರು ಮತ್ತು ಗೋವುಗಳನ್ನು ಸಲಹಿದ. ಮುಂದೆ ಶಿವನ ಆಜ್ಞೆಯಂತೆ ವಿಷ್ಣುವು ಜಗತ್ತನ್ನು ಪಾಲಿಸುವುದಕ್ಕಾಗಿ ಅನೇಕ ಅವತಾರಗಳನ್ನು ಮಾಡಿ, ಜಗತ್ತನ್ನು ರಕ್ಷಿಸಿದ. ಈಗ ರಾವಣನೆಂಬ ದೈತ್ಯನ ಸಂಹಾರಕ್ಕಾಗಿ ವಿಷ್ಣುವು ರಾಮ, ಭರತ, ಲಕ್ಷ್ಮಣ, ಶತ್ರುಘ್ನ ಎಂಬ ನಾಲ್ಕು ರೂಪದಿಂದ ಅವತರಿಸಿದ್ದಾನೆ. ಆ ನಾಲ್ವರಲ್ಲಿ ನಾನು ರಾಮನಾಗಿರುವೆ' ಎಂದು ಸತೀದೇವಿಗೆ ರಾಮ ಹೇಳುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಎನ್‌ಡಿ ಟಿ.ವಿ. ಸುದ್ದಿವಾಹಿನಿಯ ಸಂಸ್ಥಾಪಕ ಪ್ರಣಯ್ ರಾಯ್, ಪತ್ರಕರ್ತೆ ರಾಧಿಕಾ ರಾಯ್ ಮತ್ತು 'ದಿ ಹಿಂದು' ಪತ್ರಿಕೆ ಸಮೂಹದ ಮುಖ್ಯಸ್ಥ ಎನ್. ರಾಮ್ ಅವರು ಇರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ.ಪಾರ್ದೀವಾಲಾ ಅವರ ಜೊತೆ ಪತ್ರಕರ್ತರುಭೋಜನಕೂಟದಲ್ಲಿ ಪಾಲ್ಗೊಂಡಿದ್ದಾರೆ. ಬಿಜೆಪಿ ಮತ್ತು ನೂಪುರ್ ಶರ್ಮಾ ಅವರನ್ನು ದೂಷಿಸುವ ಎಲ್ಲರೂ ಒಟ್ಟಿಗೇ ಸೇರಿದ್ದಾರೆ' ಎಂದು ಈ ಚಿತ್ರಕ್ಕೆ ವಿವರಣೆ ನೀಡಲಾಗಿದೆ. ಬಿಜೆಪಿಯ ವಕ್ತಾರೆ ಆಗಿದ್ದ ನೂಪುರ್ ಶರ್ಮಾ ಅವರ ವಿರುದ್ಧ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಈ ಚಿತ್ರ ವೈರಲ್ ಆಗಿದೆ.



ಈ ಚಿತ್ರದ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ತಮಿಳುನಾಡಿನ 'ಮೈಂಡ್ ಎಸ್ಕೇಪ್ಸ್ ಕ್ಲಬ್' ಸಂಸ್ಥೆ ಈ ವರ್ಷದ ಆರಂಭದಲ್ಲಿ ಊಟಿಯಲ್ಲಿ ಆಯೋಜಿಸಿದ್ದ ಭೋಜನಕೂಟದ ಚಿತ್ರ ಇದಾಗಿದೆ. ತಮಿಳುನಾಡಿನ ಹಣಕಾಸು ಸಚಿವ ಪಿ. ತ್ಯಾಗರಾಜನ್, ಸಿಪಿಎಂ ನಾಯಕರಾದ ಬೃಂದಾ ಕಾರಟ್, ಪ್ರಕಾಶ್ ಕಾರಟ್ ಮತ್ತು ಮೈಂಡ್ ಎಸ್ಕೇಪ್ಸ್ ಕ್ಲಬ್ ಸಂಸ್ಥಾಪಕಿ ದೀಪಾಲಿ ಸಿಖಂಡ್ ಅವರು ಪತ್ರಕರ್ತರ ಜೊತೆ ಇದ್ದಾರೆ. ಈ ವೈರಲ್ ಚಿತ್ರದ ಕುರಿತು ಎನ್. ರಾಮ್ ಅವರೂ ಸ್ಪಷ್ಟನೆ ನೀಡಿದ್ದು, ಸುಳ್ಳು ಮಾಹಿತಿ ಹರಡುತ್ತಿರುವವರ ವಿರುದ್ಧ ಹರಿಹಾಯ್ದಿದ್ದಾರೆ' ಎಂದು ದಿ ಕ್ವಿಂಟ್ ವಿವರಿಸಿದೆ.

ಗುಂಡಣ್ಣ





ಬೆರಗಿನ ಬೆಳಕು
ಗುರುರಾಜ ಕರಜಗಿ

ಎರಡು ಬೆಂಕಿಗಳು

ಮನೆಯ ಸುಡುತಿಹ ಬೆಂಕಿಯುರಿಯನಾರಿಸೆ ನುಗ್ಗು|
ಮನವ ಸುಡುವುರಿಯಿಂದ ದೂರ ನೀಂ ನಿಲ್ಲು||
ತನುವಿಗುಪಕೃತಿಗೆಯ್ಪ ಭರದಿ ನೀನಾತುಮದ|
ಅನುನಯವ ಕೆಡಿಸದಿರು – ಮಂಕುತಿಮ್ಮ ||667||

ಪದ-ಅರ್ಥ: ಬೆಂಕಿಯುರಿಯನಾರಿಸೆ = - ಬೆಂಕಿಯ + ಉರಿಯ + ಆರಿಸೆ(ಆರಿಸಲು), ಸುಡುವುರಿಯಿಂದ = ಸುಡುವ + ಉರಿಯಿಂದ, ತನುವಿಗುಪಕೃತಿಗೆಯ್ಪ = ತನುವಿಗೆ + ಉಪಕೃತಿ(ಉಪಕಾರ) + ಗೆಯ್ಪ(ಮಾಡುವ), ನೀನಾತುಮದ = - ನೀನು + ಆತುಮದ(ಆತ್ಮದ), ಅನುನಯ = ಹೊಂದುವಿಕೆ, ಹದ.

ವಾಚ್ಯಾರ್ಥ: ಮನೆಗೆ ಹೊತ್ತಿದ ಬೆಂಕಿಯನ್ನು ಆರಿಸಲು ನೀನು ನುಗ್ಗು ಆದರೆ ಮನಸ್ಸನ್ನು ಸುಡುವ ಬೆಂಕಿಯಿAದ ದೂರ ನಿಲ್ಲು. ದೇಹಕ್ಕೆ ಉಪಕಾರ ಮಾಡುವ ಆತುರದಲ್ಲಿ ಆತ್ಮದ ಆದರಣೆಯನ್ನು, ಹದವನ್ನು ಮರೆಯಬೇಡ.

ವಿವರಣೆ: ಇದೊಂದು ಆಫ್ರಿಕನ್ ಕಥೆ. ಜೋ ಒಬ್ಬ ಅರಣ್ಯ ರಕ್ಷಕ. ಅವನು ಅಗ್ನಿಶಾಮಕ ದಳದ ನಾಯಕನೂ ಹೌದು. ಅವನು ಕಾಡನ್ನು ತನ್ನ ಮನೆಯಂಗಳದಂತೆ ಜೋಪಾನವಾಗಿ ಕಾಯ್ದುಕೊಂಡಿದ್ದಾನೆ. ಸತತವಾಗಿ ಕಾಡನ್ನು ಸುತ್ತಿ ಸುತ್ತಿ, ಅಲ್ಲಿದ್ದ ವನ್ಯಮೃಗಗಳಿಗೆ ಯಾವ ತೊಂದರೆಯೂ ಆಗದಂತೆ, ಅವುಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ, ರೋಗ ರುಜಿನಗಳು ಹಬ್ಬದಂತೆ ಜಾಗರೂಕತೆ ವಹಿಸಿದ್ದಾನೆ. ಅವನು ಸದಾಕಾಲ ಇರುವುದು ಕಾಡಿನಲ್ಲೇ. ಮನೆಗೆ ಹೋಗುವುದೇ ಅಪರೂಪ. ಇಷ್ಟಾದರೂ ಒಂದು ಸಲ ಕಾಡಿಗೆ ಬೆಂಕಿ ಬಿತ್ತು. ಜೋ ತಕ್ಷಣ ಕಾರ್ಯಪ್ರವೃತ್ತನಾದ. ನೀರು ತುಂಬಿದ ವಾಹನಗಳನ್ನು ತೆಗೆದುಕೊಂಡು ನುಗ್ಗಿದ. ಬೆಂಕಿ, ಗಾಳಿಯೊಂದಿಗೆ ಸೇರಿ ಭೋರಿಡುತ್ತಿದೆ. ಕಣ್ಣಮುಂದೆಯೇ ಕಾಡಿನ ಮರಗಳು ಸುಟ್ಟು ಬೂದಿಯಾಗುತ್ತಿವೆ.ಸ್ವಲ್ಪ ಮುಂದೆಯೇ ಆನೆಗಳ ವಾಸ. ಅದರ ಬಲಭಾಗದಲ್ಲಿ ಅನೇಕ ಕಾಡೆಮ್ಮೆಗಳಿವೆ. ಈ ಬೆಂಕಿಯಲ್ಲಿ ಅದೆಷ್ಟು ಪ್ರಾಣಿಗಳು, ಪಕ್ಷಿಗಳು ಬೆಂದುಹೋಗುತ್ತವೋ ಎಂಬ ಕಾಳಜಿಯೊಂದಿಗೆ ಜೋ ತನ್ನ ಸಹಚರರೊಂದಿಗೆ ವಾಹನಗಳೊಡನೆ ಬೆಂಕಿಯೊಳಗೆ ನುಗ್ಗುವುದರೊಂದಿಗೆ ಎರಡು ಹೆಲಿಕಾಪ್ಟರ್‌ಗಳನ್ನು ತರಿಸಿ ಮೇಲಿನಿಂದ ನೀರನ್ನು ಸುರಿಸುವಂತೆ ಮಾಡಿದ. ಐದು ತಾಸುಗಳ ಸತತ ಹೋರಾಟದ ನಂತರ ಬೆಂಕಿ ನಂದಿತು. ಜೋ ನಿರಾಳನಾದ. ಆದರೆ ಈ ಉತ್ಸಾಹದ ಕಾರ್ಯದಲ್ಲಿ ಅವನ ಕೈಗವಸುಗಳು ಸುಟ್ಟು ಹೋಗಿ ಅವನ ಎಡಗೈ ಬಹುಪಾಲು ಸುಟ್ಟುಹೋಗಿತ್ತು. ಆತ ಆಫೀಸಿಗೆ ಬಂದ. ಅವನಿಗೊಂದು ಫೋನ್ ಬಂತು. ಜೋ ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನ ಸಹೋದ್ಯೋಗಿಗಳು, ಅವನು ಕೈನೋವಿನಿಂದ ಅಳುತ್ತಿದಾನೆ ಎಂದುಕೊಂಡು ಸಾಂತ್ವನ ಹೇಳುತ್ತ ಕೈಗೆ ಮುಲಾಮು ಹಚ್ಚತೊಡಗಿದರು. ಆತ ಹೇಳಿದ, 'ನನ್ನ ದೇಹಕ್ಕಾದದ್ದು ಏನೂ ಅಲ್ಲ, ಅದು ಒಂದು ವಾರದಲ್ಲಿ ಗುಣವಾದೀತು. ಆದರೆ ಹೃದಯ ಹೊತ್ತಿ ಉರಿಯುತ್ತಿದೆ. ನನ್ನ ಒಬ್ಬನೇ ಮಗ, ನಶೆಯ ಹಾದಿ ಹಿಡಿದು ತನ್ನ ತಾಯಿಯನ್ನು ಹೊಡೆದು, ತಾನೂ ಮಹಡಿಯ ಮೇಲಿಂದ ಹಾರಿ, ಆಸ್ಪತ್ರೆ ಸೇರಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾನೆ. ಈ ಬೆಂಕಿಯನ್ನು ಹೇಗೆ ಆರಿಸಲಿ?'

ಕಗ್ಗದ ಚಿಂತನೆ ಇದೇ. ಮನೆಗೆ, ಭೌತಿಕ ವಸ್ತುಗಳಿಗೆ ಬೆಂಕಿ ಹೊತ್ತಿದರೆ ಅದನ್ನು ಆರಿಸಲು ಮುನ್ನುಗ್ಗು ಆದರೆ ಮನವನ್ನು ಸುಡುವಂಥ ಬೆಂಕಿಯಿಂದ ದೂರವಿರು. ಮನಸ್ಸನ್ನು ಸುಡುವ ಯಾವ ಕಾರ್ಯವನ್ನು ಮಾಡಬೇಡ. ದೇಹಕ್ಕೆ ಒಳ್ಳೆಯದನ್ನು ಮಾಡುವ ಆತುರದಲ್ಲಿ ಆತ್ಮಸುಖವನ್ನು, ಮನಸ್ಸಿನ ನೆಮ್ಮದಿಯನ್ನು ಮರೆಯಬೇಡ. ದೇಹ ಮತ್ತು ಆತ್ಮ ಇವೆರಡರ ತೃಪ್ತಿಯೇ ಬದುಕಿಗೆ ಹಿತವಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜುಲೈ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ನವಮಿ ಗಂ. 18-26 ನಕ್ಷತ್ರ: ಚಿತ್ತಾ ಗಂ. 12-14 ಯೋಗ: ಶಿವ ಗಂ. 09-00, ಕರಣ: ಬಾಲವ ಗಂ. 07-03, ಮಿಥುನ ಮಾಸದ 23 ನೇ ದಿನ.

ರಾಹುಕಾಲ: ಬೆಳಿಗ್ಗೆ 10:30 – 12:00

ಸೂರ್ಯೋದಯ: 06-13 **ಸೂರ್ಯಾಸ್ತ:** 06-58

ಮುಸ್ಲಿಂ ದಿನಾಂಕ: 08 ಜುಲ್‌ಹಿಜಾ

ದಿನ ವಿಶೇಷ: ಮೇಳ ಷರೀಕ್ ಭಗವತಿ (ಕಾಶ್ಮೀರ)

ಅದೃಷ್ಟ ಸಂಖ್ಯೆ: 4, 11

ಮೇಷ: ಸಂಘ ಸಂಸ್ಥೆಗಳ ಸಭೆಗಳಲ್ಲಿ ನಿಮ್ಮ ಮಾತಿಗೆ ಬೆಲೆ ಇಲ್ಲದಂತೆ ಅಥವಾ ನಿಮ್ಮ ಮಾತನ್ನು ಅಪಾರ್ಥವಾಗಿ ಕಲ್ಪಿಸಿಕೊಂಡು ನಿಮ್ಮನ್ನು ದೂಷಿಸುವಂತಹ ಘಟನೆ ಸಂಭವಿಸಬಹುದು. ನಿಮ್ಮದ್ದೇ ಆದ ಚೌಕಟ್ಟಿನಲ್ಲಿರುವ ಪ್ರಯತ್ನ ಮಾಡಿ.

ವೃಷಭ: ಅನೇಕ ದಿನಗಳಿಂದ ನೀವು ಸೇವಿಸುತ್ತಿರುವ ಅಪಥ್ಯದ ಆಹಾರದ ಪರಿಣಾಮವಾಗಿ ಆರೋಗ್ಯದಲ್ಲಿ ವ್ಯತ್ಯಾಸ. ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ಮಧ್ಯವರ್ತಿಗಳ ಮಾತನ್ನು ನಿರ್ಲಕ್ಷಿಸುವುದು ಸಮಂಜಸ ಅನಿಸಿಕೆ.

ಮಿಥುನ: ಮನಸ್ಸಿನಲ್ಲಿರುವ ಹಲವು ಚಿಂತೆಗಳಿಗೆ ಇಂದು ಉತ್ತರ ಸಿಗುವುದು. ಸೋಮಾರಿತನ ಅಥವಾ ಬೇಜವಾಬ್ದಾರಿತನದ ತಪ್ಪುಗಳಿಂದ ಶಿಕ್ಷೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಜವಾಬ್ದಾರಿಯುತವಾದ ನಡುವಳಿಕೆ ಇರಲಿ.

ಕರ್ಕಾಟಕ: ಆಲೋಚಿಸಿದಂತೆ ಕೆಲಸ ಕಾರ್ಯಗಳು ನಡೆಯದೇ ಸೋಲು, ಹಿನ್ನಡೆ ಎಂಬಂತೆ ನಿಮ್ಮ ಮನಸ್ಸಿಗೆ ಕಾಣಬಹುದು, ಆದರೆ ದೇವರ ಆಶೀರ್ವಾದದಿಂದ ಕಾಲಕ್ಕೆ ಸರಿಯಾಗಿ ನಿಮ್ಮ ಕೆಲಸಗಳು ಪೂರ್ಣಗೊಳ್ಳುತ್ತದೆ.

ಸಿಂಹ: ನಿಮ್ಮ ಶತ್ರುಗಳಿಗೂ ಶುಭ ಹಾರೈಸುವ ರೀತಿಯಲ್ಲಿ ನಿಮ್ಮ ವ್ಯಕ್ತಿತ್ವವಾಗಿರಲಿ. ಮಳೆಯಲ್ಲಿ ನೆನೆಯುವುದು ಅಥವಾ ನಿಮ್ಮ ದೇಹಕ್ಕೆ ಅಹಿತಕರವಾದ ಕೆಲವು ಕೆಲಸದ ಕಾರಣದಿಂದ ಜ್ವರಾದಿ ಬಾಧೆಗಳು ಕಾಣಿಸಿಕೊಳ್ಳಬಹುದು.

ಕನ್ಯಾ: ನೀವಾಡುವ ಮಾತುಗಳಿಂದ ನಿಮಗೆ ಗೌರವವು ದೊರಕುವುದು. ಆದ್ದರಿಂದ ಮಾತಿನಲ್ಲಿ ನಿಗಾವಿರಲಿ. ಮನೆಯ ರಿಪೇರಿ ಕೆಲಸ ಮಾಡಿಸಬೇಕಾದ ಅನಿವಾರ್ಯ. ಒಪ್ಪಂದಕ್ಕೆ ಸಹಿ ಹಾಕಲು ಇಂದು ಸರಿಯಾದ ದಿನ.

ತುಲಾ: ನಿರೀಕ್ಷಿತ ಧನಾರ್ಜನೆಯಿಂದ ನೆಮ್ಮದಿ. ಇನ್ನೊಬ್ಬರಿಗೆ ಕೊಡಬೇಕಾದ ವಸ್ತುಗಳನ್ನು ಅವರಿಗೆ ತಲುಪಿಸುವುದನ್ನು ಮರೆಯದಿರಿ. ಧಾರ್ಮಿಕ ನಾಯಕರಿಗೆ ಇಂದು ಮರೆಯಲಾಗದ ಘಟನೆ ನಡೆಯುವುದು.

ವೃಶ್ಚಿಕ: ಅಧ್ಯಯನ ನಿರತರಿಗೆ ಸೂಕ್ತವಾದ ಸಲಹೆ, ಮಾರ್ಗದರ್ಶನ ಮತ್ತು ಅಧ್ಯಯನಕ್ಕೆ ಬೇಕಾದ ಗ್ರಂಥಗಳು ದೊರೆಯುವುದು. ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿರಿ.

ಧನು: ಯೋಗ, ಧ್ಯಾನಕ್ಕಾಗಿ ಅಲ್ಪ ಸಮಯವನ್ನು ಮೀಸಲಿಡಿ. ಇದರಿಂದ ನಿಮ್ಮ ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಪ್ರೀತಿ ವಿಷಯದಲ್ಲಿ ಮುಂದೇನು ಮಾಡಬೇಕೆಂಬ ಸೂಚನೆ ನಿಮಗೆ ಈ ದಿನ ಲಭಿಸುವುದು.

ಮಕರ: ಆರ್ಥಿಕ ಸುಧಾರಣೆಯಿಂದ ಕುಟುಂಬದ ಎಲ್ಲ ತೊಂದರೆಗಳು ನಿವಾರಣೆ. ಕೆಲಸಕ್ಕೆ ಇನ್ನೊಂದು ಕೆಲಸ ಜೊತೆಜೊತೆ ಗೂಡಿ ಮುಕ್ತಾಯ ಹಂತ ತಲುಪಲು ಸಾಧ್ಯವಾಗುವುದಿಲ್ಲ. ಪ್ರಯಾಣದಲ್ಲಿ ಸುಖವಿರುವುದು.

ಕುಂಭ: ನಿಮ್ಮ ಯಾವುದೇ ಪ್ರಯತ್ನ ನಿಲ್ಲಿಸದೆ ಜಾಗರೂಕತೆಯಿಂದ ಕೆಲಸ ಮುಂದುವರಿಸಿ. ಜೀವಶಾಸ್ತ್ರದ ಶೈಕ್ಷಣಿಕ ರಂಗದಲ್ಲಿರುವ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಇಂದಿನ ದಿನವು ಯಶೋದಾಯಕವಾಗಿರುತ್ತದೆ.

ಮೀನ: ನಿಮ್ಮ ಸಕಾರಾತ್ಮಕ ಮನೋಭಾವವು ಕಳೆದು ಹೋದಂತಿದ್ದ ಆಸಕ್ತಿ ಮರುಕಳಿಸುವಂತೆ ಮಾಡುವುದು. ಯಶೋದಾಯಕವಾದ ಭವಿಷ್ಯಕ್ಕಾಗಿ ಯೋಜನೆ ರೂಪಿಸುವಲ್ಲಿ ಪತ್ನಿಯ ಸಹಾಯವನ್ನು, ಸಲಹೆಯನ್ನು ಸ್ವೀಕರಿಸಿ.

ಪದಬಂಧ 5012


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಲೋಪಗಳನ್ನೆಲ್ಲಾ ತಿದ್ದಿ ಸರಿಪಡಿಸುವವನು (4)
3.ಸಸ್ಯಗಳಿಂದ ತೆಗೆದ ಎಣ್ಣೆ (4)
5.ಹದವಾಗಿ ಸುಡುವಿಕೆ! (3)
7.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
9.ಮಂಕರಿಯನ್ನು ಹೊತ್ತವ ಬಲು ದಡ್ಡ! (2)
11.ಕಾವ್ಯಲಕ್ಷಣಗಳನ್ನೆಲ್ಲಾ ಬಲ್ಲವನು (4)
12.ಯೆಂಡ್ಕುಡುಕ ರತ್ನನ ಜಗತ್ತು! (4)
13.ಮುನಿದಾಗ ಮಾರಿಯಾಗುವ ಸ್ತ್ರೀ! (2)
14.ನೆನಪಲ್ಲೇ ಇರುವ ಕಾರಣ (2)
16.ಅರಸುತ್ತಿರುವಾಗ ಕಾಣಿಸಿದ ದೊರೆ (3)
18.ಕರೆಯಲು ಬಂದಾಗ ಕೊಟ್ಟಿರುವ ಆಹ್ವಾನ (4)
19.ಮಾಧ್ಯಮದಿಂದ ಗೊತ್ತಾಗಿರುವ ವಸ್ತುಸ್ಥಿತಿ! (4)

ಮೇಲಿಂದ ಕೆಳಕ್ಕೆ

1.ಸುಮ್ಮನೆ ನಸುನಕ್ಕರೆ ಇಷ್ಟೊಂದು ಹಿಗ್ಗು! (3)
2.ಕಲಾವಿದನ ಮನೆ ಬಾಗಿಲು ಕಾಣುತ್ತಿದೆಯೇ? (2)
3.ಯೌವ್ವನದಲ್ಲಿ ನೋಡಿರುವ ಅರಣ್ಯ! (2)
4.ತಿರುವಿನಲ್ಲಿ ಕಾಣಿಸುತ್ತಿರುವ ಭಿಕ್ಷುಕ (3)
6.ಕರಾವಳಿ ಬ್ರಾಹ್ಮಣರ ಒಂದು ಪಂಗಡ (3)
8.ಗುರಿಯಲ್ಲಿ ಪರಾಧೀನತೆಯೇ? (5)
9.ಮಂತ್ರವಲ್ಲ! ರಹಸ್ಯವಾಗಿ ಕೂಡಿ ಮಾತಾಡುವುದು! (5)
12.ಪತ್ತೇದಾರನಿಗೆ ಗೋಚರಿಸಿದ ಸ್ವರ (3)
13.ಸಿನಿಕನ ಮೂಗಿದು! (3)
15.ವನದಲ್ಲಿ ಬೀಸುತ್ತಿರುವ ಗಾಳಿ (3)
16.ಅಬಲೆ ನೋಡುತ್ತಿರುವ ತರಂಗ (2)
17.ಕಸವಿಸಿಗೊಂಡರೂ ರುಚಿ ಎಂದುಬಿಡಿ! (2)



5011ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿವಾದ 3.ಗುಮಾನಿ 5.ನರ 6.ರಿಪೇರಿ 7.ಯಮ 9.ಶಿಲಾರಸ 10.ಅನುಭಾವಿ 11.ತಟ 13.ಪರಾಗ 15.ಪರ 16.ಲುಬ್ಧಕ 17.ದರಗ

ಮೇಲಿಂದ ಕೆಳಕ್ಕೆ: 1.ವಿವರ 2.ದಳ್ಳುರಿ 3.ಗುಜರಿ 4.ನಿಶ್ಚಯ 5.ನಖಶಿಖಾಂತ 8.ಮನೋವಿಕಾರ 12.ಟಪಾಲು 13.ಪದಕ 14.ಗದ್ಗದ 15.ಪಲ್ಲಂಗ

ಸುಡೊಕು 5398

					7		1	
		7	6		4	2		9
	2	9	3				5	
2	4					9		
				4		6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5397 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಜತೆ ಜೈಶಂಕರ್ ಮಾತುಕತೆ

‘ಗಡಿ ಬಿಕ್ಕಟ್ಟು ತ್ವರಿತ ಇತ್ಯರ್ಥ ಅಗತ್ಯ’



ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯುತ್ತಿರುವ ಜಿ–20 ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಗೂ ಮುನ್ನ ಸಚಿವ ಎಸ್‌.ಜೈಶಂಕರ್ ಹಾಗೂ ಚೀನಾದ ವಾಂಗ್ ಯಿ ಅವರು ಗುರುವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿ ಬಿಕ್ಕಟ್ಟನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಅಗತ್ಯವಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಗುರುವಾರ ಪ್ರತಿಪಾದಿಸಿದ್ದಾರೆ.

‘ವಾಸ್ತವ ನಿಯಂತ್ರಣ ರೇಖೆಯಲ್ಲಿನ (ಎಲ್ಎಸಿ) ಸಂಘರ್ಷ ಪೀಡಿತ ಸ್ಥಳಗಳಿಂದ ಉಭಯ ದೇಶಗಳ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಸಚಿವ ಜೈಶಂಕರ್ ಅವರು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರಿಗೆ ವಿವರಿಸಿದ್ದಾರೆ.

ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯುತ್ತಿರುವ ಜಿ-20 ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಗೂ ಮುನ್ನ ನಡೆದ ಮಾತುಕತೆ ವೇಳೆ ಜೈಶಂಕರ್ ಈ ವಿಷಯ ಪ್ರಸ್ತಾಪಿಸಿದರು. ಸೇನೆಯನ್ನು ಹಿಂಪಡೆಯುವ ಪ್ರಕ್ರಿಯೆ ಪೂರ್ಣಗೊಂಡಾಗ ಮಾತ್ರ ಗಡಿಯಲ್ಲಿ ಶಾಂತಿ ಹಾಗೂ ಸ್ಥಿರತೆ ನೆಲೆಗೊಳ್ಳಲು ಸಾಧ್ಯ ಎಂಬುದನ್ನು ಜೈಶಂಕರ್ ಪುನರುಚ್ಚರಿಸಿದರು ಎಂದು ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಭಾರತದ ವಿದ್ಯಾರ್ಥಿಗಳು ಮತ್ತೆ ಚೀನಾಕ್ಕೆ ಮರಳುವುದು, ಉಭಯ ದೇಶಗಳ ನಡುವೆ ವಿಮಾನಗಳ ಸಂಚಾರ ಪುನರಾರಂಭಿಸುವುದು ಸೇರಿದಂತೆ ಇತರ ವಿಷಯಗಳು ನಾಯಕರ ಮಾತುಕತೆ ವೇಳೆ ಪ್ರಸ್ತಾಪವಾದವು.

ಜಾಗತಿಕ ವಿದ್ಯಮಾನಗಳು ಹಾಗೂ ಅವುಗಳಿಂದ ಜಿ-20 ಕಾರ್ಯದ ಮೇಲಾಗುವ ಪರಿಣಾಮಗಳ ಬಗ್ಗೆಯೂ ಉಭಯ ನಾಯಕರು ಚರ್ಚಿಸಿದರು ಎಂದೂ ಪ್ರಕಟಣೆ ತಿಳಿಸಿದೆ.

‘ಎಲ್ಲಿಯೂ ಸುರಕ್ಷಿತ ಎಂಬ ಭಾವನೆ ಮೂಡುತ್ತಿಲ್ಲ’

ಚೆನ್ನೈ: ‘ಈ ಸಮಯದಲ್ಲಿ ನನಗೆ ಎಲ್ಲಿಯೂ ಸುರಕ್ಷಿತ ಎಂಬ ಭಾವನೆ ಮೂಡುತ್ತಿಲ್ಲ’ ಎಂದು ಕಾಳಿ ಸಾಕ್ಷ್ಯಚಿತ್ರದ ನಿರ್ದೇಶಕಿ, ನಟಿ ಲೀನಾ ಮಣಿಮೇಕಲೈ ಹೇಳಿದ್ದಾರೆ.

ಕಾಳಿ ಮಾತೆಯು ಎಲ್‌ಜಿಬಿಟಿಕ್ಯೂ ಧ್ವಜ ಹಿಡಿದು ಸಿಗರೇಟ್ ಸೇದುತ್ತಿರುವಂತೆ ಚಿತ್ರಿಸಲಾದ ತಮ್ಮ ಸಾಕ್ಷ್ಯಚಿತ್ರದ ಪೋಸ್ಟರ್ ಕುರಿತಂತೆ ಎದುರಾಗುತ್ತಿರುವ ಪ್ರತಿರೋಧಗಳ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಇಡೀ ದೇಶವು ಅತಿ ದೊಡ್ಡ ಪ್ರಜಾಪ್ರಭುತ್ವದ ಬದಲು ದ್ವೇಷದ ಯಂತ್ರವಾಗಿ ಅಧೋಗತಿಗಿಳಿದಿದೆ ಎಂದು ಭಾಸವಾಗುತ್ತಿದೆ. ಈಗ ನನಗೆ ಎಲ್ಲಿಯೂ ಸುರಕ್ಷತೆಯ ಭಾವನೆ ಮೂಡುತ್ತಿಲ್ಲ’ ಎಂದು ಬ್ರಿಟಿಷ್ ಸುದ್ದಿ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಶ್ರೀನಗರ: ರಾಮಾನುಜರ ಪುತ್ಥಳಿ ಅನಾವರಣ



ರಾಮಾನುಜಾಚಾರ್ಯರ ಶಾಂತಿ ಪುತ್ಥಳಿಗೆ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಪುಷ್ಪನಮನ ಸಲ್ಲಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು

ನವದೆಹಲಿ: ಯದುಗಿರಿ ಯತಿರಾಜ ಮಠದ ವತಿಯಿಂದ ಕಾಶ್ಮೀರದ ಶ್ರೀನಗರದಲ್ಲಿ ನಿರ್ಮಾಣಗೊಂಡಿರುವ ರಾಮಾನುಜಾಚಾರ್ಯರ ಶಾಂತಿ ಪುತ್ಥಳಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ವರ್ಚುವಲ್ ಆಗಿ ಗುರುವಾರ ಅನಾವರಣ ಮಾಡಿದರು.

ನವೀಕರಣಗೊಂಡ ಯಾತ್ರಿ ಭವನವನ್ನೂ ಸಚಿವರು ಇದೇ ವೇಳೆ ಉದ್ಘಾಟಿಸಿದರು. ಯಾತ್ರಿ ಭವನ ಪುನರ್ ನಿರ್ಮಾಣಕ್ಕೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅನುದಾನ ಒದಗಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಅಮಿತ್ ಶಾ, 'ವಿಶಿಷ್ಟಾದ್ವೈತ ತತ್ವದ ಜನಕರಾದ ರಾಮಾನುಜರು, ಸಮಾನತೆಯ ಸಮಾಜಕ್ಕೆ ತುಡಿದ ಯುಗ ಪ್ರವರ್ತಕರು' ಎಂದು ಬಣ್ಣಿಸಿದರು.

‘ರಾಮಾನುಜರು ಉದಾರ ಧರ್ಮದ ಆಚಾರ್ಯರಾಗಿದ್ದು, ತಾರತಮ್ಯದ ವಿರುದ್ಧ ದನಿ ಎತ್ತಿದರು. ಈ ಮೂಲಕ ಅವರು ದೀನರ ಬಾಳಿಗೆ ಬೆಳಕಾದರು. ಸಾವಿರ ವರ್ಷ ಕಳೆದರೂ ಅವರ ವಿಚಾರಗಳು ಪ್ರಸ್ತುತವಾಗಿವೆ. ಈ ಪ್ರತಿಮೆಯು ಭಾರತವನ್ನು ಮತ್ತಷ್ಟು ಗಟ್ಟಿಯಾಗಿ ಬೆಸೆಯಲಿದೆ’ ಎಂದರು.

ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ‘ಸಮಾನತೆ, ಶಾಂತಿ, ಸಬಲೀಕರಣ ಇವುಗಳಿಗಾಗಿ ರಾಮಾನುಜರು ಹಂಬಲಿಸುತ್ತಿದ್ದರು’ ಎಂದರು.

ತೇಜಸ್ವಿ ಸೂರ್ಯ ಮಾತನಾಡಿ, ‘ನಮ್ಮ ಸನಾತನ, ಧಾರ್ಮಿಕ ಪರಂಪರೆಯಲ್ಲಿ ಕಾಶ್ಮೀರದ ಸ್ಥಾನವು ಮುಕುಟಪ್ರಾಯವಾಗಿದೆ. ಕಾಶ್ಮೀರದಲ್ಲಿ ನಾಗರಿಕತೆಯ, ಸಾಂಸ್ಕೃತಿಕ ಪುನರುತ್ಥಾನದ ಉದ್ದೇಶಕ್ಕಾಗಿ ಏನಾದರೊಂದು ಕಾರ್ಯ ನಿಭಾಯಿಸುವ ಆಕಾಂಕ್ಷೆ ಬಹುದಿನಗಳಿಂದ ಮನೆಮಾಡಿತ್ತು. ಮಠಕ್ಕೆ ನೆರವಾಗುವ ಮೂಲಕ ಆ ಆಸೆ ನೆರವೇರಿದೆ’ ಎಂದರು.

ಯದುಗಿರಿ ಯತಿರಾಜ ನಾರಾಯಣ ಜೀಯರ್ ಆಶೀರ್ವಚನ ನೀಡಿ, ರಾಮಾನುಜರ ವಿಚಾರಗಳ ಪ್ರಸ್ತುತತೆಯನ್ನು ತಿಳಿಸಿದರು.

‘ಪಾನ್ಸರೆ ಹತ್ಯೆ: ತನಿಖೆ ಎಟಿಎಸ್‌ಗೆ ವರ್ಗಾಯಿಸಿ’

ಮುಂಬೈ (ಪಿಟಿಐ): ‘ವಿಚಾರವಾದಿ ಗೋವಿಂದ ಪಾನ್ಸರೆ ಹತ್ಯೆ ಪ್ರಕರಣದ ತನಿಖೆಯನ್ನು ಮಹಾರಾಷ್ಟ್ರ ಸಿಐಡಿಯಿಂದ ಎಟಿಎಸ್‌ಗೆ ವರ್ಗಾಯಿಸಿ’ ಎಂದು ಪಾನ್ಸರೆ ಅವರ ಸೊಸೆ ಮೇಘಾ ಪಾನ್ಸರೆ, ಬಾಂಬೆ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ನ್ಯಾಯಾಲಯಕ್ಕೆ ಗುರುವಾರ ಮಧ್ಯಂತರ ಅರ್ಜಿ ಸಲ್ಲಿಸಿರುವ ಅವರು ‘2015ರಿಂದಲೂ ಪ್ರಕರಣದ ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡು ಬಂದಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿ.ಎಂ ಶಿಂಧೆ ಅಧಿಕಾರ ಸ್ವೀಕಾರ

ಮುಂಬೈ(ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ಗುರುವಾರ ಸಚಿವಾಲಯದಲ್ಲಿ ಔಪಚಾರಿಕವಾಗಿ ಅಧಿಕಾರ ವಹಿಸಿಕೊಂಡರು.

ಇದಕ್ಕೂ ಮೊದಲು ಕಚೇರಿಯಲ್ಲಿ ಪೂಜಾ ವಿಧಿ ವಿಧಾನಗಳು ನಡೆದವು. ಮುಖ್ಯಮಂತ್ರಿ ಕಚೇರಿಯಲ್ಲಿ ಶಿವಸೇನಾ ಸಂಸ್ಥಾಪಕ ಬಾಳಾ ಠಾಕ್ರೆ ಅವರ ದೊಡ್ಡ ಫೋಟೊ ಮತ್ತು ಶಿಂಧೆ ಅವರ ಗುರು ಆನಂದ್ ದಿಘೆ ಅವರ ಚಿತ್ರ ಇದೆ. ಸಚಿವಾಲಯದ ಕಟ್ಟಡವನ್ನು ಪ್ರವೇಶಿಸುತ್ತಿದ್ದಂತೆ ಮುಖ್ಯಮಂತ್ರಿ ಅವರು ಛತ್ರಪತಿ ಶಿವಾಜಿ ಮಹಾರಾಜ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ಶಿವಸೇನಾ ತೊರೆದ ಮಾಜಿ ಸಂಸದ: ಮಾಜಿ ಸಂಸದ ಆನಂದರಾವ್ ಅಡ್ಸುಲ್ ಅವರು ಪಕ್ಷ ನಾಯಕತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ವಿದ್ಯಾರ್ಥಿ ಕೊರತೆ: ₹23.83 ಲಕ್ಷ ವೇತನ ಹಿಂದಿರುಗಿಸಲು ಮುಂದಾದ ಪ್ರಾಧ್ಯಾಪಕ

ಮುಜಫ್ಫರ್‌ಪುರ (ಪಿಟಿಐ): ತಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತ್ಯಂತ ಕಡಿಮೆ ಎಂಬ ಕಾರಣಕ್ಕೆ ಎರಡು ವರ್ಷ ಒಂಬತ್ತು ತಿಂಗಳಲ್ಲಿ ಪಡೆದಿದ್ದ ಸಂಬಳ ಮತ್ತು ಇತರ ಭತ್ಯೆಯನ್ನು ವಿಶ್ವವಿದ್ಯಾಲಯಕ್ಕೆ ಮರಳಿಸಲು ಬಿಹಾರದ ಪ್ರಾಧ್ಯಾಪಕ ಮುಂದಾಗಿದ್ದಾರೆ.

ಬಿಹಾರದ ಬಾಬಾ ಸಾಹೇಬ್ ಭೀಮ್ ರಾವ್ ಅಂಬೇಡ್ಕರ್ ವಿಶ್ವವಿದ್ಯಾಲಯದಲ್ಲಿ ಹಿಂದಿ ಸಹಾಯಕ ಪ್ರಾಧ್ಯಾಪಕರಾಗಿರುವ ಲಲನ್ ಕುಮಾರ್ (33) ಎರಡು ವರ್ಷ ಒಂಬತ್ತು ತಿಂಗಳಲ್ಲಿ ಪಡೆದ ವೇತನದ ಮೊತ್ತವಾದ ₹23.83 ಲಕ್ಷವನ್ನು ಹಿಂದಿರುಗಿಸುವುದಾಗಿ ಹೇಳಿದ್ದಾರೆ.

ಲಲನ್ ಕುಮಾರ್ ಅವರು ಹಿಂದಿರುಗಿಸಿರುವ ಹಣವನ್ನು ಸ್ವೀಕರಿಸಿಲ್ಲ. ವೇತನ ಹಿಂಪಡೆಯುವಂಥ ಅವಕಾಶವು ವಿಶ್ವವಿದ್ಯಾಲಯದ ಆಡಳಿತಕ್ಕೆ ಇಲ್ಲ ಎಂದು ಸಹ ಕುಲಪತಿ ಆರ್.ಕೆ. ಠಾಕೂರ್ ಅವರು ಹೇಳಿದ್ದಾರೆ.

ತಮ್ಮ ಈ ಕ್ರಮದ ಕುರಿತು ಪ್ರತಿಕ್ರಿಯೆ ನೀಡಿರುವ ಲಲನ್ ಕುಮಾರ್, ‘ಹಣವನ್ನು ಸ್ವೀಕರಿಸಲೇಬೇಕು ಎಂದು ಅಧಿಕಾರಿಗಳಿಗೆ ಬಂದೂಕು ತೋರಿಸಿ ಹೆದರಿಸಲಾಗದು. ನಾನು ಸ್ಪಷ್ಟಪಡಿಸಲು ಇಚ್ಛಿಸುತ್ತಿರುವುದು ಏನೆಂದರೆ, ಬೋಧನೆಯನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗಲಿಲ್ಲ ಎಂದರೆ ನನಗೆ ಸಂಬಳ ಪಡೆಯುವ ಹಕ್ಕು ಕೂಡಾ ಇಲ್ಲ. ಈ ವಿಚಾರದಲ್ಲಿ ನನ್ನ ಭಾವನೆಯನ್ನು ಸರಿಯಾಗಿಯೇ ವ್ಯಕ್ತಪಡಿಸಿದ್ದೇನೆ ಎಂದು ತಿಳಿದಿದ್ದೇನೆ’ ಎಂದು ಹೇಳಿದ್ದಾರೆ.

ನೂರಾರು ವಿದ್ಯಾರ್ಥಿಗಳು ಹಿಂದಿಯನ್ನು ಐಚ್ಛಿಕ ವಿಷಯ ಅಥವಾ ಉಪ ವಿಷಯವನ್ನಾಗಿ ತೆಗೆದುಕೊಂಡಿದ್ದಾರೆ. ಪಾಠ ಮಾಡಲು ಬೇಕಾದಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ ಎಂದು ಲಲನ್ ಅವರು ಕಲಿಸುತ್ತಿರುವ ಕಾಲೇಜಿನ ಪ್ರಾಂಶುಪಾಲ ಹೇಳಿದ್ದಾರೆ.

‘ಇದಕ್ಕೂ ಮೊದಲು ಲಲನ್ ಅವರು ಹಲವಾರು ಬಾರಿ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ ವಿದ್ಯಾರ್ಥಿಗಳು ತರಗತಿಗೆ ಹಾಜರಾಗುತ್ತಿಲ್ಲ ಎಂಬ ಕುರಿತು ಅವರು ಎಂದಿಗೂ ನಮ್ಮ ಗಮನ ಸೆಳೆದಿಲ್ಲ’ ಎಂದು ಸಹ ಕುಲಪತಿ ತಿಳಿಸಿದ್ದಾರೆ.

ಇದೇ ಕಾಲೇಜಿನಲ್ಲಿ ಕಲಿಸುತ್ತಿರುವ ಅರುಣ್ ಕುಮಾರ್ ಎಂಬ ಸಹಾಯಕ ಪ್ರಾಧ್ಯಾಪಕ ಕೂಡ ವಿದ್ಯಾರ್ಥಿಗಳಿಲ್ಲ ಎಂಬ ಕಾರಣಕ್ಕೆ ಸಂಬಳ ವಾಪಸ್ ನೀಡುವುದಾಗಿ ಈ ಹಿಂದೆ ಹೇಳಿದ್ದರು ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಜುಬೈರ್ ಅರ್ಜಿ: ಸುಪ್ರೀಂ ಕೋರ್ಟ್ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಹಿಂದೂ ದೇವರ ಕುರಿತು 2018ರಲ್ಲಿ ಮಾಡಿದ್ದ ಆಕ್ಷೇಪಾರ್ಹ ಟ್ವೀಟ್ ಪ್ರಕರಣದಲ್ಲಿ ಬಂಧಿತರಾಗಿರುವ ‘ಆಲ್ಟ್ ನ್ಯೂಸ್’ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ಜಾಮೀನು ಹಾಗೂ ಉತ್ತರ ಪ್ರದೇಶದಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿರುವ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ನಡೆಸಲು ಸುಪ್ರೀಂಕೋರ್ಟ್ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಜೆ.ಕೆ. ಮಹೇಶ್ವರಿ ಅವರಿದ್ದ ರಜೆಕಾಲದ ಪೀಠವು, ಮುಖ್ಯ ನ್ಯಾಯಮೂರ್ತಿಗಳ ಅನುಮೋದನೆಗೆ ಒಳಪಟ್ಟು ಈ ಪ್ರಕರಣವನ್ನು ಶುಕ್ರವಾರದ ವಿಚಾರಣೆ ಪಟ್ಟಿಗೆ ಸೇರಿಸಲಾಗಿದೆ ಎಂದು ಗುರುವಾರ ಹೇಳಿದೆ.

ಜುಬೈರ್ ಪರ ಹಾಜರಾಗಿದ್ದ ಹಿರಿಯ ವಕೀಲ ಕಾಲಿನ್ ಗೊನ್ಸಾಲ್ವಿಸ್, ಜುಬೈರ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿದ್ದು, ಸದ್ಯ ಅವರು ಬಂಧನದಲ್ಲಿದ್ದಾರೆ. ಜುಬೈರ್‌ಗೆ ಪ್ರಾಣ ಬೆದರಿಕೆ ಇದ್ದು, ಆದಷ್ಟು ತುರ್ತು ಈ ಅರ್ಜಿಯ ವಿಚಾರಣೆ ನಡೆಸಬೇಕು ಎಂದು ಪೀಠಕ್ಕೆ ಅವರು ಮನವಿ ಮಾಡಿದರು.

ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಜುಬೈರ್ ಅವರ ವಿರುದ್ಧ ಹಿಂದೂ ಶೇರ್ ಸೇನಾದ ಸಿತಾಪುರ ಜಿಲ್ಲಾಧ್ಯಕ್ಷ ಭಗವಾನ್ ಶರಣ್ ದೂರು ನೀಡಿದ್ದು, ಉತ್ತರ ಪ್ರದೇಶದಲ್ಲಿ ಪ್ರಕರಣ ದಾಖಲಾಗಿತ್ತು.

ಜೂನ್ 27ರಂದು ದೆಹಲಿ ಪೊಲೀಸರು ಜುಬೈರ್ ಅವರನ್ನು ಬಂಧಿಸಿದ್ದಾರೆ.

ವೈದ್ಯೆ ವರಿಸಿದ ಪಂಜಾಬ್ ಸಿ.ಎಂ ಮಾನ್



ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಗುರುಪ್ರೀತ್ ಕೌರ್ ಅವರನ್ನು ಗುರುವಾರ ವಿವಾಹವಾದರು –ಪಿಟಿಐ ಚಿತ್ರ

ಚಂಡೀಗಡ: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕುರುಕ್ಷೇತ್ರದ ವೈದ್ಯೆ ಗುರುಪ್ರೀತ್ ಕೌರ್ ಅವರನ್ನು ಗುರುವಾರ ಸರಳವಾಗಿ ವಿವಾಹವಾದರು.

ಮಾನ್ ಅವರ ಚಂಡೀಗಡದ ನಿವಾಸದಲ್ಲಿ ಸಿಖ್ ಸಂಪ್ರದಾಯದ ಪ್ರಕಾರ ನಡೆದ ವಿವಾಹ ಸಮಾರಂಭದಲ್ಲಿ ಅವರ ತಾಯಿ, ಸಹೋದರಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎಎಪಿಯ ಕೆಲ ನಾಯಕರು ಉಪಸ್ಥಿತರಿದ್ದರು ಎಂದು ಎಎಪಿ ಮೂಲಗಳು ತಿಳಿಸಿವೆ.

ಸಮಾರಂಭದ ಹಿನ್ನೆಲೆಯಲ್ಲಿ ಮಾನ್ ಅವರ ನಿವಾಸಕ್ಕೆ ಬಿಗಿ ಭದ್ರತೆ ಒದಗಿಸಲಾಗಿತ್ತು.

ಮಾನ್ ಈ ಹಿಂದೆ ಇಂದರ್ ಪ್ರೀತ್ ಕೌರ್ ಅವರನ್ನು ಮದುವೆಯಾಗಿದ್ದರು. ಅವರಿಗೆ 2015 ರಲ್ಲಿ ವಿಚ್ಛೇದನ ನೀಡಿದ್ದರು. ಮಾನ್ ಅವರ ಮೊದಲ ಪತ್ನಿ ಮತ್ತು ಇಬ್ಬರು ಮಕ್ಕಳು ಅಮೆರಿಕದಲ್ಲಿ ನೆಲೆಸಿದ್ದಾರೆ.

ಜುಬೈರ್ ಬಂಧನ: ಜರ್ಮನಿ ಟೀಕೆಗೆ ತರಾಟೆ

ನವದೆಹಲಿ (ಪಿಟಿಐ): ಪತ್ರಕರ್ತ ಮೊಹಮ್ಮದ್ ಜುಬೈರ್ ಅವರ ಬಂಧನವನ್ನು ಟೀಕಿಸಿರುವ ಜರ್ಮನಿಯ ನಡೆಗೆ ಭಾರತ ಅಸಮಾಧಾನ ವ್ಯಕ್ತಪಡಿಸಿದೆ.

ಭಾರತದ ನ್ಯಾಯಾಂಗ ವ್ಯವಸ್ಥೆಯು ಸ್ವಾಯತ್ತವಾಗಿದೆ. ಪ್ರಕರಣದ ಬಗ್ಗೆ ಮಾಹಿತಿಯಿಲ್ಲದೇ ಮಾತನಾಡುವುದನ್ನು ನಿಲ್ಲಿಸಿ ಎಂದು ತೀಕ್ಷ್ಣವಾಗಿ ಹೇಳಿದೆ.

ಜುಬೈರ್ ಅವರನ್ನು ಪೊಲೀಸರು ಬಂಧಿಸಿರುವ ಪ್ರಕರಣವನ್ನು ಉಲ್ಲೇಖಿಸಿದ್ದ ಜರ್ಮನಿಯ ವಿದೇಶಾಂಗ ಇಲಾಖೆಯ ಅಧಿಕಾರಿ, ಪತ್ರಕರ್ತರಿಗೆ ಕಿರುಕುಳ ನೀಡಬಾರದು ಎಂದು ಅಭಿಪ್ರಾಯಪಟ್ಟಿದ್ದರು.

ಈ ಮಾತಿಗೆ ಪ್ರತಿಕ್ರಿಯೆ ನೀಡಿರುವ ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ಅರಿಂದಮ್ ಬಾಗ್ಚಿ, ‘ಇದು ಆಂತರಿಕ ವಿಚಾರ. ಈ ಪ್ರಕರಣ ನ್ಯಾಯಾಲಯದಲ್ಲಿದೆ. ನ್ಯಾಯಾಂಗದ ವ್ಯಾಪ್ತಿಯಲ್ಲಿರುವ ಪ್ರಕರಣದ ಬಗ್ಗೆ ನಾನಾಗಲೀ ಅಥವಾ ಯಾರೇ ಆಗಲಿ ಮಾತನಾಡುವುದು ಸೂಕ್ತವಲ್ಲ’ ಎಂದು ಹೇಳಿದ್ದಾರೆ.

ಅಭಿವೃದ್ಧಿಯ ಅರ್ಥ ಬಡವರ ಸಬಲೀಕರಣ: ಪ್ರಧಾನಿ

ವಾರಾಣಸಿ (ಪಿಟಿಐ): ‘ಅಭಿವೃದ್ಧಿ ಎಂದರೆ ಕೇವಲ ಚಮಕ್–ದಮಕ್ ಅಲ್ಲ. ಬದಲಾಗಿ ಬಡವರ, ದಮನಿತರ, ಆದಿವಾಸಿಗಳ, ಮಹಿಳೆಯರ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಸಬಲೀಕರಣ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ವಾರಾಣಸಿಯಲ್ಲಿ ಗುರುವಾರ ಹೇಳಿದರು.

₹1,774 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ/ ಶಿಲಾನ್ಯಾಸ ನೆರವೇರಿಸಿದ ಬಳಿಕ ಮಾತನಾಡಿದರು. ‘ಸಂಸದನಾಗಿ ಸೇವೆ ಸಲ್ಲಿಸಲು ಕಾಶಿ ನನಗೆ ಅವಕಾಶ ನೀಡಿದೆ. ಅಡ್ಡದಾರಿಗಳಿಂದ ಜನರಿಗಾಗಲೀ ಅಥವಾ ದೇಶಕ್ಕಾಗಲೀ ಪ್ರಯೋಜನವಿಲ್ಲ. ಕೆಲ ನಾಯಕರು ಮಾತ್ರ ಅಡ್ಡದಾರಿಗಳಿಂದ ಪ್ರಯೋಜನ ಪಡೆಯಬಹುದು ಎಂದು ಕಾಶಿಯ ಜನರು ದೇಶಕ್ಕೆ ಸಂದೇಶ ನೀಡಿದ್ದಾರೆ’ ಎಂದರು.

ಅಖಿಲ ಭಾರತ ಅಂತರ ವಿ.ವಿ ಕೊಕ್ಕೊ: ಲವ್ಲಿ ಪ್ರೊಫೆಷನಲ್ ವಿ.ವಿ ರನ್ನರ್ ಅಪ್

ಮೈಸೂರು ವಿ.ವಿ ಚಾಂಪಿಯನ್

• ಮೋಹನ್‌ಕುಮಾರ ಸಿ.



ಮೈಸೂರಿನಲ್ಲಿ ಅಖಿಲ ಭಾರತ ಅಂತರ ವಿವಿ ಮಹಿಳಾ ಕೊಕ್ಕೊ ಫೈನಲ್ ಪಂದ್ಯಾವಳಿಯಲ್ಲಿ ಟ್ರೋಫಿಯೊಂದಿಗೆ ಚಾಂಪಿಯನ್ ಮೈಸೂರು ವಿಶ್ವವಿದ್ಯಾಲಯ ತಂಡ. ನಿಂತವರು: ಎಸ್‌ಮೇಘನಾ, ಪ್ರಕೃತಿ, ಪ್ರೀತಿ, ನಾಗವೇಣಿ, ಮೇಘನಾ ಹಾಗೂ ತುಳಸಿ. ಕುಳಿತವರು: ಮೋನಿಕಾ, ವಿನುತಾ, ಅರ್ಪಿತಾ (ನಾಯಕಿ), ಮಂಜುಳಾ, ಚೈತ್ರಾ ಹಾಗೂ ತೇಜಸ್ವಿನಿ. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೈಸೂರು: ಆತಿಥೇಯ ಮೈಸೂರು ವಿಶ್ವವಿದ್ಯಾಲಯ ತಂಡವು ಗುರುವಾರ ನಡೆದ ಅಖಿಲ ಭಾರತ ಅಂತರ ವಿಶ್ವ-ವಿದ್ಯಾಲಯಗಳ ಮಹಿಳಾ ಕೊಕ್ಕೊ ಟೂರ್ನಿಯ ಫೈನಲ್‌ನಲ್ಲಿ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡವನ್ನು 10- 7ರಿಂದ ಮಣಿಸಿ ಮೊದಲ ಬಾರಿ ಪ್ರಶಸ್ತಿ ಜಯಿಸಿತು.

ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ಮೈಸೂರು ತಂಡದ ಎಲ್.ಮೋನಿಕಾ, ಲವ್ಲಿ ಪ್ರೊಫೆಷನಲ್ ತಂಡದ ಏಳು ಮಂದಿಯನ್ನು ಔಟ್ ಮಾಡಿದರೆ, ಕೆ.ಆರ್.ತೇಜಸ್ವಿನಿ, ಎಲ್.ಚೈತ್ರಾ ಜೋಡಿಯ ಡಿಫೆನ್ಸ್ ತಂತ್ರಗಳಿಗೆ ಪಂಜಾಬ್ ಆಟಗಾರ್ತಿಯರು ಶರಣಾದರು.

ಮೊದಲ ಸುತ್ತಿನ ಚೇಸಿಂಗ್‌ನಲ್ಲಿ ಮೈಸೂರು ಆಕ್ರಮಣಕಾರಿಯಾ-ಗಿ ಆಟವಾಡಿತು. ಎಲ್.ಮೋನಿಕಾ ಪಂಜಾಬ್ ತಂಡದ ಮೂವರನ್ನು ಔಟ್ ಮಾಡಿದರೆ, ಎಸ್.ವಿನುತಾ, ಬಿ.ಚೈತ್ರಾ, ಅರ್ಪಿತಾ ತಲಾ ಒಂದು ಅಂಕದ ಕಾಣಿಕೆ ನೀಡಿದರು. ಲವ್ಲಿ ವಿಶ್ವವಿದ್ಯಾಲಯದ ನೀತಾ ದೇವಿ 4.20 ನಿಮಿಷ ಅಂಗ-ಳದಲ್ಲಿದ್ದರು. ಉಳಿದವರನ್ನು ಎರಡು ನಿಮಿಷಗಳೊಳಗೆ ಮೈಸೂರು ಔಟ್ ಮಾಡಿತು. ಅದರಿಂದ 6–0ಯ ಮುನ್ನಡೆ ಪಡೆಯಿತು.

ಡಿಫೆನ್ಸ್‌ನಲ್ಲಿ ತೇಜಸ್ವಿನಿ, ಮೋನಿಕಾ ಹಾಗೂ ಚೈತ್ರಾ ಕ್ರಮವಾಗಿ 8 ನಿಮಿಷ, 2.5 ನಿಮಿಷ, 3.5 ನಿಮಿಷ ಕಾಡಿದರು. ತೇಜಸ್ವಿನಿ ಅವರನ್ನು ಔಟ್ ಮಾಡಲು ಲವ್ಲಿ ತಂಡದ ಆಟಗಾರ್ತಿಯರು ಸುಸ್ತಾದರು. ಮೂವರ ತಂತ್ರದಿಂದ ಎದುರಾಳಿಗಳಿಗೆ ಹೆಚ್ಚು ಅಂಕ ಸಿಗಲಿಲ್ಲ. ಲವ್ಲಿ ತಂಡವು ಒಬ್ಬರನ್ನು ಔಟ್ ಮಾಡುವತ್ತ ಗುರಿಯನ್ನು ಇರಿಸದಿದ್ದ-ರಿಂದ ಬೆಲೆ ತೆರಬೇಕಾಯಿತು. 3–6ರ ಹಿನ್ನಡೆ ಅನುಭವಿಸಬೇಕಾಯಿತು.

ಎರಡನೇ ಸುತ್ತಿನ ಚೇಸಿಂಗ್‌ನಲ್ಲೂ ಮೋನಿಕ ನಾಲ್ವರನ್ನು ಔಟ್ ಮಾಡುವ ಮೂಲಕ ಮೈಸೂರಿನ ಗೆಲುವನ್ನು ಸುಲ-ಭಗೊಳಿಸಿದರು. ಡಿಫೆನ್ಸ್‌ನಲ್ಲಿ ಚೈತ್ರಾ 4.30 ನಿಮಿಷ ಕಣದಲ್ಲಿದ್ದರು.

ಮೈಸೂರಿನ ತೇಜಸ್ವಿನಿ ಉತ್ತಮ ಡಿಫೆಂಡರ್, ಮೋನಿಕಾ ಉತ್ತಮ ಚೇಸರ್, ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯ ನೀತಾ ದೇವಿ ಡಾಜ್ಜರ್ ಪ್ರಶಸ್ತಿಗೆ ಪಾತ್ರರಾದರು.

ಸೆಮಿಫೈನಲ್‌ನಲ್ಲಿ ಮೈಸೂರು, ಔರಂಗಾಬಾದ್‌ನ ಅಂಬೇಡ್ಕರ್ ವಿಶ್ವವಿದ್ಯಾಲಯವನ್ನು 8–7ರಲ್ಲಿ ಸೋಲಿಸಿ ಅಂತಿಮ ಘಟ್ಟಕ್ಕೆ ಪ್ರವೇಶಿಸಿದ್ದರೆ, ಲವ್ಲಿ ವಿಶ್ವವಿದ್ಯಾಲಯವು ರೋಹ್ಟಕ್‌ನ ಎ.ಡಿ.ವಿಶ್ವವಿದ್ಯಾಲಯನ್ನು 9–6ರಿಂದ ಮಣಿಸಿ ಫೈನಲ್ ಪ್ರವೇಶಿಸಿತ್ತು. ಮೈಸೂರು ಇದುವರೆಗೂ ಮೂರು ಬಾರಿ ಮೂರನೇ ಸ್ಥಾನ ಪಡೆದಿದ್ದೇ ಸಾಧನೆಯಾಗಿತ್ತು.

ಹರ್ಮನ್, ಪೂಜಾ ಆಟಕ್ಕೆ ಒಲಿದ ಜಯ

ಶ್ರೀಲಂಕಾ ವಿರುದ್ಧ ಭಾರತಕ್ಕೆ ಸರಣಿ ಗೆಲುವು; ರಾಜೇಶ್ವರಿಗೆ ಮೂರು ವಿಕೆಟ್



ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ ಸೊಬಗು ಪಿಟಿಐ ಚಿತ್ರ

ಪಲೆಕೆಲೆ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಪೂಜಾ ವಸ್ತ್ರಕರ್ ಅವರ ಅರ್ಧಶತಕಗಳ ಬಲದಿಂದ ಭಾರತ ಮಹಿಳೆಯರ ಕ್ರಿಕೆಟ್ ತಂಡವು ಶ್ರೀಲಂಕಾ ಎದುರು ಕ್ಲೀನ್‌ಸ್ವೀಪ್ ಸಾಧಿಸಿತು.

ಗುರುವಾರ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಭಾರತ ತಂಡವು 39 ರನ್‌ಗಳಿಂದ ಗೆದ್ದಿತು. ಸರಣಿಯನ್ನು 3–0ಯಿಂದ ಮಡಿಲಿಗೆ ಹಾಕಿಕೊಂಡಿತು.

ಟಾಸ್ ಗೆದ್ದ ಶ್ರೀಲಂಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹರ್ಮನ್‌ಪ್ರೀತ್ (75; 88ಎ, 4X7, 6X2) ಮತ್ತು ಪೂಜಾ ವಸ್ತ್ರಕರ್ (ಔಟಾಗದೆ 56; 65ಎ, 6X3) ಅವರ ಬ್ಯಾಟಿಂಗ್ ಬಲದಿಂದ ಭಾರತ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 255 ರನ್ ಗಳಿಸಿತು. ಅದಕ್ಕುತ್ತರವಾಗಿ ಶ್ರೀಲಂಕಾ ತಂಡವು 47.3 ಓವರ್‌ಗಳಲ್ಲಿ 216 ರನ್ ಗಳಿಸಲಷ್ಟೇ ಶಕ್ತವಾಯಿತು. ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ (36ಕ್ಕೆ3) ಲಂಕಾ ತಂಡದ ಬ್ಯಾಟಿಂಗ್ ಪಡೆಗೆ ಪೆಟ್ಟು ಕೊಟ್ಟರು.

ಭಾರತ ತಂಡಕ್ಕೆ ಬ್ಯಾಟಿಂಗ್‌ನಲ್ಲಿ ಉತ್ತಮ ಆರಂಭ ಲಭಿಸಲಿಲ್ಲ. ಸ್ಮೃತಿ ಮಂದಾನ ಕೇವಲ ಆರು ರನ್ ಗಳಿಸಿ ಔಟಾದರು. ಇನ್ನೊಂದೆಡೆ ಕ್ರೀಸ್‌ನ-ಲ್ಲಿದ್ದ ಶಫಾಲಿ ವರ್ಮಾ (49; 50ಎ) ಒಂದು ರನ್‌ನಿಂದ ಅರ್ಧಶತಕ ತಪ್ಪಿಸಿಕೊಂಡರೂ ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಅವರಿಗೆ ಯಷ್ಟಿಕಾ (30; 38ಎ) ಜೊತೆ ನೀಡಿದರು. ಎರಡನೇ ವಿಕೆಟ್‌ಗೆ 59 ರನ್ ಸೇರಿಸಿದರು.


18ನೇ ಓವರ್‌ನಲ್ಲಿ ಯಷ್ಟಿಕಾ ವಿಕೆಟ್ ಗಳಿಸಿದ ಇನೊಕಾ ರಣವೀರಾ ಮಿಂಚಿದರು. ರಶ್ಮಿ ಡಿಸಿಲ್ವಾ ಬೌಲಿಂಗ್ ಮಾಡಿದ 19ನೇ ಓವರ್‌ನಲ್ಲಿ ಶಫಾಲಿ ಮತ್ತು ಹರ್ಲೀನ್ ಇಬ್ಬರೂ ಔಟಾದರು. ದೀಪ್ತಿ ಶರ್ಮಾ ಕೂಡ ನಾಲ್ಕು ರನ್ ಮಾತ್ರ ಗಳಿಸಿ ನಿರ್ಗಮಿಸಿದರು.

ಈ ಸಂದರ್ಭದಲ್ಲಿ ಕ್ರೀಸ್‌ನ-ಲ್ಲಿದ್ದ ಹರ್ಮನ್ ನಾಯಕಿಗೆ ತಕ್ಕ ಆಟವಾಡಿದರು. ರಿಚಾ ಘೋಷ್ ಕೂಡ ಹೆಚ್ಚು ಆಡಲಿಲ್ಲ. ಆದರೆ, ಎಂಟನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಪೂಜಾ ಬಿರುಸಿನ ಬ್ಯಾಟಿಂಗ್ ಮಾಡಿದರು. ಇವರಿಬ್ಬರೂ ಏಳನೇ ವಿಕೆಟ್ ಜೊತೆಯಾಟದಲ್ಲಿ 97 ರನ್ ಸೇರಿಸಿದರು. ಇದರಿಂದಾಗಿ ತಂಡವು ದ್ವಿಶತಕದ ಗಡಿ ದಾಟಿತು.

ಗುರಿ ಬೆನ್ನಟ್ಟಿದ ಲಂಕಾ ತಂಡದ ಆಟಗಾರ್ತಿಯರು ದೊಡ್ಡ ಪಾಲುದಾರಿಕೆ ಆಟ ಬೆಳೆಸಲು ಭಾರತದ ಬೌಲರ್‌ಗಳೂ ಬಿಡಲಿಲ್ಲ. ಬೌಲಿಂಗ್‌ನಲ್ಲಿಯೂ ಮಿಂಚಿದ ಹರ್ಮನ್ ಲಂಕಾ ತಂಡದ ಆರಂಭಿಕ ಆಟಗಾರ್ತಿ ಚಾಮರಿ ಅಟಪಟ್ಟು (44 ರನ್) ವಿಕೆಟ್ ಗಳಿಸಿದರು. ರಾಜೇಶ್ವರಿ ಮಧ್ಯಮ ಕ್ರಮಾಂಕಕ್ಕೆ ಹೊಡೆತ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 9ಕ್ಕೆ255 (ಶಫಾಲಿ ವರ್ಮಾ 49, ಯಷ್ಟಿಕಾ ಭಾಟಿಯಾ 30, ಹರ್ಮನ್‌ಪ್ರೀತ್ ಕೌರ್ 75, ಪೂಜಾ ವಸ್ತ್ರಕರ್ ಔಟಾಗದೆ 56, ಇನೊಕಾ ರಣವೀರಾ 22ಕ್ಕೆ2, ರಶ್ಮಿ ಡಿಸಿಲ್ವಾ 53ಕ್ಕೆ2, ಚಾಮರಿ ಅಟಪಟ್ಟು 45ಕ್ಕೆ2) ಶ್ರೀಲಂಕಾ: 47.3 ಓವರ್‌ಗಳಲ್ಲಿ 216 (ಚಾಮರಿ ಅಟಪಟ್ಟು 44, ಹಾಸಿನಿ ಪೆರೆರಾ 39, ನೀಲಾಕ್ಷಿ ಡಿಸಿಲ್ವಾ 48, ಹರ್ಷಿತಾ ಮಾಧವಿ 22, ರಾಜೇಶ್ವರಿ ಗಾಯಕವಾಡ 36ಕ್ಕೆ3, ಪೂಜಾ ವಸ್ತ್ರಕರ್ 33ಕ್ಕೆ2, ಮೇಘನಾ ಸಿಂಗ್ 32ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 39 ರನ್‌ಗಳ ಜಯ. 3–0ಯಿಂದ ಸರಣಿ.

ಪೂಜಿತಾ ಎಂಎಸ್‌ಐಎಲ್ ರಾಯಭಾರಿ



ಎಂಎಸ್‌ಐಎಲ್‌ನ ರಾಯಭಾರಿಯಾಗಿ ನೇಮಕಗೊಂಡಿರುವ ಹಾಕಿ ಆಟಗಾರ್ತಿ ಬಿ.ಎನ್‌ಪೂಜಿತಾ ಗೌಡ ಅವರಿಗೆ ಎಂಎಸ್‌ಐಎಲ್ ಅಧ್ಯಕ್ಷ, ಶಾಸಕ ಹಾಲಪ್ಪ ಎಚ್. ಹರತಾಳು ಬೆಂಗಳೂರಿನಲ್ಲಿ ₹ 5 ಲಕ್ಷದ ಚೆಕ್ ವಿತರಿಸಿದರು. ಸಂಸ್ಥೆಯ ಎ.ಎಂ. ಚಂದ್ರಪ್ಪ, ರಮಾಕಾಂತ ಹೆಬ್ಬಳ್ಳಿ, ಶ್ರೀದೇವಿ ಹಾಗೂ ಉದ್ಯಮಿ ನಾಗರಾಜ್ ಶೆಟ್ಟಿ ಚಿತ್ರದಲ್ಲಿದ್ದಾರೆ.

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ರಾಜ್ಯ ಹಾಕಿ ತಂಡದ ಆಟಗಾರ್ತಿ, ಸಮೀಪದ ಬರುವೆ ಗ್ರಾಮದ ಬಿ.ಎನ್. ಪೂಜಿತಾ ಗೌಡ ಅವರನ್ನು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನ-ಲ್ ಲಿಮಿಟೆಡ್ (ಎಂಎಸ್‌ಐಎಲ್)ನ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ.

ಈ ಕುರಿತು ಮಾಹಿತಿ ನೀಡಿದ ಶಾಸಕ ಹಾಗೂ ಎಂಎಸ್‌ಐಎಲ್ ಅಧ್ಯಕ್ಷ ಹಾಲಪ್ಪ ಎಚ್.ಹರತಾಳು, 'ಪೂಜಿತಾ ಅವರು ಮೇ ತಿಂಗಳಲ್ಲಿ ಮಧ್ಯಪ್ರದೇ-ಶದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಮಹಿಳಾ ಹಾಕಿ ಕ್ರೀಡಾಕೂಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ-ರು. ತಂಡ ದ್ವಿತೀಯ ಸ್ಥಾನ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು' ಎಂದು ಹೇಳಿದ್ದಾರೆ.

'ಅವರ ಸಾಧನೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಎಂಎಸ್‌ಐಎಲ್ ರಾಯಭಾರಿಯನ್ನಾಗಿ ನೇಮಿಸಿದ್ದು, ₹ 5 ಲಕ್ಷ ಗೌರವಧನದ ಚೆಕ್ ನೀಡಲಾಗಿದೆ. ಮುಂದಿನ 2 ವರ್ಷಗಳ ಅವಧಿಗೆ ಪೂಜಿತಾ ಅವರ ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಂಪೂರ್ಣ ಆರ್ಥಿಕ ಹೊಣೆಯನ್ನೂ ಸಂಸ್ಥೆಯೇ ನಿಭಾಯಿಸಲಿದೆ' ಎಂದು ಅವರು ತಿಳಿಸಿದ್ದಾರೆ.

ಆಕಾಸಾ ಏರ್ ಸೇವೆ ಇದೇ ತಿಂಗಳಲ್ಲಿ

ಮುಂಬೈ (ಪಿಟಿಐ): ನಾಗರಿಕ ವಿಮಾನಯಾನ ಮಹಾನಿರ್ದೇಶನಾ-ಲಯವು ತನಗೆ ವಾಣಿಜ್ಯ ಉದ್ದೇಶಕ್ಕೆ ವಿಮಾನ ಬಳಸಲು ಪ್ರಮಾಣಪತ್ರ ನೀಡಿದೆ ಎಂದು ಆಕಾಸಾ ಏರ್ ಗುರುವಾರ ಹೇಳಿದೆ. ಕಂಪನಿಯು ಈ ತಿಂಗಳಿನಲ್ಲೇ ವಿಮಾನಯಾನ ಸೇವೆ ಆರಂಭಿಸಲಿದೆ.

ಹೂಡಿಕೆದಾರ ರಾಕೇಶ್ ಜುಂಝುನ್‌ವಾಲಾ ಅವರು ಕೂಡ ಪಾಲುದಾರ ಆಗಿರುವ ಈ ಕಂಪನಿಯು ಬೋಯಿಂಗ್ 737 ವಿಮಾನವನ್ನು ಪಡೆದುಕೊಂಡಿದೆ. ಕಂಪನಿಯು ಎರಡು ವಿಮಾನಗಳೊಂದಿಗೆ ತನ್ನ ಸೇವೆ ಆರಂಭಿಸಲಿದೆ.

ಪ್ರಸಕ್ತ ಹಣಕಾಸು ವರ್ಷದ ಕೊನೆಯ ಹೊತ್ತಿಗೆ 18 ವಿಮಾನಗಳನ್ನು ಕಂಪನಿ ಹೊಂದಲಿದೆ.



ಕೆನರಾ ಬ್ಯಾಂಕ್‌ನ ಅಪ್ಪಣ್ಣ ಮತ್ತು ಎಜಿಒಆರ್‌ಸಿಯಂ ಚಿರಂತ್ ಪೈಪೋಟಿ

ಹಾಕಿ: ಕೆನರಾ ಬ್ಯಾಂಕ್‌ಗೆ ಗೆಲುವು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ತಂಡ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–1 ಗೋಲುಗಳಿಂದ ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಎಜಿಒಆರ್‌ಸಿ) ತಂಡವನ್ನು ಮಣಿಸಿತು.

ಎಫ್‌ಎಂಕೆಎಂಸಿ ಹಾಕಿ ಅರೆನಾದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ನಿಕಿನ್ ತಿಮ್ಮಯ್ಯ (13ನೇ ನಿ.), ಪೃಥ್ವಿರಾಜ್ (22) ಮತ್ತು ಕೆ.ಎಸ್.ಅಪ್ಪಣ್ಣ (55) ಅವರು ಕೆನರಾ ಬ್ಯಾಂಕ್ ಪರ ಗೋಲು ಗಳಿಸಿದರು. ಎಜಿಒಆರ್‌ಸಿ ತಂಡದ ಏಕೈಕ ಗೋಲನ್ನು ನಯೀಮ್ (56) ಗಳಿಸಿದರು.

ಹೊಂದಾಣಿಕೆಯ ಆಟವಾಡಿದ ಕೆನರಾ ಬ್ಯಾಂಕ್ ತಂಡ ಪಂದ್ಯದ ಎರಡೂ ಅವಧಿಗಳಲ್ಲಿ ಮೇಲುಗೈ ಸಾಧಿಸಿತು. 13ನೇ ನಿಮಿಷದಲ್ಲೇ ಗೋಲು ಗಳಿಸಿ ಎದುರಾಳಿಗಳ ಮೇಲೆ ಒತ್ತಡ ಹೇರಿತು.

ಷೇರುಪೇಟೆ ವಹಿವಾಟು 428



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,990
ಇಂದಿನ ಅಂತ್ಯ	16,133
▲	143
ದಿನದ ಗರಿಷ್ಠ	16,150

ವಿನಿಮಯ ದರ

$ ಡಾಲರ್	79.13
£ ಪೌಂಡ್	94.54
€ ಯುರೊ	80.61
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ



(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1250 (1240)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1185 (1195)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)	
ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹158

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

'₹ 5 ಕೋಟಿಗೂ ಹೆಚ್ಚಿನ ಮೊತ್ತದ ವಹಿವಾಟಿಗೆ ಇ-ಇನ್‌ವಾಯ್ಸ್'

ನವದೆಹಲಿ (ಪಿಟಿಐ): ಜಿಎಸ್‌ಟಿ ಅಡಿ ನೋಂದಣಿ ಆಗಿರುವ, ವಾರ್ಷಿಕವಾಗಿ ₹ 5 ಕೋಟಿಗೂ ಹೆಚ್ಚಿನ ವಹಿವಾಟು ನಡೆಸುವ ಉದ್ದಿಮೆಗಳು ಬಿ2ಬಿ ವಹಿವಾಟಿಗೆ ಇನ್ನು ಮುಂದೆ ಇ-ಇನ್‌ವಾಯ್ಸ್ ಸೃಷ್ಟಿಸಬೇಕಾಗುತ್ತದೆ.

ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯ (ಸಿಬಿಐಸಿ) ಅಧ್ಯಕ್ಷ ವಿವೇಕ್ ಜೊಹ್ರಿ ಈ ಮಾಹಿತಿ ನೀಡಿದ್ದಾರೆ.

ಇ-ಇನ್‌ವಾಯ್ಸ್ ಸೃಷ್ಟಿಸುವುದ-ನ್ನು ಹಂತ ಹಂತವಾಗಿ ಜಾರಿಗೆ ತರಲು ಜಿಎಸ್‌ಟಿ ಮಂಡಳಿಯು ನಿರ್ಧರಿಸಿದೆ ಎಂದು ಅವರು ಹೇಳಿದ್ದಾರೆ.

ಪಿಎಚ್‌ಡಿಸಿಸಿಐ ಕಾರ್ಯಕ್ರಮ-ದಲ್ಲಿ ಮಾತನಾಡಿದ ಅವರು, 'ಇ-ಇನ್‌ವಾಯ್ಸ್ ಸೃಷ್ಟಿಸುವುದರಿಂದ ತೆರಿಗೆ ಅಧಿಕಾರಿಗಳು ಇನ್‌ವಾಯ್ಸ್ ಅನ್ನು ತಾಳೆ ಮಾಡಿ ನೋಡುವುದು ತಪ್ಪಲಿದೆ' ಎಂದು ತಿಳಿಸಿದ್ದಾರೆ.

ಸದ್ಯ, ವಾರ್ಷಿಕವಾಗಿ ₹ 20 ಕೋಟಿಗೂ ಹೆಚ್ಚಿನ ವಹಿವಾಟು ನಡೆಸುವ ಉದ್ದಿಮೆಗಳು ಇ-ಇನ್‌ವಾಯ್ಸ್ ಸೃಷ್ಟಿಸಬೇಕಿದೆ.

ಎರಡನೇ ದಿನವೂ ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರು-ಪೇಟೆಗಳಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ಮುಂದುವರಿಯಿತು. ಗ್ರಾಹಕ ಬಳಕೆ, ಲೋಹ ಮತ್ತು ಬ್ಯಾಂಕ್ ಷೇರುಗಳ ಮೌಲ್ಯ ಹೆಚ್ಚಾಗಿದ್ದರಿಂದ ಗುರುವಾರ ಸೂಚ್ಯಂಕಗಳು ಏರಿಕೆ ಕಂಡುಕೊಂಡವು.

ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳಿಂದಾಗಿ ಸೂಚ್ಯಂಕಗಳ ಗಳಿಕೆ ಇನ್ನೂ ಹೆಚ್ಚಿನ ಮಟ್ಟ ತಲುಪಲು ಸಾಧ್ಯವಾಗಲಿಲ್ಲ ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 428 ಅಂಶ ಹೆಚ್ಚಾಗಿ 54,178 ಅಂಶಗಳಿಗೆ ತಲುಪಿತು.

ಮುಂಬೈ ಧಾರಣೆ

ಶೇಂಗಾ

7-7-2022

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	10750-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1180 (1150)
ಪಾಮ್ ವಾರದ ಡೆಲಿವರಿ	1183 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1580)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,625 (51,100)

ಬೆಳ್ಳಿ ಕೆ.ಜಿ 56,850 (56,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಗೋಧಿ ಹಿಟ್ಟು ರಫ್ತಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗೋಧಿ ಹಿಟ್ಟು ಮತ್ತು ಮೈದಾ, ರವೆ ರಫ್ತಿಗೆ ನಿರ್ಬಂಧ ವಿಧಿಸಿದೆ. ದೇಶದಲ್ಲಿ ಇವುಗಳ ಬೆಲೆ ಏರಿಕೆ ಆಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಂಡಿದೆ.

ಜುಲೈ 12ರ ನಂತರ ರಫ್ತು ಮಾಡುವವರು 'ಗೋಧಿ ರಫ್ತು ಕುರಿತ ಅಂತರ್ ಸಚಿವಾಲಯ ಸಮಿತಿ'ಯ ಅನುಮತಿ ಪಡೆ-ದುಕೊಳ್ಳಬೇಕು ಎಂದು ವಿದೇಶ ವ್ಯಾಪಾರಗಳ ಮಹಾನಿರ್ದೇಶ-ನಾಲಯ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	49039-49469
ಬೆಟ್ಟೆ	39219-39699
ಕೆಂಪುಗೋಟು	29300-29700
ರಾಶಿ	48529-48979
ಕಾರ್ಕಳ	
ಹೊಸತು	40000-45000
ಕುಮಟ	
ಚಿಪ್ಪು	25509-31669
ಕೋಕ	15099-29500
ಹೊಸಚಾಲಿ	34189-38411
ಸಾಗರ	
ಬಿಳಿಗೋಟು	14029-29739
ಚಾಲಿ	32299-37299
ಕೋಕ	11899-33800
ಕೆಂಪುಗೋಟು	25300-38209
ರಾಶಿ	34199-49749
ಸಿಪ್ಪೆಗೋಟು	9119-20800
ಶಿವಮೊಗ್ಗ	
ಬೆಟ್ಟೆ	51219-54399
ಗೊರಬಲು	17019-38119
ರಾಶಿ	46869-49899
ಸರಕು	57700-77599
ಶಿರಸಿ	
ಬೆಟ್ಟೆ	39899-47699
ಬಿಳಿಗೋಟು	24299-32799
ಚಾಲಿ	35899-39800
ರಾಶಿ	45599-49399
ಯಲ್ಲಾಪುರ	
ಬಿಳಿಗೋಟು	26899-32899
ಚಾಲಿ	34680-38505
ಕೋಕ	18100-28299
ಕೆಂಪುಗೋಟು	28899-33817
ರಾಶಿ	45179-51419
ತಟ್ಟಿಬೆಟ್ಟೆ	40610-44379

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರಮನೆ
ಎಪಿ	15900
ಎಸಿ	8960
ಆರ್‌ಪಿ	9500
ಆರ್‌ಸಿ	4735

₹ 62 ಸಾವಿರ ಕೋಟಿ ವಿದೇಶಕ್ಕೆ ವರ್ಗಾವಣೆ: ಜಾರಿ ನಿರ್ದೇಶನಾಲಯ

ವಿವೊದಿಂದ ಹಣ ಅಕ್ರಮ ರವಾನೆ

ಮುಖ್ಯಾಂಶಗಳು
- ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳಲು ಯತ್ನ
- ವಿವೊ ಮೇಲೆ ದಾಳಿ ನಡೆಸಿದ್ದ ಇ.ಡಿ.
- 119 ಖಾತೆಗಳಲ್ಲಿ ಇದ್ದ ₹ 465 ಕೋಟಿ ಮೌಲ್ಯದ ಆಸ್ತಿ ಜಪ್ತಿ


ನವದೆಹಲಿ (ಪಿಟಿಐ): ಭಾರತದಲ್ಲಿ ತೆರಿಗೆ ಪಾವತಿಸುವುದನ್ನು ತಪ್ಪಿಸಲು ಚೀನಾ ಮೂಲದ ಪ್ರಮುಖ ಸ್ಮಾರ್ಟ್‌ಫೋನ್ ತಯಾರಕ ಕಂಪನಿ ವಿವೊ ಸುಮಾರು ₹ 62,476 ಕೋಟಿಯನ್ನು ವಿದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಚೀನಾಕ್ಕೆ, 'ಅಕ್ರಮವಾಗಿ' ವರ್ಗಾವಣೆ ಮಾಡಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಗುರುವಾರ ಹೇಳಿದೆ.

ಚೀನಾದ ಪ್ರಜೆಗಳು ಹಾಗೂ ಭಾರತದ ಹಲವು ಕಂಪನಿಗಳು ಭಾಗಿಯಾಗಿರುವ, ಹಣದ ಅಕ್ರಮ ವರ್ಗಾವಣೆ ದಂಧೆಯೊಂದನ್ನು ಭೇದಿಸಿರುವುದಾಗಿ ಇ.ಡಿ. ಹೇಳಿದೆ.

ವಿವೊ ಕಂಪನಿಯು ಚೀನಾಕ್ಕೆ ವರ್ಗಾವಣೆ ಮಾಡಿರುವ ಮೊತ್ತವು ಕಂಪನಿಯ ವಾರ್ಷಿಕ ವಹಿವಾಟಿನ ಸರಿಸುಮಾರು ಶೇಕಡ 50ರಷ್ಟಕ್ಕೆ ಸಮ ಎಂದು ಇ.ಡಿ. ತಿಳಿಸಿದೆ. ಯಾವ ಅವಧಿಯಲ್ಲಿ ಈ ವರ್ಗಾವಣೆ ನಡೆದಿದೆ ಎಂಬ ವಿವರ ನೀಡಿಲ್ಲ.

2018ರಿಂದ 2021ರ ನಡುವಿನ ಅವಧಿಯಲ್ಲಿ ಭಾರತವನ್ನು ತೊರೆದಿರುವ ಚೀನಾದ ಮೂವರು ಪ್ರಜೆಗಳು ಹಾಗೂ ಚೀನಾದ ಇನ್ನೊಬ್ಬ ವ್ಯಕ್ತಿ ಭಾರತದಲ್ಲಿ 23 ಕಂಪನಿಗಳನ್ನು ಆರಂಭಿಸಿರುವ ಮಾಹಿತಿ ಇ.ಡಿ.ಗೆ ದೊರೆತಿದೆ. ಈ ಕಂಪನಿಗಳು ವಿವೊಗೆ ಭಾರಿ ಪ್ರಮಾಣದ ಹಣ ವರ್ಗಾವಣೆ ಮಾಡಿವೆ.

ಈ ವಿದೇಶಿ ವ್ಯಕ್ತಿಗಳ ಪೈಕಿ ಒಬ್ಬರು ಬಿನ್ ಲೌ. ಇವರು ವಿವೊ ಕಂಪನಿಯ ಮಾಜಿ ನಿರ್ದೇಶಕರು ಎಂದು ಇ.ಡಿ ಹೇಳಿದೆ. ಭಾರತದಲ್ಲಿನ ತನ್ನ ಕಂಪನಿಗಳಿಗೆ ನಷ್ಟವಾಗಿದೆ ಎಂದು ತೋರಿಸಿ, ತೆರಿಗೆ ಪಾವತಿಯಿಂದ ತಪ್ಪಿ-ಸಿಕೊಳ್ಳಲು ಈ ಹಣ ವರ್ಗಾವಣೆ ಆಗಿದೆ



ಎಂದು ಇ.ಡಿ. ಹೇಳಿದೆ.

ವಿವೊ ಮೊಬೈಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಾಗೂ ಅದರ ಸಹವರ್ತಿ ಕಂಪನಿಗಳಿಗೆ ಸೇರಿದ 48 ಸ್ಥಳಗಳಲ್ಲಿ ಇ.ಡಿ. ಮಂಗಳವಾರ ದಾಳಿ ನಡೆಸಿತ್ತು. ಇದಾದ ಬಳಿಕ ಈ ಹೇಳಿಕೆ ಹೊರಬಿದ್ದಿದೆ. 'ಜವಾಬ್ದಾರಿಯುತ ಕಂಪನಿಯಾಗಿ ನಾವು ಕಾನೂನನ್ನು ಪೂರ್ತಿಯಾಗಿ ಪಾಲನೆ ಮಾಡುವ ಬದ್ಧತೆ ಹೊಂದಿದ್ದೇವೆ' ಎಂದು ವಿವೊ ಮಂಗಳವಾರ ಹೇಳಿತ್ತು.

ದಾಳಿಯ ಸಂದರ್ಭದಲ್ಲಿ ಕಾನೂನು ಪಾಲನೆ ಆಗಿದೆ. ಆದರೆ, ವಿವೊ ಇಂಡಿಯಾ ಕಂಪನಿಯ ನೌಕರರು, ಕೆಲವು ಚೀನಾ ಪ್ರಜೆಗಳು, ಶೋಧ ಕಾರ್ಯಕ್ಕೆ ಸಹಕಾರ ನೀಡಲಿಲ್ಲ. ಅವರು ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಡಿಜಿಟಲ್ ಸಾಧನಗಳನ್ನು ಅಡಗಿಸಿ ಇಡಲು ಯತ್ನಿಸಿದ್ದರು. ಆದರೆ ಅವುಗಳನ್ನು ಶೋಧ ತಂಡದ ಸದಸ್ಯರು ಪತ್ತೆ ಮಾಡಿದರು ಎಂದು ಇ.ಡಿ. ವಿವರಿಸಿದೆ.

ಚೀನಾದ ಕಂಪನಿಗಳು ಭಾರತದ ಗ್ರಾಹಕ ದತ್ತಾಂಶವನ್ನು ಚೀನಾದಲ್ಲಿನ ಸರ್ವರ್‌ಗಳಿಗೆ ಅಕ್ರವಾಗಿ ವರ್ಗಾವಣೆ ಮಾಡುತ್ತಿವೆ ಎಂಬುದನ್ನು ಭಾರತದ ಗುಪ್ತಚರ ಸಂಸ್ಥೆಗಳು ಈಚೆಗೆ ಪತ್ತೆ ಮಾಡಿವೆ.

'ಪ್ರಕರಣದಲ್ಲಿ ಭಾಗಿಯಾಗಿರುವ ಬೇರೆ ಬೇರೆ ಕಂಪನಿಗಳು, ಸಂಸ್ಥೆಗಳು ವಿವಿಧ ಬ್ಯಾಂಕ್‌ಗಳ 119 ಖಾತೆಗಳಲ್ಲಿ ಇರಿಸಿದ್ದ ಸುಮಾರು ₹ 465 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ. ಅಲ್ಲದೆ, ₹ 73 ಲಕ್ಷ ನಗದು, 2 ಕೆ.ಜಿ. ತೂಕದ ಚಿನ್ನದ ಗಟ್ಟಿ ಸಹ ಇದರಲ್ಲಿ ಸೇರಿದೆ' ಎಂದು ಇ.ಡಿ. ಪ್ರಕಟಣೆಯು ತಿಳಿಸಿದೆ.

ದಲೈಲಾಮಾಗೆ ಮೋದಿ ಶುಭಾಶಯ: ಚೀನಾ ಆಕ್ಷೇಪ

ಬೀಜಿಂಗ್ (ಪಿಟಿಐ): ಟಿಬೆಟ್ ಧಾರ್ಮಿಕ ಗುರು ದಲೈಲಾಮಾ ಅವರಿಗೆ 87ನೇ ಜನ್ಮದಿನ ನಿಮಿತ್ತ ಪ್ರಧಾನಿ ನರೇಂದ್ರ ಮೋದಿ ಶುಭಕೋರಿದ್ದಕ್ಕೆ ಚೀನಾ ತಕರಾರು ತೆಗೆದಿದೆ. 'ಚೀನಾದ ಆಂತರಿಕ ವ್ಯವಹಾರಗಳಲ್ಲಿ ಭಾರತ ಹಸ್ತಕ್ಷೇಪ ಮಾಡಬಾರದು' ಎಂದು ಹೇಳಿದೆ.

ಪ್ರಧಾನಿ ಮೋದಿ ಬುಧವಾರ ದಲೈಲಾಮಾ ಅವರಿಗೆ ಕರೆ ಮಾಡಿ ಶುಭ ಕೋರಿದ್ದರು. ಈ ಕುರಿತ ಟ್ವೀಟ್‌ನಲ್ಲಿ, 'ದಲೈಲಾಮಾ ಅವರಿಗೆ ದೀರ್ಘಕಾಲದ ಬದುಕು ಮತ್ತು ಉತ್ತಮ ಆರೋಗ್ಯ ಲಭಿಸಲಿ ಎಂದು ಕೋರುತ್ತೇವೆ' ಎಂದಿದ್ದರು. ಕಳೆದ ವರ್ಷವೂ ಪ್ರಧಾನಿ ಶುಭಹಾರೈಸಿದ್ದರು.

ದಲೈಲಾಮಾ ಅವರ ಚೀನಾ ವಿರೋಧಿ ಧೋರಣೆಯನ್ನು ಭಾರತ ಬೆಂಬಲಿಸುತ್ತಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೊ ಲಿಜ್ಜನ್ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು. ಶುಭ ಕೋರಿದ್ದ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಅವರ ನಡೆಯನ್ನೂ ಟೀಕಿಸಿದರು.

'ದಲೈಲಾಮಾ ಅವರು ರಾಜಕೀಯ ಗಡೀಪಾರಿನಲ್ಲಿ ಇದ್ದಾರೆ. ದೀರ್ಘ ಕಾಲದಿಂದ ಚೀನಾದ ಪ್ರತ್ಯೇಕತಾ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ' ಎಂದು ಲಿಜ್ಜನ್ ಟೀಕಿಸಿದರು.

ಭಾರತ ಪ್ರತಿಕ್ರಿಯೆ: ದಲೈಲಾಮಾ ಅವರನ್ನು ಧಾರ್ಮಿಕ ಮುಖಂಡ ಎಂದು ಭಾರತ ಪರಿಗಣಿಸುತ್ತದೆ. ಪ್ರಧಾನಿ ಅವರು ಜನ್ಮದಿನದ ಶುಭ ಕೋರಿರುವುದನ್ನು ಅದೇ ಹಿನ್ನೆಲೆಯಲ್ಲಿ ನೋಡಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರತಿಕ್ರಿಯಿಸಿದೆ.

ತನಿಷ್ಕ್: 'ರಿದಮ್ ಆಫ್ ರೇನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣಗಳ ರಿಟೇಲ್ ಬ್ರ್ಯಾಂಡ್ ತನಿಷ್ಕ್, 'ರಿದಮ್ ಆಫ್ ರೇನ್' ಹೆಸರಿನ ವಿಶೇಷ-ಕತ್ತರಿಸಿದ ವಜ್ರದ ಆಭರಣಗಳನ್ನು ಬಿಡುಗಡೆ ಮಾಡಿದೆ.

ಈ ಸಂಗ್ರಹವು ಮುಂಗಾರಿನ ವೈವಿಧ್ಯ ವನ್ನು ಸಾರುತ್ತದೆ. ನೈಸರ್ಗಿಕ ವಜ್ರಗಳಿಂದ ಅಲಂಕರಿಸಲಾಗಿರುವ ನೆಕ್‌ವೇರ್ ಸೆಟ್‌ಗಳನ್ನು ಒಳಗೊಂಡಿದೆ ಎಂದು ಹೇಳಿದೆ.

ಪ್ರತಿ ವಿನ್ಯಾಸವನ್ನೂ ನುರಿತ ಕುಶಲ-ಕರ್ಮಿಗಳು ರೂಪಿಸಿದ್ದಾರೆ. ವಿಶೇಷವಾಗಿ ಕತ್ತರಿಸಿದ ಮತ್ತು ವಿನ್ಯಾಸಗೊಳಿಸಿದ ರತ್ನಗಳ ವಿಸ್ತಾರವಾದ ರೂಪಗಳು ಇಲ್ಲಿವೆ ಎಂದು ಟೈಟಾನ್ ಕಂಪನಿ ಲಿಮಿಟೆಡ್‌ನ ಆಭರಣ ವಿಭಾಗದ ವಿನ್ಯಾಸ ಮುಖ್ಯಸ್ಥ ಅಭಿಷೇಕ್ ರಸ್ತೋಗಿ ಹೇಳಿದ್ದಾರೆ.

ಜಿಆರ್‌ಟಿ: ಆಷಾಢ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜಿಆರ್‌ಟಿ ಜುವೆಲರ್ಸ್, ಆಷಾಢ ಮಾಸದಲ್ಲಿ ತನ್ನಲ್ಲಿ ಚಿನ್ನ, ಆಭರಣ ಖರೀದಿಸುವವರಿಗಾಗಿ 'ಆಷಾಢ ಆಶ್ಚರ್ಯ' ಕೊಡುಗೆ ಆರಂಭಿಸಿದೆ. ಪ್ರತಿ ಖರೀದಿಗೂ ಒಂದು ಉಡುಗೊರೆ ಇರುತ್ತದೆ ಎಂದು ಕಂಪನಿ ಹೇಳಿದೆ.

ಖರೀದಿಸಿದ ಚಿನ್ನ, ಆಭರಣಗಳ ಮೌಲ್ಯ ಹೆಚ್ಚಿದ್ದರೆ ಉಡುಗೊರೆಯೂ ದೊಡ್ಡದಿರುತ್ತದೆ. ಬ್ಯಾಂಕಿಂಗ್ ಪಾಲುದಾರರ ಮೂಲಕ ಗ್ರಾಹಕರಿಗೆ ಕ್ಯಾಶ್‌ಬ್ಯಾಕ್ ನೀಡಲಾಗುತ್ತದೆ. ಯುಪಿಐ ಬಳಸಿ ಹಣ ಪಾವತಿ ಮಾಡುವವರಿಗೆ ಆಶ್ಚರ್ಯಕರ ಉಡುಗೊರೆಗಳು ಇರಲಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಈ ಕೊಡುಗೆಗಳು ಆನ್‌ಲೈನ್ ಹಾಗೂ ಆಫ್‌ಲೈನ್ ಖರೀದಿಗಳಿಗೆ ಅನ್ವಯವಾಗಲಿವೆ.

ಸಾಮಾಜಿಕ ಜಾಲತಾಣಗಳ ಮೂಲಕ ಹೂಡಿಕೆದಾರರ ಆಕ್ರೋಶ

ವಾಲ್ಡ್: ಕ್ರಿಪ್ಟೊ ಆಧಾರಿತ ಸೇವೆ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿಗಳನ್ನು ಠೇವಣಿ ರೂಪದಲ್ಲಿ ಸಂಗ್ರಹಿಸುವ, ಕ್ರಿಪ್ಟೊ ಕರೆನ್ಸಿಗಳ ಆಧಾರದಲ್ಲಿ ಸಾಲ ಕೊಡುವ ವಾಲ್ಡ್ ವೇದಿಕೆಯು ತನ್ನ ಹಲವು ಸೇವೆಗಳನ್ನು ಅಮಾನತು ಮಾಡಿದೆ.

'ಠೇವಣಿ ಹಿಂದಕ್ಕೆ ಪಡೆಯುವುದು, ಕ್ರಿಪ್ಟೊ ವಹಿವಾಟು ಮತ್ತು ಠೇವಣಿ ಸ್ವೀಕರಿಸುವ ಸೇವೆಗಳನ್ನು ನಾವು ಅಮಾನತಿನಲ್ಲಿ ಇರಿಸುವ ಕಷ್ಟದ ತೀರ್ಮಾನ ಕೈಗೊಂಡಿದ್ದೇವೆ' ಎಂದು ಕಂಪನಿಯು ತನ್ನ ಬ್ಲಾಗ್ ಮೂಲಕ ತಿಳಿಸಿದೆ. 'ಹೊಸ ಕೋರಿಕೆಯನ್ನು ಸ್ವೀಕರಿಸಲು ನಮ್ಮಿಂದ ಆಗುವುದಿಲ್ಲ ಎಂಬುದನ್ನು ಗ್ರಾಹಕರು ಅರ್ಥ ಮಾಡಿಕೊಳ್ಳಬೇಕು ಎಂದು ನಾವು ಕೋರುತ್ತೇವೆ' ಎಂದು ಜುಲೈ 4ರಂದು ಪ್ರಕಟಿಸಿರುವ ಬರಹದಲ್ಲಿ ಕಂಪನಿ ಹೇಳಿದೆ.

ಮುಂದೆ ಏನಾಗುತ್ತದೆ ಎಂಬುದನ್ನು ಸೂಕ್ತ ಸಂದರ್ಭದಲ್ಲಿ ತಿಳಿಸಲಾಗುವುದು. ಗ್ರಾಹಕರು ತಾಳ್ಮೆಯಿಂದ ಇರಬೇಕು ಎಂದು ಬರಹವು ಹೇಳಿದೆ.

ವಾಲ್ಡ್ ತೀರ್ಮಾನದ ನಂತರ ಸಾಮಾಜಿಕ ಜಾಲತಾಣಗಳ ಮೂಲಕ ಹಲವರು ಆಕ್ರೋಶ ಹೊರಹಾಕಿದ್ದಾರೆ. 'ಹಿಂಪಡೆಯುವುದನ್ನು ಅವರು ಹೇಗೆ ನಿರ್ಬಂಧಿಸಲು ಸಾಧ್ಯ? ನನ್ನ ಅಷ್ಟೂ ಹೂಡಿಕೆಗಳು ಅಲ್ಲಿ ಸಿಲುಕಿಕೊಂಡಂತೆ ಆಗಿವೆಯೇ?' ಎಂದು ತೇಜಸ್ ಎನ್ನುವವರು ಟ್ವಿಟರ್ ಮೂಲಕ ಅಳಲು ತೋಡಿಕೊಂಡಿದ್ದಾರೆ. ಇನ್ನು ಕೆಲವು ಟ್ವಿಟರ್ ಬಳಕೆದಾರರು, ಯೂಟ್ಯೂಬ್ ವಿಡಿಯೊ ಮೂಲಕ ವಾಲ್ಡ್‌ನಲ್ಲಿ ಹೂಡಿಕೆ ಮಾಡುವುದನ್ನು ಉತ್ತೇಜಿಸು-ತ್ತಿದ್ದ ಕೆಲವರ ಹೆಸರು ಉಲ್ಲೇಖಿಸಿ ತಮ್ಮ ಆಕ್ರೋಶ ತೋರಿಸಿದ್ದಾರೆ.

'ನಾವು ಹಣಕಾಸಿನ ಸವಾಲು ಎದುರಿಸುತ್ತಿದ್ದೇವೆ. ಮಾರುಕಟ್ಟೆ ಅಸ್ಥಿ-ರವಾಗಿರುವುದು, ನಮ್ಮ ವಾಣಿಜ್ಯ ಪಾಲುದಾರರ ಆರ್ಥಿಕ ಸಂಕಷ್ಟಗಳು ನಮ್ಮ ಮೇಲೆಯೂ ಪರಿಣಾಮ ಬೀರಿರುವುದು, ಜೂನ್ 12ರ ನಂತರದಲ್ಲಿ ಗ್ರಾಹಕರು ದಾಖಲೆಯ 197.7 ಮಿಲಿಯನ್ ಡಾಲರ್ (ಅಂದಾಜು ₹ 1,564 ಕೋಟಿ) ಹಿಂದಕ್ಕೆ ಪಡೆದಿರುವುದು ಕೂಡ ನಮ್ಮ ಹಣಕಾಸಿನ ಸವಾಲುಗಳಿಗೆ ಕಾರಣ' ಎಂದು ವಾಲ್ಡ್ ಹೇಳಿದೆ.

'ದೇಶದಲ್ಲಿ ಕ್ರಿಪ್ಟೊಕರೆನ್ಸಿಗಳಿಗೆ ನಿಯಂತ್ರಣ ಪ್ರಾಧಿಕಾರ ಅಥವಾ ವ್ಯವಸ್ಥೆ ಇಲ್ಲ. ಕ್ರಿಪ್ಟೊ ವೇದಿಕೆಗಳಲ್ಲಿ ಠೇವಣಿ ರೂಪದಲ್ಲಿ ಇರಿಸಿದ್ದ ಹಣ ವಾಪಸ್ ಸಿಗದಿದ್ದರೆ, ವಿಮೆ ಸೌಲಭ್ಯ ಇಲ್ಲ. ಕ್ರಿಪ್ಟೊ ಕರೆನ್ಸಿಗಳಲ್ಲಿನ ಹೂಡಿಕೆ ಒಳ್ಳೆಯದಲ್ಲ ಎಂದು ಆರ್‌ಬಿಐ ಗವರ್ನರ್ ಮತ್ತೆ ಮತ್ತೆ ಹೇಳಿದ್ದಾರೆ. ಕೇಂದ್ರ ಸರ್ಕಾರವೂ ಇದನ್ನು ಹೇಳಿದೆ. ಹೀಗಿದ್ದರೂ ಅಲ್ಲಿ ಹಣ ಹೂಡಿಕೆ ಮಾಡಿದರೆ ಯಾರು ಏನು ಮಾಡಲು ಸಾಧ್ಯ' ಎಂದು ಚಾರ್ಟರ್ಡ್ ಅಕೌಂಟೆಂಟ್ ಕುಮಾರ್ ಪ್ರಸಾದ್ ಪ್ರಶ್ನಿಸಿದರು.

ಸಂಕ್ಷಿಪ್ತ ಸುದ್ದಿ

ಡ್ರಗ್ಸ್ ಸಾಗಣೆ: ಭಾರತ ಮೂಲದವನಿಗೆ ಗಲ್ಲು

ಸಿಂಗಪುರ (ಪಿಟಿಐ): ಮಾನವ ಹಕ್ಕುಗಳ ಕಾರ್ಯಕರ್ತರ ವಿರೋಧದ ನಡುವೆಯೂ, ಭಾರತ ಮೂಲದ ಮಲೇಷ್ಯಾ ಪ್ರಜೆ ಕಲ್ವಂತ್ ಸಿಂಗ್ (31) ಎಂಬಾತನಿಗೆ ಗುರುವಾರ ಮಾದಕವಸ್ತು ಕಳ್ಳಸಾಗಣೆ ಅಪರಾಧಕ್ಕಾಗಿ ಗಲ್ಲು ಶಿಕ್ಷೆ ವಿಧಿಸಲಾಯಿತು.

ಮಾನಸಿಕ ಅಸ್ವಸ್ಥನಾಗಿದ್ದ ಕಲ್ವಂತ್, ಪ್ರಕರಣದಿಂದ ತಪ್ಪಿಸಿಕೊ-ಳ್ಳಲು ಹಲವು ಬಾರಿ ಕೋರ್ಟ್‌ನಲ್ಲಿ ಪ್ರಯತ್ನಿಸಿದ್ದ. ಆದರೆ ಸಿಂಗಪುರದ ಸುಪ್ರೀಂ ಕೋರ್ಟ್ ಆತನ ಅರ್ಜಿಗಳನ್ನು ನಿರಾಕರಿಸಿ, ಮರಣದಂಡನೆ ಶಿಕ್ಷೆಯನ್ನು ಕಾಯಂಗೊಳಿಸಿತ್ತು. 60.15 ಗ್ರಾಂ ಡೈಮಾರ್ಫಿನ್ ಹೊಂದಿದ್ದ ಹಾಗೂ 120.9 ಗ್ರಾಂನಷ್ಟು ಮಾದಕವಸ್ತು ಸಾಗಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಕಲ್ವಂತ್‌ನನ್ನು ಸಿಂಗಪುರ ಪೊಲೀಸರು 2013ರಲ್ಲಿ ಬಂಧಿಸಿದ್ದರು. ಈ ಪ್ರಕ-ರಣಗಳಿಗೆ ಸಂಬಂಧಿಸಿದಂತೆ ಕಲ್ವಂತ್ ವಿರುದ್ಧ 2016ರಲ್ಲಿ ಗಲ್ಲು ಶಿಕ್ಷೆಯ ತೀರ್ಪು ನೀಡಲಾಗಿತ್ತು.

'ಭಾರತದಲ್ಲಿ ಓಮ್ಮೈಕ್ರಾನ್‌ನ ಹೊಸ ತಳಿ ಪತ್ತೆ'

ವಾಷಿಂಗ್ಟನ್ (ಪಿಟಿಐ): 'ಕೊರೊನಾ ವೈರಸ್‌ನ ರೂಪಾಂತರ ತಳಿ ಓಮ್ಮೈಕ್ರಾನ್‌ನ ಹೊಸ ಉಪತಳಿ ಬಿಎ.2.75 ಭಾರತದಲ್ಲಿ ಪತ್ತೆಯಾಗಿದೆ. ಇದರ ಮೇಲೆ ನಿಗಾ ವಹಿಸಲಾಗಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸಸ್ ಹೇಳಿದ್ದಾರೆ.

ಬಿಎ.2.75 ಕುರಿತು ಡಬ್ಲ್ಯುಎಚ್‌ಒ ಮುಖ್ಯ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಅವರು ಟ್ವಿಟರ್‌ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ. 'ಬಿಎ.2.75 ಎಂದು ಕರೆಯಲಾಗುವ ತಳಿಯೊಂದು ಹೊರಹೊಮ್ಮಿದೆ. ಅದು ಭಾರತದಲ್ಲಿ ಮೊದಲು ಪತ್ತೆಯಾಗಿದ್ದು, ನಂತರ 10 ದೇಶಗಳಲ್ಲಿ ಕಾಣಿಸಿಕೊಂಡಿದೆ' ಎಂದು ಮಾಹಿತಿ ನೀಡಿದರು.

ರಷ್ಯಾ ಕಾರ್ಯಾಚರಣೆಗೆ ತುಸು ವಿರಾಮ?

ಕೀವ್ (ಎಪಿ): ಉಕ್ರೇನ್ ಮೇಲೆ ಫೆಬ್ರುವರಿಯಿಂದ ಆಕ್ರಮಣ ನಡೆಸುತ್ತಿರುವ ರಷ್ಯಾ, ತನ್ನ ಸೇನಾ ಪಡೆಗಳನ್ನು ಮರು ಒಗ್ಗೂಡಿಸಿ ಹೊಸ ದಾಳಿಗಾಗಿ ಸದ್ಯ ಕಾರ್ಯಾಚರಣೆಗೆ ಕೊಂಚ ವಿರಾಮ ನೀಡುವ ಸಾಧ್ಯತೆ ಇದೆ ಎಂದು ವಿದೇಶಿ ವಿಶ್ಲೇಷಕರು ಹೇಳಿದ್ದಾರೆ.

ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್ ಪ್ರಕಾರ, 133 ದಿನಗಳನ್ನು ಪೂರೈಸಿರುವ ಯುದ್ಧದಲ್ಲಿ ಬುಧವಾರ ರಷ್ಯಾ ಪಡೆಗಳು ಇದೇ ಮೊದಲ ಬಾರಿಗೆ ಉಕ್ರೇನಿನ ಯಾವುದೇ ನೆಲವನ್ನು ವಶಪಡಿಸಿಕೊಂಡಿಲ್ಲ. 'ಹಾಗಂತ ಇದು ಸಂಪೂರ್ಣ ಕದನ ವಿರಾಮ ಘೋಷಣೆ ಮಾಡಿದೆ ಎಂದರ್ಥವಲ್ಲ, ರಷ್ಯಾ ಬಹುಶಃ ಕಾರ್ಯಾಚರಣೆಯಲ್ಲಿ ಕೊಂಚ ವಿರಾಮ ಪಡೆದಿರಬಹುದು' ಎಂದು ವಾಷಿಂಗ್ಟನ್ ಮೂಲದ ಚಿಂತಕರ ಚಾವಡಿ ಹೇಳಿದೆ.

ವಿಂಬಲ್ಡನ್ ಟೆನಿಸ್: ಹಿಂದೆ ಸರಿದ ರಫೆಲ್ ನಡಾಲ್; ಫೈನಲ್‌ಗೆ ಕಿರ್ಗಿಯೊಸ್

ಆನ್ಸ್ ಜಬೇರ್ ಐತಿಹಾಸಿಕ ಸಾಧನೆ

ವಿಂಬಲ್ಡನ್, ಲಂಡನ್ (ಎಎಫ್‌ಪಿ/ಪಿಟಿಐ): ಟ್ಯುನಿಷಿಯಾ ಆಟಗಾರ್ತಿ ಆನ್ಸ್ ಜಬೇರ್ ಅವರು ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದ ಆಫ್ರಿಕಾ ಮತ್ತು ಅರಬ್ ದೇಶದ ಮೊದಲ ಮಹಿಳೆ ಎಂಬ ಹಿರಿಮೆಗೆ ಪಾತ್ರರಾದರು.

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಅಮೋಘ ಓಟ ಮುಂದುವರಿಸಿದ ಅವರು ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಗುರುವಾರ ನಡೆದ ನಾಲ್ಕರಘಟ್ಟದ ಪಂದ್ಯದಲ್ಲಿ 6-2, 3-6, 6-1 ರಲ್ಲಿ ಜರ್ಮನಿಯ ತತಿಯಾನ ಮರಿಯಾ ವಿರುದ್ಧ ಗೆದ್ದರು.

2020ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು ಅವರ ಇದುವರೆಗಿನ ಉತ್ತಮ ಸಾಧನೆ ಆಗಿತ್ತು. ಒಂದು ಗಂಟೆ 43 ನಿಮಿಷ ನಡೆದ ಪಂದ್ಯದಲ್ಲಿ ಜಬೇರ್ ಜಯಿಸಿದರು.

'ಹಲವು ವರ್ಷಗಳ ಕಠಿಣ ಪರಿಶ್ರಮ ಮತ್ತು ತ್ಯಾಗದಿಂದಾಗಿ ಕನಸು ನನಸಾಗಿದೆ. ಇನ್ನೊಂದು ಪಂದ್ಯದಲ್ಲಿ ಇದೇ ಪ್ರದರ್ಶನ ಮುಂದುವರಿಸುವ ವಿಶ್ವಾಸ ನನ್ನದು' ಎಂದು ಪಂದ್ಯದ ಬಳಿಕ ಜಬೇರ್ ಪ್ರತಿಕ್ರಿಯಿಸಿದರು.

ಜಬೇರ್ ಅವರು ಫೈನಲ್‌ನಲ್ಲಿ ಎಲೆನಾ ರಿಬಾಕಿನಾ ಅವರನ್ನು ಎದುರಿಸುವರು. ರಿಬಾಕಿನಾ ಸೆಮಿಯಲ್ಲಿ 6-3, 6-3 ರಲ್ಲಿ ಸಿಮೊನಾ ಹಲೆಪ್ ಅವರನ್ನು ಮಣಿಸಿದರು.

ಪುರುಷರ ಸೆಮಿಫೈನಲ್ ಇಂದು: ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಹಣಾಹಣಿ ಶುಕ್ರವಾರ ನಡೆಯಲಿದೆ. ಇಲ್ಲಿ ಎಂಟನೇ ಫೈನಲ್ ಮೇಲೆ ಕಣ್ಣಿಟ್ಟಿರುವ ಸರ್ಬಿಯದ ನೊವಾಕ್ ಜೊಕೊವಿಚ್, ಬ್ರಿಟನ್‌ನ ಕ್ಯಾಮರನ್ ನೋರಿ ಅವರ ಸವಾಲು ಎದುರಿಸುವರು.

ಹಿಂದೆ ಸರಿದ ನಡಾಲ್: ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಅವರು ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ವಿರುದ್ಧ ಆಡಬೇಕಿತ್ತು. ಆದರೆ ಗಾಯದ ಕಾರಣ ಪಂದ್ಯದಿಂದ ಹಿಂದೆ ಸರಿಯುವುದಾಗಿ ನಡಾಲ್ ಗುರುವಾರ ಪ್ರಕಟಿಸಿದರು. ಇದರಿಂದ ಕಿರ್ಗಿಯೊಸ್ ಸುಲಭವಾಗಿ ಫೈನಲ್ ಪ್ರವೇಶಿಸಿದರು.

ಅಮೆರಿಕದ ಟೇಲರ್ ಫ್ರಿಟ್ಜ್ ಎದುರಿನ ಕ್ವಾರ್ಟರ್‌ಫೈನಲ್ ಪಂದ್ಯದ ವೇಳೆ ನಡಾಲ್, ಹೊಟ್ಟೆಯ ಸ್ನಾಯುಸೆಳೆತಕ್ಕೆ ಒಳಗಾಗಿದ್ದರು. ಆದ್ದರಿಂದ ಅವರು ಆಡದಿರಲು ನಿರ್ಧರಿಸಿದರು.

ನಡಾಲ್ ಗುರುವಾರ ಮಧ್ಯಾಹ್ನ ಕೆಲಹೊತ್ತು ಅಭ್ಯಾಸ ನಡೆಸಿದರು. ಆದರೆ ಸಂಜೆಯ ವೇಳೆ ಸುದ್ದಿಗೋಷ್ಠಿ ನಡೆಸಿ ಸೆಮಿಫೈನಲ್‌ನಿಂದ ಹಿಂದೆ ಸರಿಯುವ ತೀರ್ಮಾನ ಪ್ರಕಟಿಸಿದರು.

'ನಡಾಲ್ ಹೊಟ್ಟೆಯ ಸ್ನಾಯುವಿನಲ್ಲಿ 7 ಮಿ.ಮೀ. ನಷ್ಟು ಗಾಯ ಆಗಿರುವುದು ಸ್ಕ್ಯಾನಿಂಗ್‌ನಲ್ಲಿ ತಿಳಿದುಬಂದಿದೆ' ಎಂದು ಸ್ಪೇನ್‌ನ ಮಾಧ್ಯಮಗಳು ವರದಿ ಮಾಡಿದ್ದವು.



ಆನ್ಸ್ ಜಬೇರ್ ಚೆಂಡನ್ನು ಹಿಂದಿರುಗಿಸಿದ ಕ್ಷಣ –ಎಎಫ್‌ಪಿ ಚಿತ್ರ

ವಿಂಬಲ್ಡನ್‌ಗೆ ಸಾನಿಯಾ ವಿದಾಯ

ವಿಂಬಲ್ಡನ್‌ನಲ್ಲಿ ಕೊನೆಯ ಬಾರಿ ಆಡುತ್ತಿರುವ ಭಾರತದ ಸಾನಿಯಾ ಮಿರ್ಜಾ ಅವರ ಪಯಣ ಸೆಮಿಫೈನಲ್ ಸೋಲಿನೊಂದಿಗೆ ಕೊನೆಗೊಂಡಿತು.

ಸಾನಿಯಾ ಮತ್ತು ಕ್ರೊಯೇಷ್ಯಾದ ಮಾಟೆ ಪಾವಿಚ್ ಜೋಡಿ ಮಿಶ್ರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ 6-4 5-7 4-6 ರಲ್ಲಿ ಬ್ರಿಟನ್‌ನ ನೀಲ್ ಸ್ಕುಪ್‌ಸ್ಕಿ ಮತ್ತು ಅಮೆರಿಕದ ಡೆಸಿರೆ ಕ್ರಾಚಿಕ್ ಎದುರು ಸೋತರು.

ಈ ವರ್ಷದ ಕೊನೆಯಲ್ಲಿ ನಿವೃತ್ತಿಯಾಗುವುದಾಗಿ 35 ವರ್ಷದ ಸಾನಿಯಾ ಈಗಾಗಲೇ ಪ್ರಕಟಿಸಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಮಿಶ್ರ ಡಬಲ್ಸ್ ಕಿರೀಟ ಜಯಿಸಬೇಕೆಂಬ ಅವರ ಕನಸು ಕೊನೆಗೂ ಈಡೇರಲಿಲ್ಲ.

ಸಾನಿಯಾ ಅವರು ಆಸ್ಟ್ರೇಲಿಯನ್ ಓಪನ್ (2009 ರಲ್ಲಿ ಮಹೇಶ್ ಭೂಪತಿ ಜೊತೆ), ಫ್ರೆಂಚ್ ಓಪನ್ (2012ರಲ್ಲಿ ಭೂಪತಿ ಜೊತೆ) ಮತ್ತು ಯುಎಸ್ ಓಪನ್‌ನಲ್ಲಿ (2014 ರಲ್ಲಿ ಬ್ರೆಜಿನ್‌ನ ಬ್ರುನೊ ಸೊರೇಸ್ ಜೊತೆ) ಮಿಶ್ರ ಡಬಲ್ಸ್‌ನಲ್ಲಿ ಚಾಂಪಿಯನ್ ಅಗಿದ್ದರು. ವಿಂಬಲ್ಡನ್ ಮಿಶ್ರ ಡಬಲ್ಸ್‌ನಲ್ಲಿ ಅವರಿಗೆ ಯಶಸ್ಸು ದೊರೆತಿಲ್ಲ.

ಕ್ವಾರ್ಟರ್‌ಗೆ ಸಿಂಧು, ಪ್ರಣಯ್

ಮಲೇಷ್ಯಾ ಬ್ಯಾಡ್ಮಿಂಟನ್: ಪಿ.ಕಶ್ಯಪ್, ಪ್ರಣೀತ್ ಪರಾಭವ

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸಿಂಧು 21-12, 21-10 ರಲ್ಲಿ ಚೀನಾದ ಜಾಂಗ್ ಯಿ ಮಾನ್ ವಿರುದ್ಧ ಗೆದ್ದರು.

ಏಳನೇ ಶ್ರೇಯಾಂಕದ ಸಿಂಧು ಎರಡೂ ಗೇಮ್‌ಗಳಲ್ಲಿ ಶಿಸ್ತಿನ ಆಟವಾಡಿ 28 ನಿಮಿಷಗಳಲ್ಲಿ ಜಯಿಸಿದರು. ಭಾರತದ ಆಟಗಾರ್ತಿಗೆ ಮುಂದಿನ ಸುತ್ತಿನಲ್ಲಿ ಕಠಿಣ ಸವಾಲು ಕಾದಿದ್ದು, ವಿಶ್ವದ ಎರಡನೇ ರ‍್ಯಾಂಕ್‌ನ ಆಟಗಾರ್ತಿ ಚೀನಾ ತೈಪೆಯ ತಾಯ್ ಜು ಯಿಂಗ್ ವಿರುದ್ಧ ಸೆಣಸುವರು.

ಇವರಿಬ್ಬರು ಇದುವರೆಗೆ 21 ಸಲ ಪೈಪೋಟಿ ನಡೆಸಿದ್ದು, ಸಿಂಧು ಐದು ಪಂದ್ಯಗಳಲ್ಲಿ ಮಾತ್ರ ಗೆದ್ದಿದ್ದಾರೆ. ಇನ್ನುಳಿದ 16 ಪಂದ್ಯಗಳಲ್ಲಿ ತಾಯ್ ಜು ಪ್ರಭುತ್ವ ಸಾಧಿಸಿದ್ದಾರೆ. ಕಳೆದ ವಾರ ನಡೆದ ಮಲೇಷ್ಯಾ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸಿಂಧು, ಇದೇ ಎದುರಾಳಿಗೆ ಮಣಿದಿದ್ದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಭರವಸೆ ಎನಿಸಿರುವ ಪ್ರಣಯ್, 21-19, 21-16 ರಲ್ಲಿ ಚೀನಾ ತೈಪೆಯ ವಾಂಗ್ ಜು ವೀ ಅವರನ್ನು ಮಣಿಸಿದರು. ಪ್ರಣಯ್ ಅವರು ಬಿರುಸಿನ ಸ್ಮ್ಯಾಷ್ ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಕಶ್ಯಪ್‌ಗೆ ನಿರಾಸೆ: ಪಿ.ಕಶ್ಯಪ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ 16ರ ಘಟ್ಟದ ತಡೆ ದಾಟುವಲ್ಲಿ ವಿಫಲರಾದರು. ಅವರು 10-21, 15-21 ರಲ್ಲಿ ಆರನೇ ಶ್ರೇಯಾಂಕದ ಆಟಗಾರ ಇಂಡೊನೇಷ್ಯಾದ ಆಂಥೋನಿ ಸಿನಿಸುಕ ಗಿಂತಿಂಗ್‌ಗೆ ಮಣಿದರು.

34 ನಿಮಿಷ ನಡೆದ ಹೋರಾಟದಲ್ಲಿ ಕಶ್ಯಪ್, ಎದುರಾಳಿಗೆ ತಕ್ಕ ಪೈಪೋಟಿ ನೀಡುವಲ್ಲಿ ಎಡವಿದರು. ಸಾಕಷ್ಟು ಸ್ವಯಂಕೃತ ತಪ್ಪುಗಳನ್ನು ಮಾಡಿ ಸೋಲಿನ ಹಾದಿ ಹಿಡಿದರು.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಆಟಗಾರ ಬಿ.ಸಾಯಿ ಪ್ರಣೀತ್ 14-21, 17-21 ರಲ್ಲಿ ಚೀನಾದ ಲಿ ಶಿಫೆಂಗ್ ಎದುರು ಸೋತರು. ಈ ಹೋರಾಟ 42 ನಿಮಿಷ ನಡೆಯಿತು.



ಪಿ.ವಿ.ಸಿಂಧು ಆಟದ ವೈಖರಿ –ಪಿಟಿಐ ಚಿತ್ರ



ಅರ್ಧಶತಕ ಗಳಿಸಿದ ಹಾರ್ದಿಕ್ ಪಾಂಡ್ಯ –ಎಎಫ್‌ಪಿ ಚಿತ್ರ

ಟಿ20: ಇಂಗ್ಲೆಂಡ್‌ಗೆ ಸವಾಲಿನ ಗುರಿ ನೀಡಿದ ಭಾರತ

ಹಾರ್ದಿಕ್, ಸೂರ್ಯಕುಮಾರ್ ಆಸರೆ

ಸೌಥಾಂಪ್ಟನ್ (ಪಿಟಿಐ): ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಭಾರತ ತಂಡ ಮೊದಲ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವಿಗೆ ಸವಾಲಿನ ಗುರಿ ನೀಡಿದೆ.

ಸೌಥಾಂಪ್ಟನ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ರೋಹಿತ್ ಶರ್ಮ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 198 ರನ್ ಗಳಿಸಿತು.

ಹಾರ್ದಿಕ್ (51 ರನ್, 33 ಎ, 4X6, 6X1) ಅರ್ಧಶತಕದ ಮೂಲಕ ಮಿಂಚಿದರೆ, ಸೂರ್ಯಕುಮಾರ್ (39 ರನ್, 19 ಎ, 4X4, 6X2) ಮತ್ತು ದೀಪಕ್ ಹೂಡಾ (33 ರನ್, 17 ಎ, 4X3, 6X2) ಬಿರುಸಿನ ಆಟವಾಡಿದರು.

ನಾಯಕ ರೋಹಿತ್ (24 ರನ್, 14 ಎ, 4X5) ಮತ್ತು ಇಶಾನ್ ಕಿಶನ್ (8 ರನ್, 10 ಎ.) ಮೊದಲ ವಿಕೆಟ್‌ಗೆ 29 ರನ್ ಸೇರಿಸಿದರು. ಬಿರುಸಿನ ಆರಂಭ ಪಡೆದಿದ್ದ ರೋಹಿತ್ ಅವರು ಮೊಯೀನ್ ಅಲಿ ಬೌಲಿಂಗ್‌ನಲ್ಲಿ ಬಟ್ಲರ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ತಮ್ಮ ಮುಂದಿನ ಓವರ್‌ನಲ್ಲಿ ಅಲಿ, ಇಶಾನ್ ವಿಕೆಟ್ ಪಡೆದರು.

ಈ ವೇಳೆ ಜತೆಯಾದ ಹೂಡಾ ಮತ್ತು ಸೂರ್ಯಕುಮಾರ್, ಎದುರಾಳಿ ಬೌಲರ್‌ಗಳಿಗೆ ಮೇಲುಗೈ ಸಾಧಿಸಲು ಅವಕಾಶ ನೀಡಲಿಲ್ಲ. ಹೂಡಾ ಔಟಾದ ಬಳಿಕ ಬಂದ ಪಾಂಡ್ಯ, ಆಕ್ರಮಣಕಾರಿ ಆಟವಾಡಿದರು. ಸೂರ್ಯಕುಮಾರ್ ಜತೆ ನಾಲ್ಕನೇ ವಿಕೆಟ್‌ಗೆ 37 ರನ್ ಹಾಗೂ ಐದನೇ ವಿಕೆಟ್‌ಗೆ ಅಕ್ಷರ್ ಪಟೇಲ್ (17, 12ಎ) ಜತೆ 45 ರನ್‌ಗಳ ಜತೆಯಾಟ ನೀಡಿದರು.

ಕೊನೆಯ ಮೂರು ಓವರ್‌ಗಳಲ್ಲಿ ಭಾರತ 20 ರನ್ ಮಾತ್ರ ಗಳಿಸಿತು. ಇದರಿಂದ ಸ್ಕೋರ್ 200ರ ಗಡಿ ದಾಟಲಿಲ್ಲ.

ಸಂಕ್ಷಿಪ್ತ ಸ್ಕೋರ್: ಭಾರತ 8ಕ್ಕೆ 198 (20 ಓವರ್) ರೋಹಿತ್ ಶರ್ಮ 24, ಇಶಾನ್ ಕಿಶನ್ 8, ದೀಪಕ್ ಹೂಡಾ 33, ಸೂರ್ಯಕುಮಾರ್ ಯಾದವ್ 39, ಹಾರ್ದಿಕ್ ಪಾಂಡ್ಯ 51, ಅಕ್ಷರ್ ಪಟೇಲ್ 17, ದಿನೇಶ್ ಕಾರ್ತಿಕ್ 11, ಮೊಯೀನ್ ಅಲಿ 26ಕ್ಕೆ 2, ಕ್ರಿಸ್ ಜೋರ್ಡನ್ 23ಕ್ಕೆ 2, (ವಿವರ ಅಪೂರ್ಣ)

ಕಾಮನ್‌ವೆಲ್ತ್ ಕ್ರೀಡಾಕೂಟ: ಭಾರತ ತಂಡದಲ್ಲಿ 215 ಸ್ಪರ್ಧಿಗಳು

ನವದೆಹಲಿ (ಪಿಟಿಐ): ಇದೇ ತಿಂಗಳು ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ 215 ಅಥ್ಲೀಟ್‌ಗಳ ಭಾರತ ತಂಡವನ್ನು ಗುರುವಾರ ಪ್ರಕಟಿಸಲಾಗಿದೆ.

ಜುಲೈ 28ರಿಂದ ಬರ್ಮಿಂಗ್‌ಹ್ಯಾಮ್‌ನಲ್ಲಿ ಕೂಟ ಆರಂಭವಾಗಲಿದೆ. ಭಾರತ ಒಲಿಂಪಿಕ್ ಸಮಿತಿ (ಐಒಎ)ಯ ಹಂಗಾಮಿ ಅಧ್ಯಕ್ಷ ಅನಿಲ್ ಖನ್ನಾ ಪ್ರಕಟಿಸಿರುವ ತಂಡದಲ್ಲಿ 108 ಪುರುಷರು ಮತ್ತು 107 ಮಹಿಳೆಯರು ಸ್ಥಾನ ಪಡೆದಿದ್ದಾರೆ. ಇವರಲ್ಲದೇ 72 ಮಂದಿ ಅಧಿಕಾರಿಗಳು, 26 ಹೆಚ್ಚುವರಿ ಅಧಿಕಾರಿಗಳು, ಮೂವರು ವ್ಯವಸ್ಥಾಪಕರು ಸೇರಿದಂತೆ ಒಂಬತ್ತು ಸಿಬ್ಬಂದಿ ಕೂಡ ಬಳಗದಲ್ಲಿದ್ದಾರೆ.

ಒಟ್ಟು 16 ಕ್ರೀಡಾ ವಿಭಾಗಗಳಲ್ಲಿ ಭಾರತ ತಂಡವು ಸ್ಪರ್ಧಿಸಲಿದೆ. ಅಥ್ಲೆಟಿಕ್ಸ್ ಮತ್ತು ಹಾಕಿ ವಿಭಾಗಗಳಲ್ಲಿ ತಲಾ 36 ಅಥ್ಲೀಟ್‌ಗಳು ಭಾಗವಹಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಕೂಟದಲ್ಲಿ ಮಹಿಳಾ ಕ್ರಿಕೆಟ್ ಕೂಡ ನಡೆಯಲಿದೆ. ಭಾರತ ತಂಡವು ಆಡಲಿದೆ. ಈಜು, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಬಾಕ್ಸಿಂಗ್, ಸೈಕ್ಲಿಂಗ್, ಜಿಮ್ನಾಸ್ಟಿಕ್ಸ್, ಟ್ರಯಥ್ಲಾನ್, ವೇಟ್‌ಲಿಫ್ಟಿಂಗ್, ಲಾನ್ ಬಾಲ್ಸ್, ಸ್ಕ್ವಾಷ್, ಜೂಡೊ ಮತ್ತು ಪ್ಯಾರಾ ಕ್ರೀಡೆಗಳ ಅಥ್ಲೀಟ್‌ಗಳಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರು ಪಥಸಂಚಲನದಲ್ಲಿ ಭಾರತ ತಂಡದ ಧ್ವಜಧಾರಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ನೀರಜ್ ಚೋಪ್ರಾ

'ಆಸ್ಟ್ರೇಲಿಯಾ ಸವಾಲಿಗೆ ಸಿದ್ಧ'

ನವದೆಹಲಿ (ಪಿಟಿಐ): 'ಈ ಬಾರಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಸ್ಟ್ರೇಲಿಯಾದ ಸವಾಲು ಎದುರಿಸಲು ನಮ್ಮ ತಂಡ ಸಜ್ಜಾಗಿದೆ' ಎಂದು ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ.

'ನಾವಿಬ್ಬರು (ಭಾರತ ಮತ್ತು ಆಸ್ಟ್ರೇಲಿಯಾ) ಒಂದೇ ಗುಂಪಿನಲ್ಲಿ ಇಲ್ಲದಿದ್ದರೂ, ನಾಕೌಟ್ ಹಂತದಲ್ಲಿ ಪರಸ್ಪರ ಎದುರಾಗುವ ಸಾಧ್ಯತೆಯಿದೆ. ಆಸ್ಟ್ರೇಲಿಯಾ ತಂಡದ ಶಕ್ತಿ ಮತ್ತು ದೌರ್ಬಲ್ಯಗಳನ್ನು ಅರಿಯುವ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಭಾರತ ಹಾಕಿ ತಂಡಕ್ಕೆ ಕಿಟ್ ಹಸ್ತಾಂತರಿಸಲು ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ತಿಳಿಸಿದರು.

'ಕಳೆದ ಒಂದು ವರ್ಷದ ಅವಧಿಯಲ್ಲಿ ನಾವು ಅವರ ಜತೆ ಆಡಿಲ್ಲ. ಆಸ್ಟ್ರೇಲಿಯಾ ಬಲಿಷ್ಠ ತಂಡ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವರಿಗೆ ಗೋಲು ಗಳಿಸಲು ಹೆಚ್ಚಿನ ಅವಕಾಶ ನೀಡದೆ, ನಮಗೆ ದೊರೆಯುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರೆ ಗೆಲುವು ಸಾಧ್ಯ' ಎಂದು ಅಭಿಪ್ರಾಯಪಟ್ಟರು.



ಸೌರವ್ ಗಂಗೂಲಿ ಮತ್ತು ಸಚಿನ್ ತೆಂಡೂಲ್ಕರ್

ಗಂಗೂಲಿಗೆ 50ನೇ ಜನ್ಮದಿನ ಸಂಭ್ರಮ

ನವದೆಹಲಿ (ಪಿಟಿಐ): ಸೌರವ್ ಗಂಗೂಲಿ ಅದ್ಭುತ ನಾಯಕ. ತಂಡದಲ್ಲಿ ಆಟಗಾರರಿಗೆ ಯಾವ ರೀತಿಯಲ್ಲಿ ಸ್ವಾತಂತ್ರ್ಯ ಕೊಡಬೇಕು ಹಾಗೂ ಅವರಿಗೆ ಜವಾಬ್ದಾರಿಗಳನ್ನು ಹಂಚಬೇಕೆಂಬುದರ ಸ್ಪಷ್ಟ ಅರಿವು ಅವರಿಗೆ ಇತ್ತು ಎಂದು ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಹೇಳಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಗಂಗೂಲಿ ಶುಕ್ರವಾರ 50ನೇ ವಸಂತಕ್ಕೆ ಕಾಲಿರಿಸಲಿದ್ದಾರೆ. ಈ ಸಂದರ್ಭದಲ್ಲಿ ಸಚಿನ್ ತಮ್ಮ ಹಾಗೂ ಸೌರವ್ ಒಡನಾಟವನ್ನು ನೆನಪಿಸಿಕೊಂಡರು. ಭಾರತ ತಂಡದಲ್ಲಿ ಆಡುವಾಗ ಸೌರವ್ ಮತ್ತು ಸಚಿನ್ ಹಲವು ಪಂದ್ಯಗಳಲ್ಲಿ ಇನಿಂಗ್ಸ್ ಆರಂಭಿಸಿದ್ದರು. ಯಶಸ್ವಿ ಆರಂಭಿಕ ಜೋಡಿಯೂ ಆಗಿದ್ದರು.

'ಸೌರವ್ ತಂಡದ ನಾಯಕತ್ವ ವಹಿಸಿಕೊಂಡಾಗ ಭಾರತ ಕ್ರಿಕೆಟ್ ಕ್ಷೇತ್ರ ಮಗ್ಗಲು ಬದಲಿಸಿತು. ಭಾರತದ ಕ್ರಿಕೆಟ್ ಅನ್ನು ಉನ್ನತಮಟ್ಟಕ್ಕೆ ಬೆಳೆಸುವ ಯುವಪಡೆಯನ್ನು ಸಿದ್ಧಗೊಳಿಸುವತ್ತ ನಮ್ಮ ಚಿತ್ತ ಇತ್ತು. ಆ ಹಾದಿಯಲ್ಲಿ ದಾದಾ (ಸೌರವ್) ಪ್ರಯತ್ನ ದೊಡ್ಡದು. ಈ ಹಂತದಲ್ಲಿ ವೀರೇಂದ್ರ ಸೆಹ್ವಾಗ್, ಯುವರಾಜ್ ಸಿಂಗ್, ಜಹೀರ್ ಖಾನ್, ಹರಭಜನ್ ಸಿಂಗ್, ಆಶಿಶ್ ನೆಹ್ರಾ ಅವರಂತಹ ಪ್ರತಿಭಾವಂತರು ಲಭಿಸಿದರು. ಎಷ್ಟೇ ಪ್ರತಿಭೆಯಿದ್ದರೂ ಪ್ರೋತ್ಸಾಹ ನೀಡುವ ದಿಟ್ಟ ನಾಯಕತ್ವ ಬೇಕಾಗುತ್ತದೆ. ಯುವ ಆಟಗಾರರ ಬೆನ್ನಿಗೆ ಗಂಗೂಲಿ ನಿಂತರು' ಎಂದರು.

'1999ರಲ್ಲಿ ಆಸ್ಟ್ರೇಲಿಯಾ ಪ್ರವಾಸದಲ್ಲಿ ತಂಡಕ್ಕೆ ನಾನು ನಾಯಕನಾಗಿದ್ದೆ. ಆ ಸಂದರ್ಭದಲ್ಲಿ ನಾನು ನಾಯಕತ್ವ ಬಿಟ್ಟುಕೊಡಲು ನಿರ್ಧರಿಸಿದ್ದೆ. ಆದ್ದರಿಂದ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಗಂಗೂಲಿಯನ್ನು ಉಪನಾಯಕರನ್ನಾಗಿ ಮಾಡಲು ಸಲಹೆ ನೀಡಿದ್ದೆ. ಅವರಲ್ಲಿ ನಾಯಕತ್ವದ ಗುಣಗಳು ಮತ್ತು ಕ್ರಿಕೆಟ್ ಅರಿವು ಚೆನ್ನಾಗಿರುವುದ ಕುರಿತು ಬಹಳ ಹತ್ತಿರದಿಂದ ಗಮನಿಸಿ ತಿಳಿದಿದ್ದೆ. ಅವರು ಭವಿಷ್ಯದಲ್ಲಿ ಉತ್ತಮ ನಾಯಕರಾಗಿ ಬೆಳೆದರು' ಎಂದು ಸಚಿನ್ ನೆನಪಿಸಿಕೊಂಡರು.